
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಜೂನ್ 16, 2010 ರೂ. 12/-



ಚೆಸ್ ಆನಂದ್‌ನ ವಿಸ್ಮಯ ಕತೆ




ಯಡವಟ್ಟು ಸರ್ಕಾರಕ್ಕೆ ಎರಡು ವರ್ಷ



ಶೃಂಗೇರಿ ಜೀವರಾಜ್ ದಿನೇಶ್ ಸಹಭೋಜನ!




ಹರಿಪ್ರಸಾದ್‌ಗೆ ದೇವೇಗೌಡ ಕಿರಿಕ್!



ನೊಬೆಲ್‌ಗಾಗಿ ಶೂಟ್ ಔಟ್ ನಾಟಕ

ಕುಸಿಯುತ್ತಿರುವ ನಕ್ಸಲರ ಕೋಟೆ


ಆಧುನಿಕವಾಗದ ಭಾರತದಲ್ಲಿ ಅಂತರ್ಜಾತಿ ವಿವಾಹಗಳ ಇತಿ ಮತ್ತು ಮಿತಿ



ಭಾರತದ ಆರ್ಥಿಕ ಅಭಿವೃದ್ಧಿಯ ಗತಿ ಈ ಸಾಲಿನಲ್ಲಿ ಶೇ.8 ನ್ನು ಮೀರುತ್ತದೆ ಎಂದು ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿ ಹೇಳಿದ ದಿನವೇ ಆಂಧ್ರ ಪ್ರದೇಶ ಮತ್ತು ಹರ್ಯಾಣ ರಾಜ್ಯಗಳಲ್ಲಿ ಅಂತರ್ಜಾತಿ ಮದುವೆ ಆಗಿದ್ದಕ್ಕಾಗಿ ಎರಡು ಜೋಡಿಗಳನ್ನು ಹಳ್ಳಿಗರು ಕೊಂದುಹಾಕಿದ್ದಾರೆ. ಇದೇ ಭಾರತದ ಆಧುನಿಕತೆಯ ಅಸಲಿ ಸ್ವರೂಪ. ಆಧುನಿಕತೆಯು ಭಾರತೀಯರ ಆಡಂಬರ, ವೈಭವ, ವಿನ್ಯಾಸ, ಕಟ್ಟಡ, ವೆಚ್ಚ ಇವುಗಳಲ್ಲಿ ಹಲವು ವ್ಯತ್ಯಾಸಗಳನ್ನು ತಂಧಿದ್ದರೂ ಸಾಮಾಜಿಕ ಮೌಲ್ಯಗಳಲ್ಲಿ ಮತ್ತು ವ್ಯಕ್ತಿಗತ ನಂಬಿಕೆಗಳಲ್ಲಿ ಮಾತ್ರ ಯಾವುದೇ ಆಧುನಿಕತೆ ಯನ್ನು ತಂದಿಲ್ಲ. ಭಾರತದ ಆರ್ಥಿಕತೆ ಶೇ.8ರ ಅಭಿವೃದ್ಧಿ ಕಾಣುತ್ತಿದೆ ಎಂದು ಹೇಳಿಕೊಳ್ಳುತ್ತಿರುವ ಸಂದರ್ಭದಲ್ಲೇ ಆಧುನಿಕ ಭಾರತದ ಸಾಮಾಜಿಕ ಮೌಲ್ಯಗಳು ಮಾತ್ರ ಶೇ.1ರಷ್ಟೂ ಪ್ರಗತಿ ಕಾಣದಿರುವುದು ಭಾರತದ ಹಲವು ವೈರುಧ್ಯಗಳಲ್ಲಿ ಒಂದು.

ಈ ವೈರುಧ್ಯಗಳು ಎದ್ದು ಕಾಣುವುದು ಮದುವೆ ಮುಂತಾದ ಖಾಸಗಿ ಬದುಕಿನಲ್ಲಿ. ನಮ್ಮ ಆಧುನಿಕ ಯುವ ಜನಾಂಗ ಯಾವ ರೀತಿ ಯೋಚಿಸುತ್ತಿದೆ ಎಂಬುದರಲ್ಲಿ, ಏಕೆಂದರೆ ಈ ದೇಶದ ಪ್ರಗತಿಯನ್ನು ತಡೆಹಿಡಿಯುವುದರಲ್ಲಿ ಅತಿ ದೊಡ್ಡ ಪಾತ್ರ ವಹಿಸಿರುವುದು ಜಾತಿಪದ್ಧತಿ. ಹೀಗಾಗಿ ಅಂಬೇಡ್ಕರ್ ಆದಿಯಾಗಿ ಈ ದೇಶದ ಜಾತಿಪದ್ಧತಿಯ ಬಗ್ಗೆ ನಿಜವಾದ ಕಾಳಜಿಯುಳ್ಳ ಎಲ್ಲಾ ಸಾಮಾಜಿಕ ಸುಧಾರಕರು ಜಾತಿವಿನಾಶಕ್ಕೆ ಅಂತರ್ಜಾತಿ ವಿವಾಹಗಳು ಒಂದು ಉತ್ತಮ ದಾರಿಯಾಗುತ್ತದೆ ಎಂದು ಭಾವಿಸಿದ್ದರು. ಮಾತ್ರವಲ್ಲ, ಆಧುನಿಕತೆ ಮತ್ತು ಪ್ರಗತಿಯ ಹಾದಿಯಲ್ಲಿ ದೇಶ ಮುಂದುವರೆಯುತ್ತಿದ್ದಂತೆ ಸಹಜವಾಗಿಯೇ ಹೆಚ್ಚೆಚ್ಚು ಅಂತರ್ಜಾತಿ ಮದುವೆಗಳು ಸಂಭವಿಸಬಹುದೆಂದು ನಿರೀಕ್ಷಿಸಲಾಗಿತ್ತು,

ಜಾಗತೀಕರಣದ ದಾರಿಯಲ್ಲಿ ದಾಪುಗಾಲು ಹಾಕುತ್ತಿರುವ ಭಾರತದ ಸಮಾಜದಲ್ಲಿ 1991ರ ನಂತರ ಹಲವಾರು ಬದಲಾವಣೆಗಳು ಸಂಭವಿಸುತ್ತಿದೆ. ಬಡವ-ಶ್ರೀಮಂತರ ನಡುವೆ ಅಪಾರ ಧ್ರುವೀಕರಣ ಸಂಭವಿಸುತ್ತಿರುವ ಕಾಲಘಟ್ಟದಲ್ಲೇ ಎಲ್ಲಾ ಜಾತಿಗಳಲ್ಲಿ ಒಂದು ಮೇಲ್‌ಚಲನೆಯುಳ್ಳ ಒಂದು ಸಣ್ಣ ಮಧ್ಯಮ ವರ್ಗವೂ ಹುಟ್ಟಿಕೊಳ್ಳುತ್ತಿದೆ. ಇದು ಏಕಕಾಲದಲ್ಲಿ ಜಾಗತೀಕರಣದ ಫಲಾನುಭವಿಯೂ ಮತ್ತು ಜಾತಿತಾರತಮ್ಯದ ಬಲಿಪಶುವೂ ಆಗಿರುವ ವರ್ಗವಾಗಿದೆ. ಅದೇ ರೀತಿಯಲ್ಲಿ ನಗರೀಕರಣ, ಸಾಫ್ಟ್‌ವೇರ್ ಮಧ್ಯಮ ವರ್ಗವೂ ದೊಡ್ಡ ರೀತಿಯಲ್ಲಿ ಹುಟ್ಟಿಕೊಂಡು ಈ ಹಿಂದೆ ಭಾರತೀಯ ಸಮಾಜ ಕಾಣದಿದ್ದ ಹಲವು ಬಗೆಯ ಸ್ವಚ್ಛಂದ ಜೀವನ ಶೈಲಿಗಳು ಹಲವಾರು ದೊಡ್ಡ ನಗರಗಳಲ್ಲಿ ಈಗ ಚಾಲ್ತಿಯಲ್ಲಿವೆ. ಆದರೆ ಈ ಸ್ವಚ್ಛಂದತೆ, "ಹೊಸ" ಜೀವನಶೈಲಿಗಳು, ಪ್ರತಿ ಕ್ಷಣ ಜಗತ್ತಿನ ನಾಗರಿಕರೆಂಬ ಭಾವ ಮೂಡಿಸುವ ಸಾಫ್ಟ್‌ವೇರ್‌ನಂಥ ಆಧುನಿಕ ವೃತ್ತಿ ಸಂದರ್ಭಗಳು ಜಾತಿಯ ಗೋಡೆಗಳನ್ನು ಮುರಿದಿದ್ದಾವೆಯೇ? ಕನಿಷ್ಟ ಈ ಭಾರತದ ಆಧುನಿಕತೆಯ ಸಂಕೇತವಾದ ಈ ಕ್ಷೇತ್ರದಲ್ಲಾದರೂ ಜಾತಿ ಅಸ್ತಿತ್ವ ಕಳೆದುಕೊಂಡಿದೆಯೇ? ಭಾರತದಲ್ಲಿ ರೂಪುಗೊಳ್ಳುತ್ತಿರುವ "ಆಧುನಿಕತೆ" ಎಷ್ಟರ ಮಟ್ಟಿಗೆ ಆಧುನಿಕ ಎಂದು ಅರ್ಥಮಾಡಿಕೊಳ್ಳಲು ಈ ಪ್ರಶ್ನೆ ಅತ್ಯಂತ ಅಗತ್ಯ.





ಇದೇ ಪ್ರಶ್ನೆಯನ್ನು ಮುಂದಿಟ್ಟುಕೊಂಡು **National Institute Of Advanced Studies (NIAS)** ಡಾ.ವಾಸವಿ ಮತ್ತವರ ತಂಡ 600 ಜನ ಸಾಫ್ಟ್‌ವೇರಿಗರನ್ನು ಸಂದರ್ಶನ ಮಾಡಿ **"Work, Culture and Sociality in Indian IT industry"** ಎಂಬ ಅಧ್ಯಯನವನ್ನು ಪ್ರಕಟಿಸಿದ್ದಾರೆ. ಈ ಅಧ್ಯಯನ 'ಸಾಫ್ಟ್‌ವೇರ್ ಆಧುನಿಕರ' ಬಗ್ಗೆ ನಮಗೆ ಇದ್ದ ಹಲವು ಮಿಥ್ಯೆಗಳನ್ನು ಹೊಡೆದು ಹಾಕಿದೆ. 1. ಸಾಫ್ಟ್‌ವೇರಿಗರು ಜಂಟಿ ಕುಟುಂಬವನ್ನು ಇಷ್ಟ ಪಡುತ್ತಾರೆ. ಭಾರತೀಯ "ಸಂಪ್ರದಾಯಿಕ" ಮೌಲ್ಯಗಳನ್ನು ಕೌಟುಂಬಿಕ ಬದುಕಿನಲ್ಲಿ ಎತ್ತಿ ಹಿಡಿಯುತ್ತಾರೆ. 2. ಮದುವೆಯ ಸಂದರ್ಭ ಬಂದಾಗ ಅವರು ತಮ್ಮ ತಮ್ಮ ನಡುವೆ ಸ್ವಜಾತಿ ಮದುವೆಯನ್ನೇ ಬಯಸುತ್ತಾರೆಯೇ ವಿನಃ ಅಂತರ್ಜಾತಿ ಮದುವೆಗಳನ್ನಲ್ಲ, ಆ ಅಧ್ಯಯನಕ್ಕೆ ನಡೆಸಿದ ಸಂದರ್ಶನದಲ್ಲಿ ಕಂಡುಕೊಂಡಂತೆ ಬ್ರಾಹ್ಮಣರು ಶೇ.99.99 ರಷ್ಟು ಬ್ರಾಹ್ಮಣರನ್ನೇ ಮದುವೆಯಾಗಿದ್ದಾರೆ (ಸಂದರ್ಶಿತರಲ್ಲಿ ಒಬ್ಬ ಬ್ರಾಹ್ಮಣರು ಮಾತ್ರ ಅಂತರ್ಜಾತಿ ವಿವಾಹಿತರಂತೆ. ಆದ್ದರಿಂದ ಶೇ.100 ಅಲ್ಲ!). ಶೇ. 100ರಷ್ಟು ವೈಶ್ಯರು ವೈಶ್ಯರನ್ನೇ, ಶೇ.100ರಷ್ಟು ಮುಸ್ಲಿಮರು ಮುಸ್ಲಿಮರನ್ನೇ.. ಅಷ್ಟು ಮಾತ್ರವಲ್ಲ, ದಿನನಿತ್ಯ ಜಗತ್ತು ಎಷ್ಟು ಸಣ್ಣದು ಎಂಬುದು ತಮ್ಮ ಅನುಭವಕ್ಕೇ ಬರುತ್ತಿದ್ದರೂ ಶೇ.90ರಷ್ಟು ಕನ್ನಡಿಗರು ಕನ್ನಡಿಗರನ್ನೇ, ಶೇ. 88 ರಷ್ಟು ತಮಿಳರನ್ನೇ ಮದುವೆಯಾಗುತ್ತಾರಂತೆ. ತೆಲುಗರಲ್ಲಿ ಮಾತ್ರ ಇದು ಸ್ವಲ್ಪ ಕಡಿಮೆ. ಅವರಲ್ಲಿ ಶೇ.29 ರಷ್ಟು ತೆಲುಗರಲ್ಲದವರನ್ನು ಮದುವೆಯಾಗುತ್ತಾರೆ. ಅಲ್ಲದೆ ಶೇ. 68ರಷ್ಟು ಜನ ಲವ್ ಮ್ಯಾರೇಜ್‌ನಲ್ಲಿ ನಂಬಿಕೆ ಇಲ್ಲದವರು. ಉಳಿದವರಲ್ಲಿ ಶೇ.28ರಷ್ಟು ಜನ **"self arranged marriage"** ಮಾಡಿಕೊಂಡವರು!

ಇದು ಸಾಫ್ಟ್‌ವೇರ್ ಆಧುನಿಕರ ಕಥೆಯಾದರೆ ಭಾರತದಲ್ಲೇ ಅತಿ ದೊಡ್ಡ ವಿವಾಹ ಜೋಡಿ ಕುದುರಿಸುವ ವೆಬ್‌ಸೈಟ್ ಜೀವನ್‌ಸಾಥಿ ಡಾಟ್ ಕಾಮ್ ಎಂಬ ಸಂಸ್ಥೆಯ ನಿರ್ದೇಶಕ ಇತ್ತೀಚೆಗೆ ಸಂದರ್ಶನವೊಂದರಲ್ಲಿ ನೀಡಿದ ವಿವರಗಳು ಇನ್ನಷ್ಟು ಕಣ್ಣು ತೆರೆಸುವಂತಿವೆ. ಈ ವೆಬ್‌ಸೈಟಿಗೆ 60 ಲಕ್ಷಕ್ಕೂ ಹೆಚ್ಚು ಜನ ಚಂದಾದಾರರಿದ್ದಾರೆ. ಈ ವೆಬ್‌ಸೈಟಿನ ಸಹಾಯದಿಂದ ವರ್ಷಕ್ಕೆ ಏನಿಲ್ಲವೆಂದರೂ ಹಲವು ಸಹಸ್ರ ಮದುವೆಗಳು ನಡೆಯುತ್ತವಂತೆ! ಇವರೆಲ್ಲಾ ಭಾರತದ ನವ ಆಧುನಿಕ ಜನಾಂಗವೇ ಎಂಬುದರಲ್ಲಿ ಸಂಶಯವಿಲ್ಲ. ಈ ವೆಬ್‌ಸೈಟಿನ ನಿರ್ದೇಶಕರ ಪ್ರಕಾರ ಅವುಗಳಲ್ಲಿ ಶೇ.95ರಷ್ಟು ಜನ ತಮ್ಮ ಭಾವೀ ಸಂಗಾತಿಯ ಜಾತಿ, ಒಳಜಾತಿ ಇವುಗಳನ್ನು ಖಾತರಿಪಡಿಸಿಕೊಂಡೇ ಮದುವೆಯಾಗುತ್ತಾರೆ. ಅಷ್ಟೇ ಏಕೆ, ಇಂದು ಎಲ್ಲಾ ದಿನಪತ್ರಿಕೆಗಳು ಪ್ರಕಟಿಸುವ ವಧುವರರ ಹುಡುಕಾಟದ ಮ್ಯಾಟ್ರೀಮೋನಿಯಲ್ ಕಾಲಂನಲ್ಲಂತೂ ಅತ್ಯಂತ ಉನ್ನತ ಶಿಕ್ಷಣ ಪಡೆದ, ಅತ್ಯಂತ ಉನ್ನತ ಸಂಬಳ ಪಡೆಯುತ್ತಿರುವ ಯುವಜನರು ನಾಚಿಕೆ ಇಲ್ಲದೆ ತಮ್ಮದೇ ಜಾತಿಯ ಮಾತ್ರವಲ್ಲ, ಒಳಜಾತಿಯ ಸಂಗಾತಿಗಳೇ ಬೇಕೆಂದು ಕೋರುತ್ತಾರೆ!

ಅಂತರ್ಜಾತಿ ಮದುವೆಗಳ ಬಗೆಗೆ ನಡೆದ ಮತ್ತೊಂದು ಅಧ್ಯಯನವು ಇನ್ನಷ್ಟು ಕಣ್ಣು ತೆರೆಸುವಂತಿದೆ. ಇದು 2006ರಲ್ಲಿ ನಡೆದ ಅಧ್ಯಯನವಾಗಿದ್ದು **Natinal Family Health Survey (NFHS)** ಯಿಂದ ಪಡೆದುಕೊಂಡ ಮಾಹಿತಿಗಳನ್ನು ಆಧರಿಸಿದೆ. ಈ ಸರ್ವೆಯು ಭಾರತದಾದ್ಯಂತ 43,012 ವಿವಾಹಿತ ಮಹಿಳೆಯರ ಜಾತಿಹಿನ್ನೆಲೆ, ಮದುವೆಯ ರೀತಿ ಇತ್ಯಾದಿಗಳನ್ನು ಪರಿಗಣಿಸಿದೆ. ಇದರಲ್ಲಿ 29 ರಾಜ್ಯಗಳನ್ನೂ ಪರಿಗಣಿಸಲಾಗಿದೆ. ಈ ಸ್ಯಾಂಪಲ್ಲಿನಲ್ಲಿ ಶೇ.11 ರಷ್ಟು ಮದುವೆಗಳು ಅಂತರ್ಜಾತಿ ವಿವಾಹಗಳು. ಇದರಲ್ಲಿ ಮೇಲ್ಜಾತಿ ಮಹಿಳೆಯರು ಕೆಳಜಾತಿ ಯುವಕರನ್ನು ಮದುವೆಯಾದ ಪ್ರಕರಣವು ಕೆಳಜಾತಿ ಮಹಿಳೆಯರನ್ನು ಮೇಲ್ಜಾತಿ ಪುರುಷರು ಮದುವೆಯಾದ ಪ್ರಕರಣಕ್ಕಿಂತ ಹೆಚ್ಚು, ಆದೇ ರೀತಿ ಕರ್ನಾಟಕ (ಶೇ.16), ಮಹಾರಾಷ್ಟ್ರ (ಶೇ.17) ಮತ್ತು ಹರ್ಯಾಣ (ಶೇ.18)ದಲ್ಲಿ ಅಂತರ್ಜಾತಿ ಮದುವೆಗಳು ಸಾಪೇಕ್ಷವಾಗಿ ಹೆಚ್ಚು, ಅತ್ಯಂತ ಕಡಿಮೆ ಅಂತರ್ಜಾತಿ ವಿವಾಹದ ಪ್ರಕರಣಗಳು ಸಂಭವಿಸಿರುವುದು ಬ್ರಾಹ್ಮಣ್ಯದ ವಿರುದ್ಧ ಅತಿ ದೊಡ್ಡ ಹೋರಾಟ ನಡೆದ ಮತ್ತು ದಕ್ಷಿಣ ಭಾರತದಲ್ಲಿ ಅತಿ ಹೆಚ್ಚು ನಗರೀಕರಣಕ್ಕೆ ಒಳಗಾದ ತಮಿಳುನಾಡಿನಲ್ಲಿ (ಶೇ.2.9)! ಇಷ್ಟು ಮಾತ್ರವಲ್ಲದೆ ಈ ಅಧ್ಯಯನವು ಇನ್ನೂ ಕೆಲವು ಅಂಶಗಳತ್ತ ಬೆಳಕು ಚೆಲ್ಲುತ್ತದೆ. 1. ಹೆಚ್ಚು ಶಿಕ್ಷಣ ಪಡೆದ ಮಹಿಳೆಯರು ಹೆಚ್ಚೆಚ್ಚು ಸ್ವಜಾತಿ ಮದುವೆಯತ್ತ ಒಲವು ತೋರುತ್ತಾರೆ. 2. ಹೆಚ್ಚೆಚ್ಚು ಮಾಧ್ಯಮಗಳನ್ನು ನೋಡುವ, ಓದುವ ಮಹಿಳೆಯರು ಅಂತರ್ಜಾತಿ ಮದುವೆಗಳನ್ನು ಮಾಡಿಕೊಳ್ಳುವ ಸಂದರ್ಭ ಕಡಿಮೆ. ಹೀಗೆ ಆಧುನಿಕ ಮನಸ್ಥಿತಿಯನ್ನು ರೂಪಿಸಬೇಕಾದ ಶಿಕ್ಷಣ ಮತ್ತು ಮಾಧ್ಯಮಗಳೆರಡೂ ಅಂತರ್ಜಾತಿ ಮದುವೆಗಳಿಗೆ ಸಂಬಂಧಪಟ್ಟಂತೆ ವ್ಯತಿರಿಕ್ತ ಪರಿಣಾಮವನ್ನೇ ಬೀರುತ್ತಿದೆ ಎಂಬುದು ಇದರಿಂದ ಸಾಬೀತಾಗುತ್ತದೆ.

ಈ ಹಿನ್ನೆಲೆಯಲ್ಲಿ **National Crime Records Bureau** ವರದಕ್ಷಿಣೆ ಸಾವಿನ ಬಗ್ಗೆ ನೀಡಿರುವ ಕೆಲವು ಅಂಕಿಅಂಶಗಳೂ ಸಹ ಯುವ ಜನಾಂಗದ ಆಧುನಿಕ ಮನಸ್ಥಿತಿಯ ಬಗ್ಗೆ ಒಂದಷ್ಟು ವಿವರಣೆಯನ್ನು ನೀಡುತ್ತದೆ. ಕೇಂದ್ರ ಸರ್ಕಾರದ ಸಂಸ್ಥೆಯಾದ ಈ ಬ್ಯೂರೋವಿನ ಅಂಕಿಅಂಶಗಳ ಪ್ರಕಾರ 1985ರಲ್ಲಿ ದೇಶದಾದ್ಯಂತ 600 ಮಹಿಳೆಯರು ವರದಕ್ಷಿಣೆ ಕಿರುಕುಳಕ್ಕೆ ಬಲಿಯಾದರು. ಆದರೆ 2008ರಲ್ಲಿ ವರದಕ್ಷಿಣೆ ಸಾವಿಗೆ ತುತ್ತಾದವರ ಸಂಖ್ಯೆ 6000 ಕ್ಕೇರಿತು. ಅದರಲ್ಲಿ ಬೆಂಗಳೂರಂತೂ ಭಾರತದ ವರದಕ್ಷಿಣೆ ಸಾವಿನ ರಾಜಧಾನಿ! ಇಲ್ಲಿ ಪ್ರತಿವರ್ಷ 700ಕ್ಕೂ ಹೆಚ್ಚು ಆಧುನಿಕ ಮಹಿಳೆಯರನ್ನು ಆಧುನಿಕ ಯುವಕರು ವರದಕ್ಷಿಣೆ ತರಲಿಲ್ಲವೆಂದು ಸುಟ್ಟುಹಾಕುತ್ತಾರೆ.

ಇದು ಸಾರಾಂಶದಲ್ಲಿ ಭಾರತದ ಆಧುನಿಕತೆಯ ಸ್ವರೂಪ. ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಾಣುವಂತೆ ಆಧುನಿಕ ಶಿಕ್ಷಣವಾಗಲೀ, ಆಧುನಿಕ ಆರ್ಥಿಕತೆಯಾಗಲೀ, ಆಧುನಿಕ ಮಾಧ್ಯಮಗಳಾಗಲೀ ಆಧುನಿಕ ಮೌಲ್ಯಗಳನ್ನು ತರುವ ಬದಲಿಗೆ ಹಳೆಯ ಸಾಂಪ್ರದಾಯಿಕ ಮೌಲ್ಯಗಳೊಂದಿಗೆ ರಾಜಿಯಾಗುತ್ತಿದೆ. ಆದ್ದರಿಂದಲೇ ಅವು ಜಾತಿಯನ್ನು ಸಡಿಲಗೊಳಿಸುವ ಬದಲು ಮತ್ತೊಂದು ರೀತಿಯಲ್ಲಿ ಗಟ್ಟಿಗೊಳಿಸುತ್ತಿವೆ.

ಸೀಮಿತ ರೀತಿಯಲ್ಲಿ ನಡೆಯುತ್ತಿರುವ ಅಂತರ್ಜಾತಿ ಮದುವೆಗಳೂ ಸಹ ತಮ್ಮ ವೈಯಕ್ತಿಕ ಮತ್ತು ಕೌಟುಂಬಿಕ ನೆಲೆಯಲ್ಲಾದರೂ ಜಾತಿಯನ್ನು ಮುರಿಯುತ್ತಿಲ್ಲ. ಈ ವಾದಕ್ಕೆ ಹಲವು ನೆಮ್ಮದಿ ನೀಡುವಂಥ ಅಪವಾದಗಳಿರುವುದು ನಿಜ. ಆದರೆ ಒಟ್ಟಾರೆಯಾಗಿ ನೋಡುವುದಾದರೆ ಈ ಅಂತರ್ಜಾತಿ ಮದುವೆಗಳಾಗುತ್ತಿರುವ ಸಂದರ್ಭ ಮತ್ತು ರೀತಿಗಳು ಜಾತಿಯನ್ನು ನಿಜಕ್ಕೂ ಮುರಿಯುವ ಉದ್ದೇಶವನ್ನೇ ಹೊಂದಿಲ್ಲ ಎನ್ನುವುದೇ ವಾಸ್ತವ. ಒಂದು ಅಂಕಿಅಂಶ ಹೇಳುವಂತೆ ಇಂದು ಭಾರತದಲ್ಲಿ 6000 ಅಂತರ್ಜಾತಿ ಮದುವೆಗಳಾಗುತ್ತಿವೆ. ಇದರಲ್ಲಿ ಈಗಾಗಲೇ ನೋಡಿದಂತೆ ಮೇಲ್ಜಾತಿ ಮಹಿಳೆಯರನ್ನು ಕೆಳಜಾತಿ ಪುರುಷರು ಮದುವೆಯಾಗುತ್ತಿರುವ ಸಂದರ್ಭವೇ ಹೆಚ್ಚು, ಜಾಗತೀಕರಣದ ಫಲಾನುಭವೀ ಮಧ್ಯಮ ವರ್ಗವೊಂದು ಎಲ್ಲಾ ಜಾತಿ ಮತ್ತು ಸಮುದಾಯಗಳಲ್ಲಿ ಸೃಷ್ಟಿಯಾಗುತ್ತಿದ್ದು ನಗರದ ಸಂದರ್ಭದಲ್ಲಿ ಬಹುಪಾಲು ಅಂತರ್ಜಾತಿ ಮದುವೆಗಳಾಗುತ್ತಿರುವುದು ಈ ಮೇಲ್ಚಸೆ ಪಡೆದ ಕೆಳಜಾತಿಯ ಮಧ್ಯಮ ವರ್ಗಕ್ಕೂ ಮತ್ತು ಮೇಲ್ಜಾತಿ ಮಧ್ಯಮ ಅಥವಾ ಮೇಲ್ ಮಧ್ಯಮ ವರ್ಗದ ನಡುವೆ. ಆದರೆ ಈ ವರ್ಗ ರೂಪುಗೊಳ್ಳುತ್ತಿರುವುದೇ ಪ್ರಗತಿಪರ ಮೌಲ್ಯಗಳ ಮತ್ತು ಚಳವಳಿಗಳ ಅವನತಿಗೊಂಡು ಸಮುದಾಯಗಳು ಸತ್ತರೂ

▶▶ 15

ನೋ ಕಾಮೆಂಟ್ಸ್

"ವಾಯುದಾಳಿಯ ಉದ್ದೇಶವೇ ಶತ್ರು ಪಾಳಯದಲ್ಲಿ ಅತಿ ಹೆಚ್ಚು ಹಾನಿಯನ್ನು ಉಂಟುಮಾಡುವುದು. ವಾಯುಪಡೆಗೆ ಸಾಂಪ್ರದಾಯಿಕ ಯುದ್ಧಗಳಲ್ಲಿ ಮಾತ್ರ ತರಬೇತಿಯನ್ನು ನೀಡಲಾಗಿರುತ್ತದೆ. ಅವರು ನಿರ್ದಿಷ್ಟ ಟಾರ್ಗೆಟ್ ಅನ್ನು ಗುರಿ ಮಾಡಿ ನಾಶ ಮಾಡಬಲ್ಲವರು. ಅಂಥಾ ವಾಯುಪಡೆಯನ್ನು ನಕ್ಸಲ್ ವಿರೋಧಿ ಕಾರ್ಯಾಚರಣೆಗೆ ಹೇಗೆ ಬಳಸಲು ಸಾಧ್ಯ? ನಕ್ಸಲರು ಮತ್ತು ಆದಿವಾಸಿಗಳು ಬೇರೆಬೇರೆಯಾಗಿಯೇನೂ ವಾಸಿಸುವುದಿಲ್ಲ, ಯಾವ ದೇಶವೂ ತನ್ನ ಜನರ ಮೇಲೆ ಕಾರ್ಪೆಟ್ ಬಾಂಬಿಂಗ್ ಮಾಡಲು ಸಾಧ್ಯವಿಲ್ಲ."

- ಅಜಯ್ ಲೇಲೆ, ರಕ್ಷಣಾ ಅಧ್ಯಯನ ತಜ್ಞ

"ನೇಪಾಳ ಮಾವೋವಾದಿಗಳಿಗೆ ದೇಶಾದ್ಯಂತ ಗ್ರಾಮೀಣ ಮಟ್ಟದಿಂದಲೂ ಬಡಜನರ ಬೆಂಬಲವಿದೆ. ಆದರೆ ನೇಪಾಳದ ಇತರ ಎರಡು ಪ್ರಮುಖ ರಾಜಕೀಯ ಶಕ್ತಿಗಳಾದ ನೇಪಾಳ ಕಾಂಗ್ರೆಸ್ ಮತ್ತು ಯುಎಂಎಲ್ ಪಕ್ಷಗಳಿಗೆ ಬುಡಮಟ್ಟದಲ್ಲಿ ಜನರ ಬೆಂಬಲವಿಲ್ಲ. ಹೀಗಾಗಿ ಅವರು ಭಾರತ ಸರ್ಕಾರದ ಮತ್ತು ನೇಪಾಳಿ ಸೇನೆಯ ಬೆಂಬಲವನ್ನು ಅರಸುವ ಮೂಲಕ ಶಕ್ತಿವಂತರಾಗಲು ಪ್ರಯತ್ನಿಸುತ್ತಿದ್ದಾರೆ."

- 'ದಿ ಹಿಂದೂ' ಪತ್ರಿಕೆಯ ಸಂಪಾದಕೀಯದಲ್ಲಿ

"ಇರಾಕ್‌ನಲ್ಲಿರುವ ಅಮೆರಿಕ ಸೈನಿಕರಲ್ಲಿ ಆತ್ಮಹತ್ಯಾ ಪ್ರವೃತ್ತಿ ತೀವ್ರವಾಗಿ ಬೆಳೆಯುತ್ತಿದೆ. ಅಮೆರಿಕದ ಹೊರಗಡೆ ಅಮೆರಿಕದ 16 ಲಕ್ಷ ಸೈನಿಕರು ವಿವಿಧ ಕಾರ್ಯಾಚರಣೆಯಲ್ಲಿ ತೊಡಗಿಕೊಂಡಿದ್ದರೆ ಅವರಲ್ಲಿ 3 ಲಕ್ಷ ಸೈನಿಕರು ಫೋ- **Trauma Stress Disorder (PTSD)** ಎಂಬ ತೀವ್ರತರದ ಮಾನಸಿಕ ವ್ಯಾಧಿಗೆ ತುತ್ತಾಗಿದ್ದಾರೆ. ಇದರಿಂದಾಗಿ 2006ರಲ್ಲಿ 136 ಸೈನಿಕರು ಆತ್ಮಹತ್ಯೆ ಮಾಡಿಕೊಂಡಿದ್ದರೆ, 2008ರಲ್ಲಿ ಆ ಸಂಖ್ಯೆ 150ಕ್ಕೇರಿತ್ತು."

- ದಹರ್ ಜನ್ಮಾಲ್, ಅಮೆರಿಕನ್ ಪತ್ರಕರ್ತ


"ಅಲ್ಪಸಂಖ್ಯಾತರ ಹಕ್ಕು ರಕ್ಷಿಸಬೇಕಿರುವ ಚುನಾಯಿತ ಸರ್ಕಾರ ಮೈಮರೆತರೆ ಸಂವಿಧಾನಾತ್ಮಕವಾಗಿ ರಾಜ್ಯಪಾಲರ ತಾಖತ್ ಏನೆಂಬುದನ್ನು ತೋರಿಸಬೇಕಾಗುತ್ತದೆ."

- ರಾಜ್ಯಪಾಲ ಭಾರದ್ವಾಜ್

ನಂಬಿದ್ರೆನಂಬಿ ಬಿಟ್ರೆಬಿಡಿ


"ಪ್ರವಾಹ ಸಂತ್ರಸ್ತರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವಲ್ಲಿ ನಾವು ವಿಫಲರಾಗಿದ್ದೇವೆ. ನಮ್ಮ ಬೇಜವಾಬ್ದಾರಿತನದಿಂದಾಗಿ ಪ್ರವಾಹ ಸಂತ್ರಸ್ತರಿಗೆ ಮನೆಗಳನ್ನು ನಿರ್ಮಿಸಿಕೊಡಲು ಸಾಧ್ಯವಾಗಿಲ್ಲ."

- ಸಚಿವ ಶ್ರೀರಾಮುಲು



"ಅನೇಕ ದೇಶಗಳ ಅಧ್ಯಕ್ಷರು, ರಾಜರು, ಮಂತ್ರಿಗಳು ಇಂದಿಗೂ ಚಿತ್ರ ನಟ ಅಂಬರೀಶ್‌ಗೆ ಪರಮಾಪ್ತರು."

- 'ಹಾಯ್ ಬೆಂಗಳೂರ್' ಟಿಪ್ಪಣಿಯೊಂದರಲ್ಲಿ



"ನಾನು ಮಾಡುತ್ತಿರುವ ಸಾಂತ್ವನ ಯಾತ್ರೆಗೆ ಯಾವುದೇ ರಾಜಕೀಯ ಉದ್ದೇಶಗಳಿಲ್ಲ. ನನ್ನ ತಂದೆ ರಾಜಶೇಖರರೆಡ್ಡಿಯವರ ನಿಧನದ ಸುದ್ದಿ ಕೇಳಿ ಆಘಾತದಿಂದ ಮೃತಪಟ್ಟವರ ಕುಟುಂಬಕ್ಕೆ ಸಾಂತ್ವನ ಹೇಳಲಷ್ಟೇ ಈ ಯಾತ್ರೆ."

- ಜಗನ್, ರಾಜಶೇಖರ ರೆಡ್ಡಿ ಪುತ್ರ

"ನಾನು ಹಲವಾರು ಉಗ್ರಗಾಮಿಗಳಿಗೆ ಶಾಂತಿ ಬೋಧಿಸಿದ್ದೇನೆ. ನಕ್ಸಲರಿಗೆ, ಕಾಶ್ಮೀರಿ ಉಗ್ರರಿಗೆ, ಇರಾಕಿನ ಜನರಿಗೆ.. ಹೀಗಾಗಿ ಅವರಲ್ಲೇ ಯಾರಾದರೂ ಅಥವಾ ನಕ್ಸಲರು ನನ್ನ ಹತ್ಯೆಗೆ ಪ್ರಯತ್ನಿಸಿರಬಹುದು."

- 'ರವಿಶಂಕರ ಸ್ವಾಮೀಜಿ

ಕಳ್ಳು ಕುಡಿಸಿ ಮಂಕು ಕವಿದಿದೆ ಎಂದರೆ ಹೇಗೆ ಸ್ವಾಮಿ?

"ಪ್ರಶ್ನೆ ಇರುವುದು ಗ್ರಾಮ ಪಂಚಾಯತಿ ಚುನಾವಣೆ ಎಷ್ಟು ಭ್ರಷ್ಟಗೊಂಡಿದೆ ಎಂಬುದಲ್ಲ, ಹಳ್ಳಿಯ ಜನರಿಗೆ ಯಾವ ಮಂಕು ಕವಿದಿದೆ ಎಂಬುದು."


- ಸರ್ಜಾಶಂಕರ ಹರಳಿಮಠ

ಜಾತಿ ಮಠಗಳಿಗೆ ಒಪ್ಪುತ್ತೀರಿ!

"ಜಾತಿವಾರು ಜನಗಣತಿಗೆ ನಮ್ಮ ಪಕ್ಷ ಒಪ್ಪುವುದಿಲ್ಲ."

- ಯಡಿಯೂರಪ್ಪ

ಇಸ್ರೇಲ್‌ನ ಗೂಂಡಾಗಿರಿ ಭಾರತದ ದಾದಾಗಿರಿ



ಕಂಡಹಾಗೆ

■ ಗೌರಿ ಲಂಕೇಶ್
editorlankesh@gmail.com

ಗೂಂಡಾ ಪ್ರವೃತ್ತಿಯ ಇಸ್ರೇಲ್ ದೇಶ ಮತ್ತೆ ತನ್ನ ...ದಾಗಿರಿಯನ್ನು ಪ್ರದರ್ಶಿಸಿದೆ. ಗಾಜಾ ಪ್ರದೇಶದಲ್ಲಿ ಇಸ್ರೇಲ್ ...ದಿಂದ ದಿಗ್ಬಂಧನಕ್ಕೆ ಗುರಿಯಾಗಿರುವ ಲಕ್ಷಾಂತರ ...ಲೆಸ್ಟೀನಿಯರಿಗೆ ಅತ್ಯಗತ್ಯವಾಗಿ ಬೇಕಿರುವ ವಸ್ತುಗಳನ್ನು ...ಗುಗಳ ಮೂಲಕ ತೆಗೆದುಕೊಂಡು ಹೋಗುತ್ತಿದ್ದ ...ತಿಪ್ರಿಯರ ಮೇಲೆ ದಾಳಿ ನಡೆಸಿದ ಇಸ್ರೇಲ್ ಸೈನಿಕರು ...ತ್ತಾರು ಜನರನ್ನು ಕೊಂದು ಹಾಕಿದ್ದಾರೆ. ಅದೂ ಅಂತಿಂತಹ ...ಯಲ್ಲ. ಎಲ್ಲಾ ಅಂತರರಾಷ್ಟ್ರೀಯ ನಿಯಮಗಳನ್ನು ...ರಿದು ಇಸ್ರೇಲ್ ವ್ಯಾಪ್ತಿಗೆ ಬಾರದ ಪ್ರದೇಶದಲ್ಲಿ ...ಡಿರುವ ದಾಳಿ; ಶಾಂತಿ ಬಯಸುವ, ಅಸ್ತ್ರಗಳನ್ನು ...ಂದಿರದ, ಶರಣಾಗತರಾಗಿ ಬಿಳಿ ಬಾವುಟ ಹಾರಿಸಿದ ...ಾಯಕ ಜನರ ಮೇಲೆ ನಡೆಸಿದ ದಾಳಿ. ಇಸ್ರೇಲ್ ...ದೆ ಇಂತಹ ದಾಳಿಯನ್ನು ಬೇರೆ ಯಾವ ದೇಶ ...ಡಿದ್ದರೂ ಇಷ್ಟು ಹೊತ್ತಿಗಾಗಲೇ ಅಮೆರಿಕ ಕೆಂಡ ...ತ್ತಿತ್ತು. ಅಮೆರಿಕ ಸಾಕಿರುವ ನಾಯಿಮರಿಯಂತಿರುವ



...ಗ್ಲೆಂಡ್ ಮತ್ತು ಇತರೆ ದೇಶಗಳ ನೆರವು ಪಡೆದು ಆ ...ಕೋರ ದೇಶದ ವಿರುದ್ಧ ದಿಗ್ಬಂಧನವನ್ನು ಹೇರುತ್ತಿತ್ತು. ...ಕ್ಕೂ ಬಗ್ಗದಿದ್ದರೆ, ಮಾನವಹಕ್ಕುಗಳ ನೆರವಿಗೆಂದೂ, ...ಾಪ್ರಭುತ್ವದ ರಕ್ಷಣೆಗೆಂದೂ, ಭಯೋತ್ಪಾದನೆಯನ್ನು ...ಯಲೆಂದೂ.... ಅಂತೂ ಎಂಥದ್ದೋ ಒಂದು ನೆಪವೊಡ್ಡಿ ...ದಾಳಿಕೋರ ದೇಶದ ವಿರುದ್ಧ ಯುದ್ಧ ಸಾರಿರುತ್ತಿತ್ತು. ...ಆದರೆ ಈ ಅಮಾನುಷ ದಾಳಿ ಮಾಡಿದ್ದು ಇಸ್ರೇಲ್ ...ಶವಾದ್ದರಿಂದ ಅಮೆರಿಕ ಅಂತಹದ್ದು ಏನನ್ನೂ ಮಾಡಿಲ್ಲ. ...ಲಾಗಿ ಇಸ್ರೇಲ್‌ನ ರಕ್ಷಣೆಗೆ ಅಮೆರಿಕ ಟೊಂಕಕಟ್ಟಿ ...ಿದೆ.

1948 ರಲ್ಲಿ ಇಸ್ರೇಲ್ ದೇಶ ಸೃಷ್ಟಿಯಾದಾಗಿನಿಂದಲೂ ...ಪ್ರದೇಶದಲ್ಲಿ ವಾಸಿಸುತ್ತಿದ್ದ ಪ್ಯಾಲಸ್ಟೀನಿಯರ ಬದುಕು ...ಸದೃಶವಾಗಿದೆ. ಅದರಲ್ಲೂ ಇತ್ತೀಚೆಗೆ 2008-09 ...ನಡೆದ ಗಾಜಾ ಯುದ್ಧದ ನಂತರ ಅಲ್ಲಿನ ಜನರ ...ಷ್ಟಗಳಿಗೆ ಅಂತ್ಯವೇ ಇಲ್ಲ ಎಂಬಂತಾಗಿದೆ. ಪ್ಯಾಲೆಸ್ಟೀನಿನ ...ಪ್ರದೇಶಗಳನ್ನು ಆಕ್ರಮಿಸಿಕೊಂಡು, ಅಲ್ಲಿ ಮುಸಲ್ಮಾನ ...ಲೆಸ್ಟೀನಿಯರಿಗೆ ನೆಲೆಯೇ ಇಲ್ಲದಂತೆ ಮಾಡುವ ಗುರಿ ...ಲಿನ ಯಹೂದಿಯರದ್ದಾಗಿದೆ. ಅಂತಹ ಒಂದು ...ುತ್ತನವೇ ಗಾಜಾ ಮೇಲೆ ಈಗ ಇಸ್ರೇಲ್ ಹೇರಿರುವ ...ಂಧನ.

...ಇತ್ತೀಚಿನ ಗಾಜಾ ಯುದ್ಧದಲ್ಲಿ ಪ್ಯಾಲೇಸ್ಟೀನಿನ ...ನೂರು ಏಳು ಸಾವಿರ ಮನೆಗಳು ನಾಶಗೊಂಡಿವೆ ...ವಾ ಮುರುಕಲಾಗಿವೆ. ಆ ಕಟ್ಟಡಗಳನ್ನು ರಿಪೇರಿ ...ಡಲು ಅವರಿಗೆ ಸಿಮೆಂಟ್ ಈಗ ಅಗತ್ಯವಾಗಿದೆ. ...ಟ್ಟೇ ಅಲ್ಲ, ಸಿಮೆಂಟ್ ಇಲ್ಲದೆ ಅವರು ಅಲ್ಲಿ ...ಸಿಸುವುದೇ ಅಸಾಧ್ಯವೆನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ...ರೆ ಅವರೆಲ್ಲ ಅಲ್ಲಿರುವುದೇ ಇಸ್ರೇಲ್‌ಗೆ ಬೇಡವಾದ್ದರಿಂದ ...ಜಾ ಪ್ರದೇಶಕ್ಕೆ ಸಿಮೆಂಟ್ ಅನ್ನು ತೆಗೆದುಕೊಂಡು ...ೋಗುವುದನ್ನು ನಿಷೇಧಿಸಿದೆ.

...ತಲೆ ಮೇಲೆ ಸೂರೂ ಇಲ್ಲದೆ, ಹೊಟ್ಟೆಗೆ ಆಹಾರವಿಲ್ಲದೆ, ...ಷ್ಟು ಔಷಧಿಗಳೂ ಇಲ್ಲದೆ ಪ್ಯಾಲೆಸ್ಟೀನಿಯರ ...ಾಟವನ್ನು ನೋಡಲಾಗದೆ ಅವರಿಗೆ ನೆರವು ನೀಡಲು ...ವಿವಿಧ ದೇಶಗಳ ಶಾಂತಿಪ್ರಿಯರು ಮುಂದಾದರು. ಅವರೆಲ್ಲ ಸುಮಾರು 10,000 ಟನ್‌ಗಳಷ್ಟು ಆಹಾರ, ಔಷಧಿ ಮತ್ತು ಸಿಮೆಂಟ್ ಅನ್ನು ಸಂಗ್ರಹಿಸಿ ಆರು ಹಡಗುಗಳಲ್ಲಿ ಅವುಗಳನ್ನು ತೆಗೆದುಕೊಂಡು ಹೋಗಿ ಗಾಜಾಗೆ ತಲುಪಿಸಲು ನಿರ್ಧರಿಸಿದರು. ಮೊನ್ನೆ ಮೇ 31 ರಂದು 'ಗಾಜಾ ಫ್ರೀಡಂ ಫ್ಲೋಟಿಲ್ಲಾ' ಎಂಬ ಈ ಆರು ಹಡಗುಗಳ ಮೇಲೆಯೇ ಇಸ್ರೇಲಿ ಸೈನ್ಯ ದಾಳಿ ನಡೆಸಿ ಹತ್ತಾರು ಶಾಂತಿ ಪ್ರಿಯರನ್ನು, ಮಾನವತಾವಾದಿಗಳನ್ನು ನಿರ್ದಾಕ್ಷಿಣ್ಯವಾಗಿ ಕೊಂದು ಹಾಕಿದ್ದು.

ಆ ಆರು ಹಡಗುಗಳಲ್ಲಿ 50 ದೇಶಗಳ 663 ಸಾಮಾಜಿಕ ಕಾರ್ಯಕರ್ತರಿದ್ದರೂ ಅವರುಗಳಲ್ಲಿ ಯುರೋಪ್ ಮತ್ತು ಅರಬ್ ದೇಶಗಳ ಹಲವು ಸಂಸದರಿದ್ದರೂ, ಶಾಂತಿಗಾಗಿ ನೊಬೆಲ್ ಪ್ರಶಸ್ತಿ ಪಡೆದ ಐರ್‌ಲ್ಯಾಂಡ್‌ನ ಹೋರಾಟಗಾರ್ತಿ ಮೈರೀಡ್ ಕಾರಿಗನ್ ಇದ್ದರೂ, ವಿಶ್ವಸಂಸ್ಥೆಯ ಅಧಿಕಾರಿಗಳಿದ್ದರೂ ಅದರ ಮೇಲೆ ಮಾರಣಾಂತಿಕ ದಾಳಿ ಮಾಡುವಷ್ಟು ಹುಂಬತನವನ್ನು ಇಸ್ರೇಲ್ ತೋರುತ್ತದೆಂದರೆ ಅದರ ಸೊಕ್ಕು ಎಷ್ಟಿರಬೇಡ.

ಆ ಹಡಗುಗಳಲ್ಲಿದ್ದ ಎಲ್ಲರ ಉದ್ದೇಶ ಪ್ಯಾಲಿಸ್ಟೀನಿಯರಿಗೆ ಮಾನವೀಯ ನೆರವು ನೀಡಬೇಕೆಂಬುದಾಗಿತ್ತೇ ಹೊರತು ಇಸ್ರೇಲ್ ಮೇಲೆ ದಾಳಿ ಮಾಡುವುದಾಗಿರಲಿಲ್ಲ. ಆದರೆ ತಾನು ಹೇಳಿದ್ದಂತೆ ಎಲ್ಲರೂ ನಡೆದುಕೊಳ್ಳಬೇಕು, ತಾನು ಎಂತಹ ದೌರ್ಜನ್ಯ ನಡೆಸಿದರೂ ಅದನ್ನು ದಕ್ಕಿಸಿಕೊಳ್ಳುತ್ತೇನೆ ಎಂಬ ಧಿಮಾಕು ಫ್ಯಾಸಿಸ್ಟ್ ದೇಶವಾದ ಇಸ್ರೇಲ್‌ನದ್ದು.


ಪಾಪದ ಪ್ಯಾಲೆಸ್ಟೀನಿಯರ ಪರಿಸ್ಥಿತಿ ನೋಡಿ. ಕ್ರಿಶ್ಚಿಯನ್ ಧರ್ಮ ಜಗತ್ತಿನ ಬಹಳಷ್ಟು ದೇಶಗಳಲ್ಲಿ ನೆಲೆ ಊರಿದ ನಂತರ ಎಲ್ಲೆಲ್ಲೂ ನೂರಾರು ವರ್ಷಗಳ ಕಾಲ ಹಿಂಸೆ ಮತ್ತು ದೌರ್ಜನ್ಯಕ್ಕೆ ಗುರಿಯಾದ ಅಲೆಮಾರಿ ಯಹೂದಿಯರಿಗೆ ತಮ್ಮ ಭೂಮಿಯಲ್ಲಿ ನೆಲೆಸಲು ಅನುವು ಮಾಡಿಕೊಟ್ಟವರೇ ಪ್ಯಾಲೆಸ್ಟೀನಿಯರು. ಅದರಲ್ಲೂ ಹಿಟ್ಲರ್‌ನ ನಾಝಿ ಸೈನ್ಯಾಡಳಿತದಡಿ ನಡೆದ ಮಾರಣಹೋಮದಲ್ಲಿ ಅರವತ್ತು ಲಕ್ಷ ಯಹೂದಿಯರು ಅಸುನೀಗಿದರು. ಅಂತಹ ಯಹೂದಿ ಸಮುದಾಯವು ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಮತ್ತು ನೆಮ್ಮದಿಯ ಬದುಕನ್ನು ಸ್ಥಾಪಿಸಲು ಎರಡನೆ ಮಹಾಯುದ್ಧದ ನಂತರ ಅಮೆರಿಕಾ ಮತ್ತು ಯುರೋಪ್‌ನ ಕೆಲದೇಶಗಳ ನೆರವಿನೊಂದಿಗೆ ಇಸ್ರೇಲ್ ದೇಶವನ್ನೇ ಸೃಷ್ಟಿಸಿಕೊಂಡಿತು.

ಆದರಿವತ್ತು ಯಹೂದಿಯರು ಮಾಡುತ್ತಿರುವುದೇನನ್ನು. ಅಪಾರ ನೋವು, ನಷ್ಟ, ಅವಮಾನಗಳನ್ನು ಅನುಭವಿಸಿದ ಯಹೂದಿಯರು ಅದೆಲ್ಲದರಿಂದ ಮಾನವೀಯತೆಯನ್ನು ಕಲಿತಿರಬೇಕಿತ್ತು, ಆದರೆ ಅವರು ಇಂದು ಅದೇ ತರಹದ ನೋವು, ನಷ್ಟ ಮತ್ತು ಅವಮಾನಗಳನ್ನು ಅರಬ್ ಪ್ಯಾಲಸ್ಟೀನಿಯರ ಮೇಲೆ ಹೇರುತ್ತಿದ್ದಾರೆ. ಪ್ಯಾಲಸ್ಟೀನಿನ ಭೂಪ್ರದೇಶಗಳನ್ನು ಅಕ್ರಮವಾಗಿ ಆಕ್ರಮಿಸಿಕೊಂಡು ಅಲ್ಲಿಂದ ಅರಬ್ಬರನ್ನು ಒಕ್ಕಲೆಬ್ಬಿಸುತ್ತಿದ್ದಾರೆ.

ಬರಾಕ್ ಬಬಾಮಾ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಐದು ತಿಂಗಳ ನಂತರ ಈಜಿಪ್ಟ್‌ನ ಕೈರೋ ವಿಶ್ವವಿದ್ಯಾಲಯದಲ್ಲಿ ಮಾಡಿದ ಭಾಷಣದಲ್ಲಿ "ಇಸ್ರೇಲ್ ಮತ್ತು ಪ್ಯಾಲಸ್ಟೀನ್-ಎರಡೂ ದೇಶಗಳಿಗೆ ಅಸ್ತಿತ್ವದಲ್ಲಿರುವ ಹಕ್ಕುಗಳಿವೆ. ಪ್ಯಾಲಸ್ಟೀನಿನ ಪ್ರದೇಶವನ್ನು ಇಸ್ರೇಲ್ ಆಕ್ರಮಿಸಿಕೊಳ್ಳುವುದನ್ನು ಅಮೆರಿಕ ಒಪ್ಪುವುದಿಲ್ಲ. ಇಂತಹ ಆಕ್ರಮಣಗಳು ಎಲ್ಲ ಒಪ್ಪಂದಗಳನ್ನು ಉಲ್ಲಂಘಿಸುತ್ತವೆ ಮತ್ತು ಶಾಂತಿ ಸ್ಥಾಪನೆಗೆ ಅಡ್ಡಿಯಾಗುತ್ತವೆ. ಈ ಆಕ್ರಮಣವನ್ನು ನಿಲ್ಲಿಸಬೇಕಿದೆ" ಎಂದು ಸ್ಪಷ್ಟವಾಗಿ ಹೇಳುವ ಮೂಲಕ ಈ ಅಧ್ಯಕ್ಷನಾದರೂ ಪ್ಯಾಲಸ್ಟೀನಿಯರ ನೆರವಿಗೆ ಬರಬಹುದೆಂದೂ, ಇಸ್ರೇಲ್‌ನ ಇಂತಹ ಅನಾಚಾರಗಳನ್ನು ನಿಗ್ರಹಿಸಬಹುದೆಂದೂ ಆಶಿಸಲಾಗಿತ್ತು. ಆದರೆ ಮೊನ್ನಿನ ದಾಳಿ ನಂತರ ಬರಾಕ್ ಒಬಾಮಾ ಇಸ್ರೇಲ್ ವಿರುದ್ಧ ಚಕಾರವೆತ್ತಿಲ್ಲ. ಮಾತ್ರವಲ್ಲ, ವಿಶ್ವಸಂಸ್ಥೆಯ ರಕ್ಷಣಾ ಮಂಡಳಿಯು ಈ ದಾಳಿಯನ್ನು ಕುರಿತು "ಖಂಡನಾ ಹೇಳಿಕೆ ನೀಡಬೇಕೆಂದು" ಮತ್ತು "ನಿಷ್ಪಕ್ಷಪಾತ" ತನಿಖೆ ನಡೆಯಬೇಕೆಂದು ಹಲವು ಸದಸ್ಯ ದೇಶಗಳು ಮನವಿ ಮಂಡಿಸಿದಾಗ ಅದನ್ನು ಅಮೆರಿಕ ತಡೆಯಿತಲ್ಲದೆ, ಇಸ್ರೇಲ್ ಪರ ವಹಿಸಿತು!

ಅದಕ್ಕೆ ಕಾರಣವೂ ಇದೆ. ಬರಾಕ್ ಒಬಾಮಾ ಓರ್ವ ವ್ಯಕ್ತಿಯಾಗಿ ಅದೆಂತಹದ್ದೇ ಒಳ್ಳೆಯ ಅಭಿಪ್ರಾಯಗಳನ್ನು ಹೊಂದಿದ್ದರೂ, ಆತ ಅಮೆರಿಕದ ಅಧ್ಯಕ್ಷನಾದ ಕೂಡಲೇ ಆತನ ಕೈಕಾಲು, ಬಾಯಿಗಳನ್ನು ಯಹೂದಿಯರು ಕಟ್ಟಿ ಹಾಕುತ್ತಾರೆ. ಏಕೆಂದರೆ ಇವತ್ತಿಗೂ ಅಮೆರಿಕದ ಆಡಳಿತ ವ್ಯವಸ್ಥೆ ಆರ್ಥಿಕ ವಲಯ ಮತ್ತು ವಿವಿಧ ಪ್ರಮುಖ ಉದ್ಯಮಗಳ ಮೇಲೆ ಯಹೂದಿಯರೇ ಸಂಪೂರ್ಣ ಹಿಡಿತವನ್ನು ಹೊಂದಿದ್ದಾರೆ. ಅಂದರೆ ಯಹೂದಿಯರ ನೆರವು ಮತ್ತು ಆಶ್ರಯವಿಲ್ಲದೆ ಯಾವ ನಿರ್ಧಾರವನ್ನೂ ಅಮೆರಿಕದ ಸರ್ಕಾರ ತೆಗೆದುಕೊಳ್ಳುವಂತಿಲ್ಲ. ವಾಸ್ತವವಾಗಿ ಇಂತಹ ಬಲಿಷ್ಠ ಯಹೂದಿಯರ ಆರ್ಥಿಕ ಮತ್ತು ಸೈದ್ಧಾಂತಿಕ ಬಲದಿಂದಲೇ ಇಸ್ರೇಲ್ ಸೃಷ್ಟಿಯಾಗಿದ್ದು ಮತ್ತು ಇವತ್ತು ಪ್ಯಾಲಸ್ಟೀನಿನ ಅರಬ್ಬರ ಮೇಲೆ ದೌರ್ಜನ್ಯ ನಡೆಸುತ್ತಿರುವುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಅಮೆರಿಕದ ಸಂಕುಚಿತ ರೂಪವೇ ಇಸ್ರೇಲ್.

ಇನ್ನು ಈ ದಾಳಿ ಕುರಿತಂತೆ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವವಾದ ಭಾರತದ ಪಾತ್ರವಂತೂ ನಾಚಿಕೆ ತರಿಸುವಂತಿದೆ. 1947 ರಲ್ಲಿ ವಿಭಜನೆಗೊಂಡು ಅಪಾರ ಸಾವುನೋವುಗಳನ್ನು ಅನುಭವಿಸಿದ್ದ ಭಾರತ ಅದು ಅರಬ್ ಪ್ರದೇಶದಲ್ಲಿ ಮರುಕಳಿಸಬಾರದು ಎಂಬ ಕಾಳಜಿಯನ್ನು ಇಸ್ರೇಲ್ ಸೃಷ್ಟಿಯಾದಾಗ ವ್ಯಕ್ತಪಡಿಸಿತ್ತು. ಆದ್ದರಿಂದ ಅಲ್ಲಿ ಇಸ್ರೇಲ್ ಮತ್ತು ಪ್ಯಾಲಸ್ಟೀನ್ ಎಂಬ ಎರಡು ದೇಶಗಳ ಬದಲಾಗಿ ಯಹೂದಿಯರು ಮತ್ತು ಅರಬ್ಬರು ಈ ಎರಡೂ ಸಮುದಾಯಗಳು ವಾಸಿಸುವ ಪ್ರಾಂತಗಳಾಗಿರಲಿ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿತ್ತು. ಹಾಗೆಯೇ ಧರ್ಮಾಧಾರಿತ ದೇಶದ ಸ್ಥಾಪನೆಯನ್ನು ಒಪ್ಪದ ಜಾತ್ಯತೀತ ನಿಲುವನ್ನು



ಹೊಂದಿದ್ದ ಭಾರತ ಆ ಕಾರಣಕ್ಕಾಗಿಯೇ ಇಸ್ರೇಲ್‌ನೊಂದಿಗೆ ಅಧಿಕೃತ ಬಾಂಧವ್ಯವನ್ನು ಹೊಂದಿರಲು ನಿರಾಕರಿಸಿತು.

ಆದರೆ ಜಗತ್ತಿನ ಇಬ್ಬರು ದೊಡ್ಡಣ್ಣಗಳಲ್ಲಿ ಒಂದಾಗಿದ್ದ ರಷ್ಯಾ 1980 ರ ದಶಕದಲ್ಲಿ ಪತನಗೊಂಡಾಗ ಹಲವಾರು ದೇಶಗಳ ವಿದೇಶಾಂಗ ನೀತಿಗಳು ಬದಲಾದವು. ಭಾರತವು ಆಗ ಅಮೆರಿಕದ ಗುಲಾಮಗಿರಿಗೆ ಬಿದ್ದು ಇಸ್ರೇಲ್‌ನೊಂದಿಗೆ 1992 ರಲ್ಲಿ ಸಂಪರ್ಕವನ್ನು ಏರ್ಪಡಿಸಿಕೊಂಡಿತು.

ಆದರೆ ಇಸ್ರೇಲ್‌ನ ಯಹೂದಿಯರಷ್ಟೇ ಫ್ಯಾಸಿಸ್ಟರಾದ ಭಾರತೀಯ ಜನತಾ ಪಕ್ಷದ ನೇತೃತ್ವದಲ್ಲಿ ಎನ್‌ಡಿಎ ದೆಹಲಿಯಲ್ಲಿ ಅಧಿಕಾರ ಹಿಡಿದ ನಂತರ ಭಾರತ ಮತ್ತು ಇಸ್ರೇಲ್ ನಡುವಿನ ಬಾಂಧವ್ಯ ಹೆಚ್ಚಾಯಿತು. ಇವತ್ತು ಆ ಸಂಬಂಧ ಎಷ್ಟು ಗಟ್ಟಿಗೊಂಡಿದೆ ಎಂದರೆ ಇವೆರಡು ದೇಶಗಳು ಏಷ್ಯಾದಲ್ಲೇ "ಅತ್ಯಂತ ವಿಶ್ವಾಸಾರ್ಹ ಮತ್ತು ದೃಢವಾದ" ಸ್ನೇಹ ಹೊಂದಿರುವ ದೇಶಗಳಾಗಿವೆ. ಒಂದು ಸಮೀಕ್ಷೆಯ ಪ್ರಕಾರ ಏಷ್ಯಾದ 13 ದೇಶಗಳಲ್ಲಿ ಭಾರತವೇ ಅತಿಹೆಚ್ಚು ಇಸ್ರೇಲ್ ಪರ ನೀತಿ ಹೊಂದಿರುವ ದೇಶವಾಗಿದೆ. ಇಂತಹ ಗಳಸ್ಯ-ಕಂಟಸ್ಯ ಸಂಬಂಧಕ್ಕೆ ಬುನಾದಿ ಹಾಕಿರುವ ಅಂಶ ಯಾವುದು ಗೊತ್ತೆ? ಯುದ್ಧದ ಶಸ್ತ್ರಾಸ್ತ್ರಗಳು! ಮತ್ತು ಅಂತರ್ಗತವಾಗಿ ಹರಿಯುತ್ತಿರುವ ಮುಸ್ಲಿಂ ದ್ವೇಷ ಧಾರೆ! ಸಂಯುಕ್ತ ರಷ್ಯಾದ ನಂತರ ಭಾರತವೇ ಇಸ್ರೇಲ್‌ನೊಂದಿಗೆ ಅತಿಹೆಚ್ಚು ಸೈನ್ಯದ ಸಂಪರ್ಕವನ್ನು ಹೊಂದಿರುವ ದೇಶವಾಗಿದೆ. ಹಾಗೆಯೇ ಇಸ್ರೇಲ್‌ನಿಂದ ಯುದ್ಧದ ಶಸ್ತ್ರಾಸ್ತ್ರಗಳನ್ನು ಕೊಳ್ಳುತ್ತಿರುವ ಅತಿ ದೊಡ್ಡ ಗಿರಾಕಿ ಭಾರತವಾಗಿದೆ. ಒಂದು ಅಂದಾಜಿನ ಪ್ರಕಾರ 2009 ರಲ್ಲಿ ಭಾರತವು ಸುಮಾರು 9 ಬಿಲಿಯನ್ ಡಾಲರ್‌ಗಳಷ್ಟು ಶಸ್ತ್ರಾಸ್ತ್ರಗಳನ್ನು ಇಸ್ರೇಲ್‌ನಿಂದ ಖರೀದಿಸಿದೆ. ಅಂತಹ ಅಸ್ತ್ರಗಳನ್ನು ಇಂದು ಪ್ಯಾಲಸ್ಟೀನಿಯರ ವಿರುದ್ಧ ಹೇಗೆ ಇಸ್ರೇಲ್ ಬಳಸುತ್ತಿದೆಯೋ ಹಾಗೆಯೇ ಭಾರತ ಕೂಡ ಆ ಅಸ್ತ್ರಗಳನ್ನು ಕಾಶ್ಮೀರಿಗಳ ಮೇಲೆ, ಮಣಿಪುರಿಗಳ ಮೇಲೆ ಮತ್ತು ದಾಂತೆವಾಡದ ಆದಿವಾಸಿಗಳ ಮೇಲೆ ಪ್ರಯೋಗಿಸುತ್ತಿದೆ. ಇವತ್ತು ಫ್ಯಾಸಿಸ್ಟ್ ಇಸ್ರೇಲ್ ಮತ್ತು ಜಾತ್ಯತೀತವಾದಿ ಭಾರತಕ್ಕೆ ಇರುವ ವ್ಯತ್ಯಾಸ ಅಷ್ಟೇ!

ಇನ್ನು 'ಗಾಜಾ ಫ್ರೀಡಂ ಫ್ಲೋಟಿಲ್ಲಾ' ಮೇಲಾದ ದಾಳಿಯನ್ನು ಹಲವಾರು ದೇಶಗಳು ಖಂಡಿಸಿದರೂ, ಕೆಲ ರಾಷ್ಟ್ರಗಳು ಇಸ್ರೇಲ್‌ನಲ್ಲಿರುವ ತನ್ನ ರಾಯಭಾರಿಗಳನ್ನು ಹಿಂದೆ ಕರೆಸಿಕೊಂಡರೂ ಭಾರತದ ಸರ್ಕಾರ ಮಾತ್ರ ತುಟಿಪಿಟಿಕ್ ಎನ್ನದೆ ಸುಮ್ಮನಿತ್ತು. ಅದು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದ್ದು ಯಾವಾಗ ಗೊತ್ತಾ?

ಮಾನವೀಯ ಆಶಯಗಳನ್ನು ದಮನ ಮಾಡುವ ತನ್ನ ದಾಳಿಯನ್ನು ಸಮರ್ಥಿಸಿಕೊಳ್ಳುತ್ತಾ ಇಸ್ರೇಲ್ ಸರ್ಕಾರ "ಬೇರೆ ದೇಶಗಳಲ್ಲೂ ಭಾರತ, ಪಾಕಿಸ್ತಾನ ಸೇರಿದಂತೆ ತಮ್ಮ ರಕ್ಷಣೆಗೆ ಇಂತಹ ದಾಳಿಗಳು ನಡೆದಿವೆ" ಎಂದಿತು. ಆಗ ಭಾರತ ತನ್ನ ಹೆಸರನ್ನು ಇಸ್ರೇಲ್ ಪ್ರಸ್ತಾಪಿಸಿದ್ದಕ್ಕೆ ಮುನಿಸಿಕೊಂಡಿತು. ಭಾರತದ ಈ ಮುನಿಸಿನಿಂದಾಗಿ ಎಲ್ಲಿ ತನ್ನ ಯುದ್ಧ ಅಸ್ತ್ರಗಳ ಉದ್ಯಮಕ್ಕೆ ಹಾನಿಯಾಗುತ್ತದೋ ಎಂದು ಭಾವಿಸಿದ ಇಸ್ರೇಲ್ ಸರ್ಕಾರ ಕಳೆದ ಬುಧವಾರದಂದು ತನ್ನ ಸಮರ್ಥನೆಯಿಂದ ಭಾರತದ ಹೆಸರನ್ನು ಹೊರತುಪಡಿಸಿತು. ಇದರರ್ಥ, ಇಸ್ರೇಲ್‌ನ ಗೂಂಡಾಗಿರಿಯನ್ನು ಭಾರತ ಖಂಡಿಸುವುದಿಲ್ಲ, ಹಾಗೆಯೇ ಭಾರತದ ದಾದಾಗಿರಿಯನ್ನು ಇಸ್ರೇಲ್ ಖಂಡಿಸಬಾರದು ಎಂದಷ್ಟೇ.


ಜಾಗತಿಕರಣದಿಂದಾಗಿ ಇವತ್ತು ಜಗತ್ತಿನಾದ್ಯಂತ ಫ್ಯಾಸಿಸ್ಟರ, ಉದ್ಯಮಿಗಳ, ಸರ್ಕಾರಗಳ ದೌರ್ಜನ್ಯ ಹೆಚ್ಚಾಗುತ್ತಿದೆ. ಆ ದೌರ್ಜನ್ಯಗಳಿಗೆ ಅಲ್ಪಸಂಖ್ಯಾತರು, ರೈತರು, ಬಡವರು, ಬುಡಕಟ್ಟು ಜನಾಂಗದವರು ಬಲಿಯಾಗುತ್ತಿದ್ದಾರೆ. ಅದು ಪ್ಯಾಲಸ್ಟೀನಿ ಅರಬ್ಬರಿಬಹುದು, ಭಾರತದ ಕಾಶ್ಮೀರಿಗಳಿರಬಹುದು, ಥೈಲ್ಯಾಂಡಿನ ಬಡವರಿರಬಹುದು, ಚೈನಾದ ರೈತರಿರಬಹುದು, ಅಮೆರಿಕದ ಕರಿಯರಿರಬಹುದು, ಯುರೋಪಿನ ಜಿಪ್ಸಿ (ಅಲೆಮಾರಿಗಳು) ಸಮುದಾಯವಿರಬಹುದು, ಸಂಯುಕ್ತ ರಷ್ಯದಲ್ಲಿನ ವಿವಿಧ ರಾಷ್ಟ್ರಗಳಿರಬಹುದು... ಎಲ್ಲೆಡೆ ರಕ್ತಪಾತ ನಡೆಯುತ್ತಿದೆ.

ಇದನ್ನೆಲ್ಲ ತಡೆಯುವುದಾದರೂ ಹೇಗೆ? ●

ವಿಶ್ವನಾಥನ್ ಆನಂದ್ ವಿಶ್ವ ಚೆಸ್ ಚಾಂಪಿಯನ್‌ಶಿಪ್ ಗೆಲುವಿನ ವಿಸ್ಮಯ ಕತೆ!



ವಿಶ್ವ ಚೆಸ್ ಟೂರ್ನಿಯಲ್ಲಿ ನಮ್ಮ ಹುಡುಗ ಆನಂದ್ ಇನ್ನೊಬ್ಬ ಪ್ರಳಯಾಂತಕ ಆಟಗಾರ ಟೊಪೊಲೋವ್‌ನನ್ನು ಸೋಲಿಸಿ ಈ ಪ್ರಶಸ್ತಿ ಗೆದ್ದ. ಈ ಚಾಂಪಿಯನ್‌ಶಿಪ್ ಗೆಲ್ಲಲು ಇವರಿಬ್ಬರೂ ಮಾಡಿಕೊಂಡಿದ್ದ ತಯಾರಿಗಳು, ಪರಸ್ಪರರ ಪಟ್ಟುಗಳನ್ನು ಹಾಗೂ ಆಟದ ಶೈಲಿಗಳನ್ನು ತಿಳಿದುಕೊಳ್ಳಲು ನಡೆಸಿದ ರಹಸ್ಯ ಕಾರ್ಯಾಚರಣೆಗಳ ಕತೆ ಕೇಳಿದರೆ ಬೆರಗಾಗುವಂತಿದೆ. ಅಷ್ಟೇ ಅಲ್ಲ, ಈ ಇಬ್ಬರೂ ಆಟಗಾರರನ್ನು ಫೈನಲ್ ಹೋರಾಟದ ಅಖಾಡಕ್ಕೆ ಕಳಿಸುವ ಮುನ್ನ ತಯಾರಿ, ತರಬೇತಿ ಕೊಟ್ಟು ನೆರವಾದವರ ವಿವರಗಳೂ ಆಸಕ್ತಿದಾಯಕವಾಗಿವೆ.



ಭಾರತದ ವಿಶ್ವನಾಥನ್ ಆನಂದ್ ಚೆಸ್ ಆಟದ ವಿಶ್ವ ಚಾಂಪಿಯನ್ ಆಗಿ ಮುಂದುವರೆದಿದ್ದಾನೆ. ಕಳೆದ ತಿಂಗಳು ಬಲ್ಗೇರಿಯಾ ರಾಜಧಾನಿ ಸೋಫಿಯಾದಲ್ಲಿ ನಡೆದ ವಿಶ್ವ ಚೆಸ್ ಟೂರ್ನಿಯಲ್ಲಿ ನಮ್ಮ ಹುಡುಗ ಆನಂದ್ ಇನ್ನೊಬ್ಬ ಪ್ರಳಯಾಂತಕ ಆಟಗಾರ ಟೊಪೊಲೋವ್‌ನನ್ನು ಸೋಲಿಸಿ ಈ ಪ್ರಶಸ್ತಿ ಗೆದ್ದ. ಈ ಟೊಪೊಲೋವ್-ವೆಸೆಲಿನೋ ಟೊಲೋಫೋನ್ ಇವನ ಪೂರ್ತಿ ಹೆಸರು. ಬಲ್ಗೇರಿಯಾದವನೆ ಆಗಿದ್ದ. ಈ ಚಾಂಪಿಯನ್‌ಶಿಪ್ ಗೆಲ್ಲಲು ಇವರಿಬ್ಬರೂ ಮಾಡಿಕೊಂಡಿದ್ದ ತಯಾರಿಗಳು, ಪರಸ್ಪರರ ಪಟ್ಟುಗಳನ್ನು ಹಾಗೂ ಆಟದ ಶೈಲಿಗಳನ್ನು ತಿಳಿದುಕೊಳ್ಳಲು ನಡೆಸಿದ ರಹಸ್ಯ ಕಾರ್ಯಾಚರಣೆಗಳ ಕತೆ ಕೇಳಿದರೆ ಬೆರಗಾಗುವಂತಿದೆ. ಅಷ್ಟೇ ಅಲ್ಲ, ಈ ಇಬ್ಬರೂ ಆಟಗಾರರನ್ನು ಫೈನಲ್ ಹೋರಾಟದ ಅಖಾಡಕ್ಕೆ ಕಳಿಸುವ ಮುನ್ನ ತಯಾರಿ, ತರಬೇತಿ ಕೊಟ್ಟು ನೆರವಾದವರ ವಿವರಗಳೂ ಆಸಕ್ತಿದಾಯಕವಾಗಿವೆ. ಬಲ್ಗೇರಿಯಾ ಸರ್ಕಾರ ತಮ್ಮ ದೇಶದವನೊಬ್ಬ ವಿಶ್ವ ಚಾಂಪಿಯನ್ ಆಗಲೇಬೇಕೆಂದು ಟೊಪೊಲೋವ್‌ಗೆ ಏನೆಲ್ಲಾ ಸವಲತ್ತು ಕೊಟ್ಟು ನೆರವಾಯಿತು ಎಂಬ ವಿಚಾರ ಒಂದೆಡೆಯಿದ್ದರೆ ಸ್ಪೇನ್ ದೇಶದಿಂದ ಆನಂದ್ ಬಲ್ಗೇರಿಯಾ ತಲುಪಲು ಏನೆಲ್ಲಾ ಪರಿಪಾಟಲು ಪಟ್ಟನೆಂಬುದೂ ಅಷ್ಟೇ ಕುತೂಹಲಕಾರಿಯಾಗಿದೆ. ನಿಮಗೆಲ್ಲಾ ನೆನಪಿರಬಹುದು. ಕಳೆದ ಏಪ್ರಿಲ್ ತಿಂಗಳಲ್ಲಿ ಐಸ್‌ಲ್ಯಾಂಡಿನಲ್ಲಿ ಜ್ವಾಲಾಮುಖಿಯೊಂದು ಸಿಡಿದು ಸತತ ಒಂದು ತಿಂಗಳು ಯುರೋಪ್‌ನ ಉದ್ದಗಲಕ್ಕೂ ವಿಮಾನ ಹಾರಾಟ ನಿಂತುಹೋಗಿತ್ತು, ಯುರೋಪಿನ ಆಕಾಶದ ತುಂಬೆಲ್ಲಾ ಹರಡಿಹೋಗಿದ್ದ ಜ್ವಾಲಾಮುಖಿಯ ಬೂದಿಯು ಸಾವಿರಾರು ಲೋಹದ ಹಕ್ಕಿಗಳಿಗೆ ಚಳಿಜ್ವರ ಬರಿಸಿ ಏರ್‌ಪೋರ್ಟ್ ಬಿಟ್ಟು ಮೇಲೇಳದಂತೆ ಮಾಡಿತ್ತಲ್ಲವೆ? ಅದೇ ವೇಳೆಯಲ್ಲೇ ಆನಂದ್‌ನ ವಿಮಾನವೂ ತಪ್ಪಿ ಹೋಗಿ ಅವನು ಸತತ 40 ಗಂಟೆ ಕಾಲ ಕಾರಿನಲ್ಲಿ ಯುರೋಪಿನ 6 ದೇಶಗಳನ್ನು ರಭಸದಿಂದ ಹಾದು ಒಟ್ಟು 2 ಸಾವಿರ ಕಿಲೋ ಮೀಟರು ಪ್ರಯಾಣಿಸಿ ಚಾಂಪಿಯನ್‌ಶಿಪ್ ನಡೆಯುವ ಸ್ಥಳ ತಲುಪಿದ್ದ. ಗೆದ್ದೂ ಬಿಟ್ಟ.

Mouse V/s Man

ವಿಶ್ವ ಚೆಸ್ ಜಗತ್ತಿನಲ್ಲಿ ಈ ಬಾರಿಯ ಚಾಂಪಿಯನ್‌ಶಿಪ್ ಕಾದಾಟವನ್ನು **`A battle between mouse V/s man'** ಎಂದು ಬಣ್ಣಿಸಲಾಗಿತ್ತು. ಏಕೆಂದರೆ ಟೊಪೊಲೋವ್ ಈ ಟೂರ್ನಿಗೆ ತಯಾರಾಗುವಾಗ ವಿಶ್ವ ಕಂಪ್ಯೂಟರ್ ಚೆಸ್ ಚಾಂಪಿಯನ್‌ಶಿಪ್ ಗೆದ್ದಿದ್ದ blue gene/p ಸೂಪರ್ ಕಂಪ್ಯೂಟರ್ ನೆರವಿನೊಂದಿಗೆ ಸಿದ್ಧನಾಗುತ್ತಿದ್ದ. 8792 ಪ್ರೊಸೆಸರ್‌ಗಳನ್ನು ಹೊಂದಿದ್ದ ಈ ಕಂಪ್ಯೂಟರ್ ಪ್ರತಿ ಸೆಕೆಂಡಿಗೆ ದಶಲಕ್ಷಕ್ಕೂ ಜಾಸ್ತಿ ಲೆಕ್ಕಾಚಾರ ಮಾಡಬಲ್ಲ ಸಾಮರ್ಥ್ಯ ಹೊಂದಿತ್ತು. ಐಬಿಎಂ, ಲಾರೆನ್ಸ್ ಲಿವರ್‌ಮೋರ್ ನ್ಯಾಷನಲ್ ಲ್ಯಾಬೊರೇಟರಿ ಹಾಗೂ ಅಮೆರಿಕದ ಎನರ್ಜಿ ಡಿಪಾರ್ಟ್‌ಮೆಂಟಿನವರು ಜೊತೆ ಸೇರಿ ರೂಪಿಸಿದ್ದ ಕಂಪ್ಯೂಟರ್ ತಳಿ ಅದು. ಅಂತಾ ಕಂಪ್ಯೂಟರ್ ತಳಿಯ ಸಿಸ್ಟಂ ಬಲ್ಗೇರಿಯಾದ ಅಕಾಡೆಮಿ ಆಫ್ ಸೈನ್ಸ್‌ನಲ್ಲೂ ಒಂದಿತ್ತು. ಟೊಪೊಲೋವ್ ಈ ಕಂಪ್ಯೂಟರ್ ಬಳಸಲು ಸ್ವತಃ ದೇಶದ ಪ್ರಧಾನಿಯೇ ಅವಕಾಶ ಮಾಡಿಕೊಟ್ಟಿದ್ದನಂತೆ.

ಈ ತಯಾರಿಗಳ ಬಗ್ಗೆ ಹೇಳುತ್ತಾ ಟೊಪೊಲೋವ್‌ನ ಮ್ಯಾನೇಜರ್ ಸಿಲ್ವಿಯೋ ಡನೈಲೋವ್ "ನಾವು ಇದಕ್ಕೆಲ್ಲಾ ಖರ್ಚು ಮಾಡುತ್ತಿರುವ ಹಣ ಎಷ್ಟೆಂತ ಹೇಳಿಬಿಟ್ಟರೆ ಅನೇಕರಿಗೆ ಹಾರ್ಟ್ ಅಟ್ಯಾಕ್ ಆಗುವುದು ಗ್ಯಾರಂಟಿ" ಅಂದಿದ್ದ. ಈ ಮ್ಯಾನೇಜರ್ ಸಿಲ್ವಿಯೋ ಬಗ್ಗೆ ಇಲ್ಲೇ ಒಂದೆರಡು ಮಾತು ಹೇಳಿಬಿಡಬೇಕು.

ಇವನು ಸ್ವತಃ ಚೆಸ್ ಆಟಗಾರನಾಗಿ ಹೆಸರು ಮಾಡಿದ್ದ. ಹಲವು ಸಾಧನೆ-ವೈಫಲ್ಯಗಳ ಮೊತ್ತದಂತಿದ್ದ. ಅಪಾರ ಅನುಭವ ಹೊಂದಿದ್ದ. ಮಹತ್ವಾಕಾಂಕ್ಷಿಯೂ ಆಗಿದ್ದ. ಆಗೊಂದು ವಿಚಿತ್ರ ಘಟನೆ ನಡೆಯಿತು. ಈ ಟೊಪೊಲೋವ್ ಆರನೇ ವಯಸ್ಸಿನಿಂದಲೂ ಚೆಸ್ ಆಡುತ್ತಿದ್ದನಾದರೂ ಅವನಿಗೆ ಸರಿಯಾದ ತರಬೇತಿ ಹಾಗೂ ಗೈಡ್ ಸಿಕ್ಕಿರಲಿಲ್ಲ. ಟೊಪೊಲೋವ್ 12ನೇ ವಯಸ್ಸಿನಲ್ಲಿದ್ದಾಗ ಒಂದು ದಿನ ಸಿಲ್ವಿಯೊ ಅವನ ಆಟ ನೋಡಿದ. ನಿಂತ ನಿಲುವಿನಲ್ಲೇ ತನ್ನ ಆಟದ ಕೆರಿಯರ್ ಕೈಬಿಟ್ಟು ಟೊಪೊಲೋವ್‌ನ ಹಿಂದೆ ಬಿದ್ದ. ಅವನ ಅಪ್ಪನನ್ನೂ ಒಪ್ಪಿಸಿ ಟೊಪೊಲೋವ್‌ನನ್ನು ತನ್ನೊಂದಿಗೆ ತನ್ನ ಅಪಾರ್ಟ್‌ಮೆಂಟ್‌ಗೆ ಕರೆದುಕೊಂಡು ಹೋಗಿ ಹೀಗೆ ಹೇಳಿದನಂತೆ:

"ನೋಡು ಮರಿ ಟೊಪೊಲೋವ್, ನಾನೂ ಸ್ವತಃ ಚೆಸ್ ಚಾಂಪಿಯನ್. ನನಗಿನ್ನೂ ಆಡುವ ಗೆಲ್ಲುವ ಅವಕಾಶಗಳಿವೆ. ಆದರೆ ನಿನಗೆ ಭಾರಿ ಪ್ರತಿಭೆ ಇದೆ. ನಿನ್ನನ್ನು ವಿಶ್ವ ಚಾಂಪಿಯನ್ ಮಾಡಬೇಕು. ಅದೇ ನನ್ನ



ತನ್ನ ತಂಡದೊಂದಿಗೆ ಆನಂದ್

ಗುರಿ. ಅದಕ್ಕಾಗಿ ನನ್ನ ಕೆರಿಯರ್ ಬಿಟ್ಟು ಕೊಡುತ್ತಿದ್ದೇನೆ. ಇವತ್ತಿನಿಂದ ನಾನೇ ನಿನ್ನ ತಂದೆ-ತಾಯಿ ಎಲ್ಲಾ ಗೊತ್ತಾಯ್ತ? ನಿನಗೆ ನಾನೇ ಊಟ ಕೊಡ್ತೀನಿ, ನಿನ್ನ ಬಟ್ಟೆ ಒಗೆದು ಕೊಡ್ತೀನಿ, ಚೆಸ್ ಕಲಿಸಿ ಕೊಡ್ತೀನಿ, ನಿನ್ನ ಒಂದೇ ಒಂದು ಕೆಲಸ ಏನೂಂದರೆ ಚೆಸ್ ಆಡುವುದು, ಆಡುತ್ತಾ ಕಲಿಯುತ್ತ ನೀನು ವಿಶ್ವ ಚಾಂಪಿಯನ್ ಆಗಬೇಕು." ನನಗೆ ಅಷ್ಟೇ ಬೇಕಿರೋದು."

ಈ ಸಿಲ್ವಿಯೊ ಅದಿನ್ನೆಂತ ತಿಕ್ಕಲ ಹಾಗೂ ದೃಢ ನಿರ್ಧಾರದ ಮನುಷ್ಯನಿರಬೇಕು ಯೋಚಿಸಿ. ಹೀಗೆ ಮೊದಲಿಂದಲೂ ಅನೇಕರ ಸಹಕಾರ, ತ್ಯಾಗ, ಮಾರ್ಗದರ್ಶನದೊಂದಿಗೆ ಟೂರ್ನಿಗಳನ್ನು ಗೆಲ್ಲುತ್ತಾ ಹೋದ ಟೊಪೊಲೋವ್ ಅವನಿಗೆ ತನ್ನ ಗುರಿ ಸಾಧಿಸಲು, ತನ್ನ ಗುರುವಿನ ಇಡೀ ಜೀವನದ ಏಕೈಕ ಆಸೆ ಈಡೇರಿಸಲು ಕೇವಲ ಇನ್ನೊಂದು, ಒಂದೇ ಒಂದು ಮೆಟ್ಟಿಲು ಏರಬೇಕಿತ್ತು. ಆದರೆ ಆನಂದ್ ಎದುರು ಅವನು ಅಲ್ಲೇ ಸೋತ. ಕಳೆದ 23 ವರ್ಷಗಳಿಂದ ಈ ಟೊಪೊಲೋವ್ ಹಾಗೂ ಸಿಲ್ವಿಯೋ ಎಂಬ ಶಿಷ್ಯ-ಗುರು ಜೋಡಿ ಯಾವ ಕಿರೀಟಕ್ಕಾಗಿ ಅಹರ್ನಿಶಿ ಕನಸು ಕಾಣುತ್ತಾ ಶ್ರಮಿಸುತ್ತಾ ಸಾಗಿಬಂದಿತ್ತೋ ಆ ಗುರಿ ಕೊನೆಗೂ ಈಡೇರಲಿಲ್ಲ. ಗೆಲ್ಲಲು ತಮ್ಮದೇ ಬದುಕನ್ನು ಮೊಂಬತ್ತಿಯಂತೆ ಉರಿಸಿದವರಿಗಷ್ಟೇ ಇಂತಹ ಸೋಲುಗಳ ನೋವು ಏನೆಂದು ಅರ್ಥವಾಗುತ್ತದೆ.

ಮತ್ತೊಂದೆಡೆ ಈ ಟೊಪೊಲೋವ್‌ನ ಯಂತ್ರಗಳು, ಕಂಪ್ಯೂಟರ್ ಸೇನೆಯೆದುರು ಭಾರತದ ವಿಶ್ವನಾಥನ್ ಆನಂದ್ ಒಂದು ವಿಭಿನ್ನವಾದ ತಯಾರಿ ಮಾಡಿಕೊಳ್ಳುತ್ತಿದ್ದ. ಆನಂದನಿಗಿದ್ದ ದೊಡ್ಡ ಸಮಸ್ಯೆ ಏನೆಂದರೆ ವಿಶ್ವ ಚೆಸ್ ಟೈಟಲ್‌ಗಾಗಿ ಅವನ ಪ್ರತಿಸ್ಪರ್ಧಿಯಾಗಿ ಯಾರು ನಿಲ್ಲುತ್ತಾರೆಂಬುದು ಬೇಗನೆ ಗೊತ್ತಾಗುವಂತಿರಲಿಲ್ಲ. ಏಕೆಂದರೆ ಹಾಲಿ ಚಾಂಪಿಯನ್ ಆನಂದ್ ಎದುರು ಫೈನಲ್‌ನಲ್ಲಿ ಆಡಲು ಅನೇಕ ದೇಶಗಳ ಗ್ರಾಂಡ್ ಮಾಸ್ಟರ್‌ಗಳು ಸೆಣಸಾಟ ನಡೆಸುತ್ತಿದ್ದರು. ಅದರಲ್ಲಿ ಯಾರು ವಿಜಯಶಾಲಿಯಾಗಿ ಹೊರಹೊಮ್ಮುತ್ತಾನೊ ಅದು ತೀರ್ಮಾನ ಆಗುವವರೆಗೂ ಆನಂದ್ ತನ್ನ ಫೈನಲ್ ತಯಾರಿ ಆರಂಭಿಸುವಂತಿರಲಿಲ್ಲ. ಏಕೆಂದರೆ ಪ್ರತಿ ಆಟಗಾರನ ಶೈಲಿ, ಟೆಂಪರ್‌ಮೆಂಟ್, ಕರಿಯರ್ ರೆಕಾರ್ಡ್ ಎಲ್ಲಾ ತಿಳಿದೇ ತಾನೇ ಆನಂದ್ ಕೂಡ ಅಖಾಡಕ್ಕೆ ತೆರಳಬೇಕು. ಕೊನೆಗೂ ಟೊಪೊಲೋವ್ ಫೈನಲ್ ಕಾದಾಟಕ್ಕೆ ಆಗಮಿಸಲಿದ್ದಾನೆ ಎಂಬುದು ನಿರ್ಧಾರವಾದಾಗ ಇತ್ತ ಆನಂದ್‌ನ ಬಿರುಸಿನ ಸಿದ್ಧತೆ ಶುರುವಾಯಿತು. ಸ್ಪೇನ್ ದೇಶದ ಮ್ಯಾಡ್ರಿಡ್ ನಗರದ ಹೊರವಲಯದಲ್ಲಿ ಆನಂದ್ ಮನೆಯಿದೆ. ಹೆಂಡತಿ ಅರುಣಾ ಜೊತೆ ಆನಂದ್ ಅಲ್ಲಿದ್ದಾನೆ. ಜಗತ್ತಿನ ಎಲ್ಲೇ ಚೆಸ್ ಟೂರ್ನಿ ನಡೆದರೂ ಮ್ಯಾಡ್ರಿಡ್‌ನಿಂದ ಓಡಾಡಲು ಸುಲಭ ಎಂದು ಆನಂದ್ ಅಲ್ಲೇ ಮನೆ ಮಾಡಿಕೊಂಡಿದ್ದಾನೆ. Infact ಟೊಪೊಲೋವ್ ಕೂಡ ಕೆಲಕಾಲ ಸ್ಪೇನ್‌ನಲ್ಲೇ ಇದ್ದವನು.




ಸಿಲ್ವಿಯೋ



ಟೊಪೊಲೋವ್

ಸದಾ ತಣ್ಣಗೆ, ನಿರುಮ್ಮಳವಾಗಿರುವ ಆನಂದ್ ಎಂದೂ ತನ್ನ ಟೆಂಪರ್‌ಮೆಂಟ್ ಕಳೆದುಕೊಂಡವನಲ್ಲ. ಆದರೆ ಅವನ ಎದುರಾಳಿಯಾಗಲಿದ್ದ ಟೊಪೊಲೋವ್ ಚೆಸ್ ಟೂರ್ನಿಗಳಲ್ಲೇ ಜಗಳವಾಡುವ ಹಿನ್ನೆಲೆಯವನು. ಅವನೊಮ್ಮೆ ವಿಶ್ವ ಚಾಂಪಿಯನ್ ಗ್ಯಾರಿ ಕ್ಯಾಸ್ಪರೋವ್ ಜೊತೆ ಆಡುತ್ತಿದ್ದಾಗ ಬಾತ್‌ರೂಂನಲ್ಲಿ ಜಗಳ ತೆಗೆದು ರಂಪ ಮಾಡಿದ್ದ. ಆಟದ ಸ್ಥಿತಿಗತಿ, ಏರಿಳಿತಗಳು ಚೆಸ್ ಆಟಗಾರರ ಮನಸ್ಥಿತಿಯ ಮೇಲೂ ಪರಿಣಾಮ ಬೀರುತ್ತಿರುತ್ತವೆ. ವಿಶ್ವ ಚೆಸ್‌ನ ಬಲು ಪ್ರಸಿದ್ಧ ಆಟಗಾರನಾಗಿದ್ದ ಡಾ. ಸೀಗರ್ಟ್ ತರಾಶ್ ಎಂಬ ವೈದ್ಯ "ನಾನು ಚೆಸ್ ಆಡುವಾಗ ಹಲ್ಲುನೋವು, ತಲೆನೋವೆಲ್ಲಾ ಬಂದು ಬಿಡುತ್ತಿದ್ದವು" ಎಂದೊಮ್ಮೆ ಹೇಳಿಕೊಂಡಿದ್ದ. ಉದ್ವೇಗ, ಜಗಳ, ಕೂಗಾಟಗಳೆಲ್ಲಾ ಅಲ್ಲಿ ಕಾಮನ್. ಅಷ್ಟೆಲ್ಲಾ ಯಾಕೆ 20ನೇ ಶತಮಾನದ ಮಧ್ಯಭಾಗದವರೆಗೂ ದೊಡ್ಡ ಚೆಸ್ ಟೂರ್ನಿಗಳಲ್ಲಿ ಎದುರಾಬದುರು ಕೂರುವ ಆಟಗಾರರು ಪರಸ್ಪರ ಕಾಲಲ್ಲಿ ಒದೆಯದಂತೆ ಟೇಬಲ್ ಕೆಳಗೆ ಮರದ ಹಲಗೆ ಇರಿಸುತ್ತಿದ್ದರು.



ಹೆಂಡತಿ ಅರುಣಾ ಜೊತೆ...

ಅದಿರಲಿ,

ನಮ್ಮ ಆನಂದ್ ತನ್ನೊಂದಿಗೆ ಗ್ರಾಂಡ್ ಮಾಸ್ಟರ್ ಪೀಟರ್ ಹೈನ್ ನೀಲ್‌ಸನ್, ಎರಿಕ್ ವ್ಯಾನ್‌ರೀಮ್, ರುಸ್ತಂ ಕಾಸೀಂ ಜನೋವ್, ಪತ್ನಿ ಅರುಣಾ ಹಾಗೂ ಭಾರತೀಯ ಗ್ರಾಂಡ್ ಮಾಸ್ಟರ್ ಸೂರ್ಯ ಗಂಗೂಲಿಯವರನ್ನು ಇರಿಸಿಕೊಂಡಿದ್ದ.

ಇವರಲ್ಲೊಬ್ಬ ಕಂಪ್ಯೂಟರ್ ತಜ್ಞನಾದರೆ ಇನ್ನಿಬ್ಬರು ಆನಂದ್‌ಗೆ ಸಲಹೆ ನೀಡುತ್ತಾ, ಅನೇಕ ಚೆಸ್ ಸಮಸ್ಯೆ ಬಿಡಿಸುತ್ತಾ ನೆರವಾಗುತ್ತಿದ್ದರು. ಹೆಂಡತಿ ಅರುಣಾಗೆ ಮ್ಯಾನೇಜರ್ ಜವಾಬ್ದಾರಿ. ಆಶ್ಚರ್ಯ ಏನೆಂದರೆ ಬಹಳ ಹಿಂದೆ ಒಮ್ಮೆ ಆನಂದ್‌ನನ್ನು 'ಕಾಫಿ ಹೌಸ್ ಆಟಗಾರ'ನೆಂದು ಹೀಯಾಳಿಸಿದ್ದ ರಷ್ಯಾದ ಮಾಜಿ ವಿಶ್ವ ಚಾಂಪಿಯನ್ ಗ್ಯಾರಿ ಕ್ಯಾಸ್ಪರೋವ್ ಸಹ ಈ ಬಾರಿ ಆನಂದ್‌ಗೆ ಅನೇಕ ಸಲಹೆ ನೀಡಿ ನೆರವಾದ. ಈ ಹಂತದಲ್ಲೇ ಒಂದು ತಮಾಷೆ ನಡೆಯಿತು. ಆನಂದ್ ಎಂತಾ ಕಿಲಾಡಿ ಎನ್ನಲು ಈ ವಿಚಾರ ಹೇಳಬೇಕು. ಪತ್ರಕರ್ತನೊಬ್ಬ ಆನಂದ್‌ಗೆ ನೆರವಾಗುವ ತಂಡದಲ್ಲಿ ಯಾರಿದ್ದಾರೆಂದು ಕೇಳಿ ನೀಲ್‌ಸನ್ ಎನ್ನುವ ಹೆಸರನ್ನು ತಪ್ಪಾಗಿ ಕೇಳಿಸಿಕೊಂಡು ಮ್ಯಾಗ್ನಸ್ ಕಾರ್ಲ್‌ಸನ್ ಎಂದು ಬರೆದುಬಿಟ್ಟ. ಈಗಿನ್ನೂ 19 ವರ್ಷ ವಯಸ್ಸಿನ ಈ ಕಾರ್ಲ್‌ಸನ್ ನಾರ್ವೆ ದೇಶದ ಚಾಂಪಿಯನ್ ಆಟಗಾರ. ಆನಂದ್ ಟೀಂ ಸೇರಲು ಅವನಿಗೂ ಆಸೆ ಇತ್ತಂತೆ. ಆದರೆ ಅದಕ್ಕೆ ಆನಂದ್ ಅವಕಾಶ ಕೊಡಲಿಲ್ಲ, ಯಾಕಂತೆ ಗೊತ್ತಾ? ಬಹುತೇಕ 2012ರ ವಿಶ್ವ ಚೆಸ್ ಚಾಂಪಿಯನ್‌ಶಿಪ್‌ನ ಫೈನಲ್‌ನಲ್ಲಿ ಆನಂದನ ಎದುರಾಳಿಯಾಗಿ ಇದೇ ಕಾರ್ಲ್‌ಸನ್ ಕಾಣಿಸಿಕೊಳ್ಳಬಹುದೆಂದು ಚೆಸ್ ಪಂಡಿತರೆಲ್ಲಾ ಭವಿಷ್ಯ ಹೇಳಿಬಿಟ್ಟಿದ್ದಾರೆ. ಅಂತಹ ಸಂಭವನೀಯ ಎದುರಾಳಿಯನ್ನು ತನ್ನ ಅಂತರಂಗದ ವಲಯಕ್ಕೆ ಬಿಟ್ಟುಕೊಂಡರೆ ಮುಂದೆ ಅನಾನುಕೂಲ ಎಂದು ಆನಂದ ಯೋಚಿಸಿ ಕಾರ್ಲ್‌ಸನ್‌ನನ್ನು ದೂರ ಇಟ್ಟನಂತೆ.

ಹೇಗಿದೆ ನೋಡಿ ಚೆಸ್ ಪ್ರಪಂಚ!

ಹೀಗೆ ಒಂದು ತಿಂಗಳ ತಯಾರಿ ನಡೆಸಿ ಇನ್ನೇನು ಆಡಲು ಬಲ್ಗೇರಿಯಾದ ಸೋಫಿಯಾ ನಗರಕ್ಕೆ ಹೋಗಲು ವಿಮಾನ ಏರಬೇಕೆನ್ನುವಷ್ಟರಲ್ಲೇ ಐಸ್‌ಲ್ಯಾಂಡ್‌ನಲ್ಲಿ ಜ್ವಾಲಾಮುಖಿ ಸ್ಫೋಟಿಸಿತು. ಸದಾ ತಣ್ಣಗಿರುವ ಆನಂದ್ ಸಹ ಕೆಲಕಾಲ ತಬ್ಬಿಬ್ಬಾದ. ವಿಮಾನವಿಲ್ಲ, ರೈಲೂ ಇಲ್ಲ, ಅಂದರೆ ಎರಡು ಸಾವಿರ ಕಿಲೋಮೀಟರು ಪ್ರಯಾಣಿಸಿ ಟೂರ್ನಿಯ ಸ್ಥಳ ಸಕಾಲದಲ್ಲಿ ತಲುಪುವುದೆಂತು? ಕೊನೆಗೆ ಜರ್ಮನಿಯ ಆಮ್‌ಸ್ಟೆಲ್‌ವೀನ್ ನಗರದವರೆಗೂ ಹೇಗೊ ತಲುಪಿ ಅಲ್ಲಿಂದ ಒಂದು ಟ್ಯಾಕ್ಸಿ ಮಾಡಿಕೊಂಡು ಎರಡು ಸಾವಿರ ಕಿಲೋ ಮೀಟರ್‌ನ ಆನಂದ್‌ನ ಚಾಂಪಿಯನ್‌ಶಿಪ್‌ನ ಲಾಂಗ್ ಮಾರ್ಚ್ ಶುರುವಾಯಿತು. ಯುರೋಪ್‌ನ 6 ದೇಶಗಳನ್ನು ಅವರ ಟ್ಯಾಕ್ಸಿ ಹಾದುಹೋಗಬೇಕಿತ್ತಾದರೂ ಎಲ್ಲಾ ದೇಶಗಳ ವೀಸಾ ಅವರ ಬಳಿ ಇರಲಿಲ್ಲ. ಹಾದಿ ನಡುವೆ ತಡೆದು ನಿಲ್ಲಿಸಿದ ಗಡಿ ಪೊಲೀಸರೆಲ್ಲಾ ವಿಚಾರ ತಿಳಿದು ಆನಂದ್ ಮುಂದೆ ಸಾಗಲು ಬಿಟ್ಟರಂತೆ.


ಹೀಗೆ ಆತಂಕ, ಉದ್ವೇಗದ ಸನ್ನಿವೇಶ ಹಾದು ಸೋಫಿಯಾ ತಲುಪಿದ ಆನಂದ್ ಈ ಕಷ್ಟಗಳನ್ನೆಲ್ಲಾ ಒಂದು 'ಉಲ್ಲಾಸಮಯ ಪ್ರವಾಸ' ಎಂದು ಪರಿಗಣಿಸಿದ. ಟೂರ್ನಿ ಶುರುವಾದಾಗ ಎಂದಿನಂತೆ ಉದ್ವೇಗರಹಿತನಾಗಿ ಹೋಗಿ ಕುಳಿತ.


ಗೆದ್ದ.

• ಪಾರ್ವತೀಶ

ರಾಜ್ಯಸಭಾ ಚುನಾವಣೆ

ಹರಿಪ್ರಸಾದ್ ವಿರುದ್ಧ ದೇವೇಗೌಡ ಕಿರಿಕ್






ರಾಜ್ಯಸಭಾ ಚುನಾವಣೆಯ ನೆಪದಲ್ಲಿ ರಾಜ್ಯ ರಾಜಕೀಯದಲ್ಲಿ ಮೈತ್ರಿಯ ಹೊಸ ಅಧ್ಯಾಯ ಆರಂಭವಾಗಲಿದೆ. ಕಾಂಗ್ರೆಸ್ ಜೆಡಿಎಸ್ ಮೈತ್ರಿ ಗಟ್ಟಿಯಾದರೆ ಬಿಜೆಪಿಯ ನಾಗಾಲೋಟಕ್ಕೆ ಕಡಿವಾಣ ಹಾಕಿದಂತೆ! ಇವರಿಬ್ಬರ ಮೈತ್ರಿ ಮುರಿದುಬಿದ್ದಲ್ಲಿ ಬಿಜೆಪಿ ಮೂರನೆಯ ಅಭ್ಯರ್ಥಿಯಾಗಿ ಶ್ರೀಮಂತ ಉದ್ಯಮಿಯೊಬ್ಬರನ್ನು ಹಿಂಬಾಗಿಲಿನಿಂದ ನಿಲ್ಲಿಸಿ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಬಹುದು, ಜೇಬನ್ನೂ ತುಂಬಿಸಿಕೊಳ್ಳಬಹುದು! ಕಾಂಗ್ರೆಸ್ ಪಕ್ಷಕ್ಕಂತೂ ದೇವೇಗೌಡರನ್ನು ಪಕ್ಕದಲ್ಲಿರಿಸಿಕೊಂಡರೂ ಅಪಾಯ, ಕೂಗಳತೆಯ ದೂರದಲ್ಲಿಟ್ಟರೆ ಇನ್ನಷ್ಟು ಅಪಾಯ ಎಂಬುದು ಗೊತ್ತು. ಈ ಕಾರಣಕ್ಕಾಗಿ ಮೈತ್ರಿ ಅಪವಿತ್ರವಾದರೂ, ಅನೈತಿಕವಾದರೂ ಅಥವಾ ಅರ್ಥಹೀನವಾದರೂ ಕಾಂಗ್ರೆಸ್ ಹೈಕಮಾಂಡ್ ಗೌಡರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ.

ದೇವೇಗೌಡರು ಮತ್ತು ಸೋನಿಯಾ ಗಾಂಧಿ ಪರಸ್ಪರ ಹಸ್ತಲಾಘವ ಮಾಡಲು ಹಿಂಜರಿಯುತ್ತಿರುವುದರಿಂದ ರಾಜ್ಯಸಭಾ ಚುನಾವಣೆ ರಂಗೇರಿದೆ. 100 ವರ್ಷಕ್ಕಿಂತಲೂ ದೀರ್ಘ ಇತಿಹಾಸವಿರುವ ಕಾಂಗ್ರೆಸ್ ಪಕ್ಷ, ದೇವೇಗೌಡ ನಾಯಕತ್ವದ ಪ್ರಾದೇಶಿಕ ಪಕ್ಷದ ಒತ್ತಡಕ್ಕೆ ಮಣಿಯುತ್ತದೆಯೇ? ಎಂಬುದು ಸದ್ಯಕ್ಕೆ ರಾಜಕೀಯ ವಲಯದಲ್ಲಿರುವ ಕುತೂಹಲ.


ನೋ ಷೇಕ್‌ಹ್ಯಾಂಡ್

ಗೌಡರು ಮತ್ತು ಸೋನಿಯಾ ಗಾಂಧಿ ಪರಸ್ಪರ ಹಸ್ತಲಾಘವ ಮಾಡಿಕೊಳ್ಳುವುದು ಅಥವಾ ಮುನಿಸಿಕೊಂಡು ದೂರವಿರುವುದು ಹೊಸತೇನೂ ಅಲ್ಲ. ಸಮಯ ಮತ್ತು ಸಂದರ್ಭಕ್ಕೆ ತಕ್ಕಂತೆ ದೇವೇಗೌಡರು ಕಾಂಗ್ರೆಸ್ ಪಕ್ಷವನ್ನು ತಮ್ಮ ಮೂಗಿನ ನೇರಕ್ಕೆ ಆಟವಾಡಿಸುತ್ತಲೇ ಇರುತ್ತಾರೆ. ಅಂತಹ ಒಂದು ಲೇಟೆಸ್ಟ್ ಆಟವೇ ಈಗ ನಡೆಯುತ್ತಿರುವ ಮೈತ್ರಿಯ ವಿಚಾರ. ಹಾಗೆ ನೋಡಿದರೆ ಕಾಂಗ್ರೆಸ್ ಮತ್ತು ಜೆಡಿಎಸ್ ಸಮಾನ ಮನಸ್ಕ ಪಕ್ಷಗಳಂತೂ ಅಲ್ಲವೇ ಅಲ್ಲ. ಅಥವಾ ಜೆಡಿಎಸ್ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಯುಪಿಎ ಪಕ್ಷದ ಅಂಗಪಕ್ಷವೂ ಅಲ್ಲ. ಆದರೂ ಕೋಮುವಾದಿ ಪಕ್ಷ ಎಂಬ ಹಣೆಪಟ್ಟಿ ಹೊಂದಿರುವ ಭಾರತೀಯ ಜನತಾ ಪಕ್ಷ ಬಲಿಷ್ಠವಾಗಿ ಕಾಲೂರದಂತೆ ತಡೆಯುವುದಷ್ಟೇ ಈ ಪಕ್ಷಗಳ ಏಕೈಕ ಸಮಾನ ಅಂಶ. ಅದನ್ನು ಟ್ರಂಪ್‌ಕಾರ್ಡ್ ಮಾಡಿಕೊಂಡೇ ಜೆಡಿಎಸ್ ದಂಡನಾಯಕ ದೇವೇಗೌಡರು ಕಾಲಕ್ಕೆ ತಕ್ಕಂತೆ ಕೋಲ ಬದಲಾಯಿಸುತ್ತಾ ತಮ್ಮ ರಾಜಕೀಯ ಚತುರತೆಯನ್ನು ಮೆರೆಸಿ ತಮ್ಮ ಪಕ್ಷವನ್ನು ಬಲಪಡಿಸುತ್ತಲೇ ಇದ್ದಾರೆ. ಕಾಂಗ್ರೆಸ್ ಪಕ್ಷಕ್ಕಂತೂ ದೇವೇಗೌಡರನ್ನು ಪಕ್ಕದಲ್ಲಿರಿಸಿಕೊಂಡರೂ ಅಪಾಯ, ಕೂಗಳತೆಯ ದೂರದಲ್ಲಿಟ್ಟರೆ ಇನ್ನಷ್ಟು ಅಪಾಯ ಎಂಬುದು ಗೊತ್ತು. ಈ ಕಾರಣಕ್ಕಾಗಿ ಮೈತ್ರಿ ಅಪವಿತ್ರವಾದರೂ, ಅನೈತಿಕವಾದರೂ ಅಥವಾ ಅರ್ಥಹೀನವಾದರೂ ಕಾಂಗ್ರೆಸ್ ಹೈಕಮಾಂಡ್ ಗೌಡರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ.



ಹರಿಪ್ರಸಾದ್ ಡಾರ್ಕ್ ಹಾರ್ಸ್


ಈಗ ಈ ಬಾರಿಯ ರಾಜ್ಯಸಭಾ ಚುನಾವಣೆಯಲ್ಲೂ ಆಗುತ್ತಿರುವುದು ಅದೇ. ಆರಂಭದ ಚರ್ಚೆಯಲ್ಲಿ ಜೆಡಿಎಸ್ ಪಕ್ಷ ಕಾಂಗ್ರೆಸ್‌ನ ಎರಡನೇ ಅಭ್ಯರ್ಥಿಗೆ ಓಟು ಹಾಕುವುದೆಂದು ನಿರ್ಣಯವಾಗಿತ್ತು. ಅದಕ್ಕೆ ಬದಲಾಗಿ ವಿಧಾನಪರಿಷತ್ ಚುನಾವಣೆಯಲ್ಲಿ ಒಂದು ಸ್ಥಾನವನ್ನು ದಳಕ್ಕೆ ನೀಡಲು ಕಾಂಗ್ರೆಸ್ ಹೈಕಮಾಂಡ್ ಒಪ್ಪಿಗೆ ನೀಡಿತ್ತು. ಆದರೆ ಈಗ ಈ ಮೈತ್ರಿ ಮುರಿದುಬೀಳಲು ಮುಖ್ಯ ಕಾರಣ "ರಾಜ್ಯಸಭಾ ಚುನಾವಣೆಗೆ ಕಾಂಗ್ರೆಸ್‌ನ ಎರಡನೇ ಅಭ್ಯರ್ಥಿಯಾಗಿ ಬಿ.ಕೆ.ಹರಿಪ್ರಸಾದರನ್ನು ನೀವು ಕಣಕ್ಕಿಳಿಸಿದರೆ, ನಾವು ಬೆಂಬಲ ನೀಡುವುದಿಲ್ಲ" ಎಂಬುದು ದಳದ ನಾಯಕ ದೇವೇಗೌಡರ ನಿಲುವು.



ಶತಮಾನಗಳ ಇತಿಹಾಸವಿರುವ ಕಾಂಗ್ರೆಸ್ ಪಕ್ಷಕ್ಕೆ ಯಾರು ರಾಜ್ಯಸಭಾ ಅಭ್ಯರ್ಥಿಯಾಗಬೇಕು ಎಂದು ದೇವೇಗೌಡರು ಸೂಚಿಸಿದ್ದು ದೆಹಲಿಯಲ್ಲಿರುವ ಕಾಂಗ್ರೆಸ್ ನಾಯಕರ ಕಣ್ಣು ಕೆಂಪಾಗಿಸಿದೆ. ಸೋನಿಯಾ ಗಾಂಧಿಯ ಕಿಚನ್ ಕ್ಯಾಬಿನೆಟ್ ಸದಸ್ಯರಾದ ಆಸ್ಕರ್ ಫರ್ನಾಂಡಿಸ್ ಮತ್ತು ಬಿ.ಕೆ.ಹರಿಪ್ರಸಾದರನ್ನು ಮರು ಆಯ್ಕೆ ಮಾಡಲು ಆ ಪಕ್ಷ ಮೊದಲೇ ನಿರ್ಧಾರ ಕೈಗೊಂಡಿತ್ತು, ಆದರೆ ಹರಿಪ್ರಸಾದರ ಬದಲಿಗೆ ರಿಯಲ್ ಎಸ್ಟೇಟ್ ಕುಳ ಕುಪೇಂದ್ರ ರೆಡ್ಡಿಯವರನ್ನು ಅಭ್ಯರ್ಥಿಯನ್ನಾಗಿ ಮಾಡಿ ಎಂದು ಗೌಡರು ಮೇಡಂಗೆ ಆದೇಶ ನೀಡಿದ್ದು ಈ ಮೈತ್ರಿ ಮುರಿದು ಬೀಳಲು ಮುಖ್ಯ ಕಾರಣ.

ಗೌಡರ ಬ್ಲಾಕ್‌ಮೇಲ್

ಪ್ರಾದೇಶಿಕ ಪಕ್ಷಗಳ ಇಂತಹ ರಾಜಕೀಯ ಬ್ಲಾಕ್‌ಮೇಲ್ ತಂತ್ರಗಳನ್ನು ಸಮರ್ಥವಾಗಿ ಎದುರಿಸುವ ಕಾಂಗ್ರೆಸ್ ಪಕ್ಷ ಆ ಕೂಡಲೇ ಜಾಣತನದಿಂದ ಹೊಸ ಅಂಶ ಮುಂದಿಟ್ಟಿತು. ಅದರಂತೆ ಹರಿಪ್ರಸಾದರನ್ನು ಮೊದಲ ಅಭ್ಯರ್ಥಿಯನ್ನಾಗಿಯೂ, ಆಸ್ಕರ್ ಫರ್ನಾಂಡಿಸರನ್ನು ಎರಡನೇ ಅಭ್ಯರ್ಥಿಯನ್ನಾಗಿಯೂ ಕಣಕ್ಕಿಳಿಸುವ ಪ್ರಸ್ತಾಪವನ್ನು ದಳದ ಮುಖಂಡರಿಗೆ ತಲುಪಿಸಿತು. ಇಲ್ಲಿ ಕಾಂಗ್ರೆಸ್‌ನ ಎರಡನೇ ಅಭ್ಯರ್ಥಿ ಗೆಲ್ಲಲು ಮಾತ್ರ ಅದಕ್ಕೆ ಜೆಡಿಎಸ್ ಬೆಂಬಲ ಅಗತ್ಯ ಎಂಬುದನ್ನು ಸ್ಮರಿಸಿಕೊಳ್ಳಬಹುದು. ಕಾಂಗ್ರೆಸ್‌ನ ಈ ಸೂತ್ರ ದೇವೇಗೌಡರ ಸಿಟ್ಟನ್ನು ಇನ್ನಷ್ಟು ಹೆಚ್ಚಿಸಿತೇ ವಿನಃ ಗೌಡರು ಅದಕ್ಕೆ ಸುತರಾಂ ಒಪ್ಪಲೇ ಇಲ್ಲ. ಅದರರ್ಥ ಯಾವುದೇ ಕಾರಣಕ್ಕೂ ಬಿ.ಕೆ.ಹರಿಪ್ರಸಾದ್ ಮತ್ತೆ ರಾಜ್ಯಸಭಾ ಸದಸ್ಯರಾಗುವುದು ದೇವೇಗೌಡರಿಗೆ ಇಷ್ಟವಿಲ್ಲವೆಂಬ ಅಂಶ ಮೇಡಂ ಗಾಂಧಿಗೆ ಗೊತ್ತಾಯಿತು. ಹಾಗಂತ ಮೇಡಂ ಕೂಡಾ ತನ್ನ ಬಲಗೈಯಂತಿರುವ ಹರಿಪ್ರಸಾದರನ್ನು ಗೌಡರಿಗಾಗಿ ತ್ಯಾಗ ಮಾಡಲು ಸಿದ್ಧರಿಲ್ಲ.




ಹರಿಪ್ರಸಾದ್ ಬಗ್ಗೆ ಗೌಡರಿಗೆ ಇಷ್ಟೊಂದು ದ್ವೇಷ ಇರಲು ಅನೇಕ ರಾಜಕೀಯ ಕಾರಣಗಳಿವೆ. ಯುಪಿಎ-2ರ ಅಧಿಕಾರಾವಧಿಯ ಆರಂಭದಲ್ಲಿ "ಯಾವುದೇ ಕಾರಣಕ್ಕೆ ದೇವೇಗೌಡರ ಮಗ ಕುಮಾರಸ್ವಾಮಿಯನ್ನು ಸಚಿವ ಸಂಪುಟಕ್ಕೆ ಸೇರಿಸಬೇಡಿ, ಹಾಗೊಂದು ವೇಳೆ ನೀವು ಸೇರಿಸಿದ್ದೇ ಆದಲ್ಲಿ ಅದು ಕರ್ನಾಟಕದಲ್ಲಿ ಕಾಂಗ್ರೆಸ್ ನಾಶವಾಗಲು ನಾವೇ ಹಾದಿ ಮಾಡಿಕೊಟ್ಟಂತಾಗುತ್ತದೆ" ಎಂದು ಹರಿಪ್ರಸಾದ್ ಕಾಂಗ್ರೆಸ್ ಹೈಕಮಾಂಡಿಗೆ ಮನವರಿಕೆ ಮಾಡಿಕೊಟ್ಟಿದ್ದರು. ಅಷ್ಟೇ ಅಲ್ಲ, ದೇವೇಗೌಡರ ಸಾಂಪ್ರದಾಯಿಕ ಎದುರಾಳಿ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ತುಂಬು ಹೃದಯದಿಂದ ಸ್ವಾಗತಿಸುವಲ್ಲಿ ಹರಿಪ್ರಸಾದ್ ಬಹಳ ದೊಡ್ಡ ಪಾತ್ರ ನಿರ್ವಹಿಸಿದ್ದರು. ಅನೇಕ ಸಂದರ್ಭಗಳಲ್ಲಿ ದೇವೇಗೌಡರ ಬಗ್ಗೆ ಯಾವುದೇ ಮುಲಾಜಿಲ್ಲದೆ ಖಂಡತುಂಡವಾಗಿ ಟೀಕಿಸಿದ ನಾಯಕರಲ್ಲಿ ಹರಿಪ್ರಸಾದ್ ಪ್ರಮುಖರು. ಈ ಎಲ್ಲಾ ಕಾರಣಗಳಿಂದಾಗಿಯೇ ಹರಿಯನ್ನು ರಾಜಕೀಯವಾಗಿ ಹರಿದು ಹಾಕಬೇಕು ಎಂದು ದೇವೇಗೌಡರು ತಂತ್ರ ರೂಪಿಸಿ ಕಾಯುತ್ತಿದ್ದರು.

ದೇವೇಗೌಡರನ್ನು ಕಂಡರೆ ರಾಜ್ಯ ಕಾಂಗ್ರೆಸ್ ನಾಯಕರಲ್ಲಿ ಅನೇಕರಿಗೆ ಇಷ್ಟವಿಲ್ಲ, ಆರ್.ವಿ.ದೇಶಪಾಂಡೆ ಮತ್ತು ಧರ್ಮಸಿಂಗ್ ತರಹದ ಒಂದಿಬ್ಬರನ್ನು ಹೊರತುಪಡಿಸಿದರೆ ಬಹುತೇಕ ಎಲ್ಲಾ ನಾಯಕರು 'ದೇವೇಗೌಡರು ಡೇಂಜರಸ್' ಎಂದು ಹೈಕಮಾಂಡಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ.


ಹೀಗಾಗಿ ಹರಿಪ್ರಸಾದ್ ಅವರ ರಾಜ್ಯಸಭೆಯ ಚುನಾವಣೆಯ ಸ್ಪರ್ಧೆ ರಾಜ್ಯ ಕಾಂಗ್ರೆಸ್ ಘಟಕ ಮತ್ತು ಹೈಕಮಾಂಡ್ ನಡುವೆ ಮನಸ್ತಾಪಕ್ಕೆ ಎಡೆಮಾಡಿಕೊಟ್ಟಿದೆ.

ಕುಮಾರಸ್ವಾಮಿಗೆ ಕ್ಯಾಬಿನೆಟ್ ಬರ್ತ್?

ದೇವೇಗೌಡರು ತಮ್ಮ ರಾಜಕೀಯ ಮುತ್ಸದ್ದಿತನವನ್ನು ತೋರಿಸುವುದೇ ಇಂತಹ ಕ್ಲಿಷ್ಟಕರ ಸಂದರ್ಭಗಳಲ್ಲಿ. ಈಗ ದೇವೇಗೌಡರ ತಂತ್ರಗಳಿಂದ ತತ್ತರಿಸಿ ಹೋಗಿರುವ ಕಾಂಗ್ರೆಸ್ ಪಕ್ಷದ ಮುಂದೆ ಕೆಲವೇ ಕೆಲವು ಆಯ್ಕೆಗಳಿವೆ. ಒಂದು, ಗೌಡರ ಆದೇಶದಂತೆ ಹರಿಪ್ರಸಾದರನ್ನು ಕೈಬಿಡಬೇಕು. ಎರಡು, ಗೌಡರ ಮನವೊಲಿಸಿ ಹರಿಯನ್ನು ಆಯ್ಕೆ ಮಾಡಿದರೆ ಕುಮಾರಸ್ವಾಮಿಯನ್ನು ಕ್ಯಾಬಿನೆಟ್‌ಗೆ ತೆಗೆದುಕೊಳ್ಳುತ್ತೇವೆ ಎಂಬ ಹೊಸ ಸೂತ್ರ ಅನುಸರಿಸಬೇಕು. ಮೂರು, ಈ ಪ್ರಾದೇಶಿಕ ಪಕ್ಷದ ಬ್ಲಾಕ್‌ಮೇಲ್ ತಂತ್ರವನ್ನು ಮಟ್ಟಹಾಕಲೇಬೇಕು ಎಂಬ ತೀರ್ಮಾನಕ್ಕೆ ಬಂದು ಹರಿಪ್ರಸಾದರಿಗೆ ಟಿಕೆಟ್ ನೀಡಬೇಕು. ಈ ಮೂರು ಆಯ್ಕೆಗಳಲ್ಲಿ ಕಾಂಗ್ರೆಸ್ ಹೈಕಮಾಂಡ್ ಯಾವುದನ್ನು ಅನುಸರಿಸುತ್ತದೆ ನೋಡಬೇಕು.



ಇಬ್ಬರ ಜಗಳ ಮೂರನೆಯವರಿಗೆ ಲಾಭ ಎಂಬ ಸಿಂಪಲ್ ಲೆಕ್ಕಾಚಾರ ಈಗ ರಾಜ್ಯ ಸಭಾ ಚುನಾವಣೆಯಲ್ಲೂ ನಿಜವಾಗುವ ಸಾಧ್ಯತೆಯಿದೆ. ಯಾವುದೇ ಕಾರಣಕ್ಕೆ ಮೂರನೆಯ ಅಭ್ಯರ್ಥಿಯನ್ನು ಚುನಾವಣಾ ಅಖಾಡಕ್ಕೆ ಇಳಿಸುವುದಿಲ್ಲ ಎಂದು ಡಂಗೂರ ಬಾರಿಸಿರುವ ಮುಖ್ಯಮಂತ್ರಿ ಯಡಿಯೂರಪ್ಪ ಕಾಂಗ್ರೆಸ್ ಮತ್ತು ದಳ ನಾಯಕರ ಮೈತ್ರಿ ಮುರಿದು ಬಿದ್ದ ಸುದ್ದಿ ಕೇಳಿ ಹರ್ಷಗೊಂಡಿದ್ದಾರೆ. ಒಂದು ವೇಳೆ ಎರಡು ಪಕ್ಷಗಳ ನಡುವೆ ಬಿರುಕು ಮತ್ತು ಭಿನ್ನಾಭಿಪ್ರಾಯ ಹೆಚ್ಚಾದಲ್ಲಿ ನಾವು ಸ್ವತಂತ್ರ ಅಭ್ಯರ್ಥಿಯನ್ನು ಯಾಕೆ ಗೆಲ್ಲಿಸಬಾರದು ಎಂದು ಬಿಜೆಪಿ ನಾಯಕರು ಚಿಂತನೆ ನಡೆಸುತ್ತಿದ್ದಾರೆ.



ಚಿಯರ್ಸ್ ಮಲ್ಯ!

ಅದರಂತೆ ಹಣದ ಥೈಲಿ ಹಿಡಿದುಕೊಂಡು ರೆಡಿಯಾಗಿ ಕಾಯುತ್ತಿರುವ ಲಿಕ್ಕರ್ ದೊರೆ ಡಾ.ವಿಜಯ್ ಮಲ್ಯ ಅಥವಾ ಉದ್ಯಮಿ ಸಜ್ಜನ್ ಜಿಂದಾಲ್ ಇವರಿಬ್ಬರಲ್ಲಿ ಒಬ್ಬರನ್ನು ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿಸುವ ಚಟುವಟಿಕೆಗಳು ತೆರೆಮರೆಯಲ್ಲಿ ನಡೆಯುತ್ತಲೇ ಇದೆ. ಇವರಿಬ್ಬರು ಒಂದು ರೀತಿಯಲ್ಲಿ ಪೇಮೆಂಟ್ ಸೀಟ್ ಅಭ್ಯರ್ಥಿಗಳಂತೆ. ಈ ಹಿಂದೆ ವಿಜಯ್ ಮಲ್ಯ ರಾಜ್ಯಸಭೆ ಚುನಾವಣೆಗೆ ನಿಂತಾಗ ಶಾಸಕರಿಗೆಲ್ಲಾ 'ಸೂಟ್‌ಕೇಸ್'ಗಳನ್ನು ನೀಡಿ ಆಯ್ಕೆಯಾಗಿದ್ದರು. ಈಗ ಅದೇ ತಂತ್ರವನ್ನು ಬಿಜೆಪಿ ಮತ್ತು ದಳದ ನಾಯಕರು ಅನುಸರಿಸುವ ಸಾಧ್ಯತೆ ಕಾಣಿಸುತ್ತಿದೆ. ಹಾಗೇನಾದರೂ ಆಗಿದ್ದೇ ಆದಲ್ಲಿ ಅದು ಕಾಂಗ್ರೆಸ್ ಪಕ್ಷಕ್ಕೆ ನುಂಗಲಾರದ ತುತ್ತಾಗುತ್ತದೆ.

ರಾಜ್ಯಸಭಾ ಚುನಾವಣೆ ಎಂದರೆ ಈಗ ಪ್ರಾದೇಶಿಕ ಪಕ್ಷಗಳ ಪಾಲಿಗೆ ಫಂಡ್‌ರೈಸಿಂಗ್ ಕಾರ್ಯಕ್ರಮವಿದ್ದಂತೆ! ಈ ಕಾರಣಕ್ಕೆ ಕಾಂಗ್ರೆಸ್‌ಗೆ ನಾವು ಯಾಕೆ ಮತ ನೀಡಬೇಕು? ಯಾರು ನಮಗೆ ಆರ್ಥಿಕವಾಗಿ ಹೆಚ್ಚು ಬಲವನ್ನು ತುಂಬುತ್ತಾರೋ ಅಂತಹ ಅಭ್ಯರ್ಥಿಗೆ ಬೆಂಬಲ ಘೋಷಿಸಿದರೆ ತಪ್ಪೇನು ಎಂಬ ತೀರ್ಮಾನಕ್ಕೆ ದೇವೇಗೌಡರು ಬಂದಂತಿದೆ. ಹೀಗಾಗಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡಬೇಕಾದರೆ ನಮ್ಮ ಪಕ್ಷದ ಶಾಸಕರಿಗೆ ತಲಾ ಒಂದೊಂದು ಕೋಟಿ ರೂ. ನೀಡಬೇಕೆಂದು ಗೌಡರು ಡಿಮಾಂಡ್ ಮಾಡಿದ್ದಾರಂತೆ. ಇಷ್ಟೊಂದು ಹಣವನ್ನು ಕೊಟ್ಟೂ, ಜೊತೆಗೆ ವಿಧಾನಪರಿಷತ್‌ನ ಸ್ಥಾನವೊಂದನ್ನು ಅವರಿಗೆ ನೀಡಿದ ನಂತರವೂ, ಆ ಮೂಲಕ ವಿಧಾನ ಪರಿಷತ್‌ನ ವಿಪಕ್ಷ ನಾಯಕಸ್ಥಾನವನ್ನು ಕೂಡಾ ಅವರಿಗೆ ಧಾರೆ ಎರೆಯುವ ಅಗತ್ಯವಾದರೂ ಏನು? ಎಂದು ದೆಹಲಿಯಲ್ಲಿರುವ ಕಾಂಗ್ರೆಸ್ ನಾಯಕರು ಚಿಂತಿಸುತ್ತಿದ್ದಾರೆ.

ಸದ್ಯದ ರಾಜಕೀಯ ಚದುರಂಗದಾಟದಲ್ಲಿ ದೇವೇಗೌಡರು ಅಡ್ವಾಂಟೇಜ್ ಪೊಸಿಷನ್‌ನಲ್ಲಿದ್ದಾರೆ. ಒಂದೋ ವಿಧಾನ ಪರಿಷತ್ ಸ್ಥಾನ ಅಥವಾ ಕುಮಾರಸ್ವಾಮಿಗೆ ಕ್ಯಾಬಿನೆಟ್ ಬರ್ತ್, ಅಥವಾ ಪಕ್ಷಕ್ಕೆ ಫಂಡ್ ಈ ಮೂರರಲ್ಲಿ ಯಾವುದಾದರೂ ಒಂದು ಗಿಟ್ಟುವುದು ಗ್ಯಾರಂಟಿ. ಇದು ಗೌಡರ ರಾಜಕೀಯ ಚಾಣಾಕ್ಷತನಕ್ಕೆ ಸಾಕ್ಷಿ. ಆದರೆ ಕಾಂಗ್ರೆಸ್ ಪಕ್ಷವೂ ಕೂಡಾ ಗೌಡರ ತಂತ್ರಗಾರಿಕೆಗೆ ಪ್ರತಿ ತಂತ್ರಗಾರಿಕೆಯನ್ನು ಹೆಣೆದು ಅವರ ವಿರುದ್ಧ ಸೆಟೆದು ನಿಂತರೂ ಆಶ್ಚರ್ಯವಿಲ್ಲ.

ವೆಂಕಯ್ಯ ನಾಯ್ಡು ಇನ್ ಡೇಂಜರ್

ಒಟ್ಟಾರೆಯಾಗಿ ಕರ್ನಾಟಕದಲ್ಲಿ ರಾಜ್ಯಸಭಾ ಚುನಾವಣೆ ದಿನದಿಂದದಿನಕ್ಕೆ ಹೊಸ ರೂಪ ಪಡೆಯುತ್ತಿದೆ. ಮೂರು ಪಕ್ಷಗಳ ನಾಯಕರು ಕೊನೇಕ್ಷಣದ ತನಕ ಹೊಸಹೊಸ ದಾರಿಯಲ್ಲಿ ಸಾಗಿ ಎದುರಾಳಿಗಳನ್ನು ಮಟ್ಟಹಾಕಲು ತಂತ್ರ ನಡೆಸುತ್ತಲೇ ಇದ್ದಾರೆ. ಇಂತಹ ತಂತ್ರಗಾರಿಕೆಯಲ್ಲಿ ಕೇಳಿಬರುತ್ತಿರುವ ಒಂದು ಸುದ್ದಿಯೆಂದರೆ 'ಕರ್ನಾಟಕದ ಅಭ್ಯರ್ಥಿಗಳಿಗೇ ಮತ ನೀಡಿ' ಎಂದು ದೇವೇಗೌಡರು ಬಹಿರಂಗವಾಗಿ ಶಾಸಕರಿಗೆ ಆತ್ಮಾವಲೋಕನದ ಕರೆನೀಡುವ ಸುದ್ದಿಯೂ ಕೇಳಿ ಬರುತ್ತಿದೆ. ಹಾಗೇನಾದರೂ ಆಗಿದ್ದೇ ಆದಲ್ಲಿ ಬಿಜೆಪಿಯಿಂದ ಮೂರನೆ ಬಾರಿಗೆ ರಾಜ್ಯಸಭಾ ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ಪಡೆದಿರುವ ಆಂಧ್ರದ ವೆಂಕಯ್ಯ ನಾಯ್ಡು ಅವರಿಗೆ ತೊಂದರೆಯಾದರೂ ಆಶ್ಚರ್ಯವಿಲ್ಲ.

ಕಳೆದ ಎರಡು ಬಾರಿ ಕರ್ನಾಟಕದಿಂದ ರಾಜ್ಯ ಸಭೆಯ ಸದಸ್ಯನಾಗಿ ಆಯ್ಕೆಯಾಗಿರುವ ವೆಂಕಯ್ಯ ನಾಯ್ಡು ಬಗ್ಗೆ ಬಿಜೆಪಿಯ ಶಾಸಕರಿಗೆ ತೀವ್ರವಾದ ಅಸಮಾಧಾನವಿದೆ. ಕಳೆದ ಹನ್ನೆರಡು ವರ್ಷಗಳಿಂದ ಸಂಸತ್ತಿನಲ್ಲಿ ಯಾವತ್ತೂ ರಾಜ್ಯದ ಪರ ಧ್ವನಿ ಎತ್ತಿದವರೇ ಅಲ್ಲ ಎಂಬುದು ಅವರ ಮೇಲಿರುವ ಮಹತ್ತರವಾದ ಆರೋಪ. ಅದಕ್ಕೆ ಪೂರಕವೆಂಬಂತೆ ಮೊನ್ನೆ ನಾಮಪತ್ರ ಸಲ್ಲಿಸುವಾಗ "ನಾನು ರಾಷ್ಟ್ರೀಯ ನಾಯಕ, ರಾಷ್ಟ್ರದ ಬಗ್ಗೆ ಚಿಂತಿಸಬೇಕೇ ವಿನಃ ರಾಜ್ಯದ ಸಮಸ್ಯೆಗಳ ಬಗ್ಗೆ ಅಲ್ಲ" ಎಂದು ಹೇಳಿದ್ದು ಶಾಸಕರಿಗೆ ಇನ್ನಷ್ಟು ಸಿಟ್ಟು ಬರಿಸಿದೆ. ಅಷ್ಟೇ ಅಲ್ಲ ವೆಂಕಯ್ಯ ನಾಯ್ಡು ಒಮ್ಮೆ ಇಲ್ಲಿಯ ಶಾಸಕರ ಕೃಪೆಯಿಂದಾಗಿ ಆಯ್ಕೆಯಾಗಿ ಹೋದನಂತರ ಶಾಸಕರಿಗೆ ಎಂದೂ ಸೌಜನ್ಯಕ್ಕಾಗಿಯಾದರೂ ಥ್ಯಾಂಕ್ಸ್ ಹೇಳಿಲ್ಲ, ಪ್ರೀತಿಯಿಂದ ಮಾತನಾಡಿಸಿಲ್ಲ. ಅಷ್ಟೇ ಅಲ್ಲ, ವೆಂಕಯ್ಯ ನಾಯ್ಡುಗೆ ಮತಹಾಕಿದರೆ ಈ ಶಾಸಕರ ಜೇಬೇನೂ ತುಂಬುವುದಿಲ್ಲ.

▶▶ 7

ಯಡವಟ್ಟು ಸರ್ಕಾರಕ್ಕೆ ಎರಡು ವರ್ಷ!

ಮುಖ್ಯಮಂತ್ರಿ ಯಡಿಯೂರಪ್ಪ ಮತ್ತವರ ಟೀಂ ಭರ್ಜರಿ ಖುಷಿಯಲ್ಲಿದೆ. ಅದಕ್ಕೆ ಕಾರಣ-ಸರ್ಕಾರಕ್ಕೆ ಎರಡು ವರ್ಷ ತುಂಬಿದೆ. ಆಡಳಿತ ಯಂತ್ರವೊಂದು ನೆಟ್ಟಗಿದ್ದರೆ ಇದು ಸಂತಸ ಪಡುವಂಥ ವಿಚಾರವೆ. ಆದರೆ ಯಡ್ಡಿ ಕ್ಯಾಬಿನೆಟ್‌ನ ಕಣ್ಣಲ್ಲಿ ಕುಣಿಯುತ್ತಿರುವ ಸಂತಸ ಈ ನೆಲದ ಜನಸಾಮಾನ್ಯರ ಕಣ್ಣಲ್ಲಿ ಸಂಕಟವಾಗಿ ಪ್ರತಿಫಲಿಸುತ್ತಿದೆ!

ಮೇಲ್ಕಂಡ ಪರಿಸ್ಥಿತಿಯೇ ಇದು ಪಕ್ಕಾ ಯಡವಟ್ಟು ಸರ್ಕಾರ ಎಂಬುದಕ್ಕೆ ಪುರಾವೆ ಒದಗಿಸುತ್ತದೆ. ತೀರಾ ಕಟ್ಟರ್ ಬಿಜೆಪಿಗಳನ್ನು ಹೊರತು ಪಡಿಸಿದರೆ ಪ್ರಜ್ಞಾವಂತರ್‍ಯಾರು ಈ ಹುಸಿ ಸಂಭ್ರಮದಲ್ಲಿ ಪಾಲ್ಗೊಳ್ಳಲು ಸಾಧ್ಯವಿಲ್ಲ. ಸಾಮಾನ್ಯ ನಾಗರಿಕರೂ ಹಾದಿಬೀದಿಗಳಲ್ಲಿ 'ಇದ್ಯಾವ ಸೀಮೆ ಸರ್ಕಾರ' ಅಂತ ಛೀಮಾರಿ ಹಾಕುತ್ತಿರುವ ವಿಚಾರ ಕಣ್ಣ ಮುಂದಿರುವಾಗ ಯಡ್ಡಿ ಪಟಾಲಂನ 'ಸಾಧನೆ'ಯ ಹಾಹಾಕಾರಕ್ಕೆ ಅರ್ಥವೆಲ್ಲಿದೆ?

ಯಡಿಯೂರಪ್ಪ ನೇತೃತ್ವದಲ್ಲಿ ಭುಗಿಲೆದ್ದಿರುವ ಈ ಎರಡು ವರ್ಷದ ಸಂಭ್ರಮ ಜನರ ಕಣ್ಣಿಗೆ ಮಣ್ಣೆರಚುವ ಹುನ್ನಾರವಲ್ಲದೆ ಬೇರೇನೂ ಅಲ್ಲ. ಇಂಥ ಸರ್ಕಸ್ಸುಗಳೆಲ್ಲ ಈ ಕ್ಷಣದಲ್ಲಿ ವಾಸ್ತವಕ್ಕೆ ತೇಪೆ ಹಚ್ಚಿದಂತೆ ಕಂಡುಬರಬಹುದು. ಆದರೆ ಈ ಸರ್ಕಾರದ ಹೀನ ಆಡಳಿತ ಶೈಲಿಯನ್ನು ಯಾವತ್ತಿದ್ದರೂ ಮುಚ್ಚಿಡಲು ಸಾಧ್ಯವಿಲ್ಲ.

ಯಡಿಯೂರಪ್ಪ ನೇತೃತ್ವದಲ್ಲಿ ಭುಗಿಲೆದ್ದಿರುವ ಈ ಎರಡು ವರ್ಷದ ಸಂಭ್ರಮ ಜನರ ಕಣ್ಣಿಗೆ ಮಣ್ಣೆರಚುವ ಹುನ್ನಾರವಲ್ಲದೆ ಬೇರೇನೂ ಅಲ್ಲ. ಇಂಥ ಸರ್ಕಸ್ಸುಗಳೆಲ್ಲ ಈ ಕ್ಷಣದಲ್ಲಿ ವಾಸ್ತವಕ್ಕೆ ತೇಪೆ ಹಚ್ಚಿದಂತೆ ಕಂಡುಬರಬಹುದು. ಆದರೆ ಈ ಸರ್ಕಾರದ ಹೀನ ಆಡಳಿತ ಶೈಲಿಯನ್ನು ಯಾವತ್ತಿದ್ದರೂ ಮುಚ್ಚಿಡಲು ಸಾಧ್ಯವಿಲ್ಲ.

ಅಷ್ಟಕ್ಕೂ ಸರ್ಕಾರ ಎರಡು ವರ್ಷ ಪೂರೈಸಿದ್ದನ್ನ ಸಂಭ್ರಮವನ್ನಾಗಿ ಆಚರಿಸುವುದಕ್ಕೆ ಯಾವ ನೈತಿಕತೆಯಿದೆ ಯಡಿಯೂರಪ್ಪನವರಿಗೆ? ಘೋಷಣೆಯಾಗಿ ಕಡತಗಳಲ್ಲೇ ಕೊಳೆಯುತ್ತಿರುವ ಪುಟಗೋಸಿ ಯೋಜನೆಗಳು ಈ ಸರ್ಕಾರದ ಸಾಧನೆಯ ಮಾನದಂಡವೇ? ಈ ಎರಡು ವರ್ಷದ ಅವಧಿಯಲ್ಲಿ ಒಂದೇ ಒಂದು ಹೇಳಿಕೊಳ್ಳುವಂಥ ಜನೋಪಯೋಗಿ ಯೋಜನೆ ಜಾರಿಯಾಗಿದೆಯೇ? ಮುಖ್ಯಮಂತ್ರಿಗಳು ಹಾಗೂ ಇತರೆ ಸಚಿವರುಗಳು ಚೆದೆಗೆ ಬಂದವರಂತೆ ಅಡಿಗಡಿಗೆ ಪ್ರಕಟಿಸಿದ ಅದೆಷ್ಟು ಯೋಜನೆಗಳು ಪೂರ್ಣ ಪ್ರಮಾಣದಲ್ಲಿ ಸಾಕಾರಗೊಂಡಿವೆ? ಇವು ಸದ್ಯ ಉತ್ತರ ಕಂಡುಕೊಳ್ಳಲೇಬೇಕಾದ ಪ್ರಮುಖ ಪ್ರಶ್ನೆಗಳು.

ಮೇಲ್ಕಂಡ ಪ್ರಶ್ನೆಗಳಿಗೆ ಸಿಗುವ ಉತ್ತರ ಬಿಜೆಪಿ ಸರ್ಕಾರವನ್ನು ಸಪಾಟಾಗಿ ಬೆತ್ತಲಾಗಿಸುತ್ತವೆ. ತಾನು ಮಣ್ಣಿನ ಮಗ ಅಂತ ದೇವೇಗೌಡರೇ ಕಂಗಾಲಾಗುವಂತೆ ಹಸಿರು ಶಾಲು ಕೊಡವಿ ಅಧಿಕಾರ ಸ್ವೀಕರಿಸಿದ ಯಡ್ಡಿ ನೊಂದ ರೈತರೆದೆಗೆ ಬಂದೂಕಿನ ಮೊನೆಯಿಟ್ಟರು. ಈ ಆಸಾಮಿಗೆ ಮನದ ಮೂಲೆಯಲ್ಲೆಲ್ಲೂ ರೈತ ಪರ ಕಾಳಜಿಯಿಲ್ಲವೆಂಬುದು ಆರಂಭದಲ್ಲೇ ಸಾಬೀತಾಗಿದೆ. ರಸಗೊಬ್ಬರ, ಬಿತ್ತನೆ ಬೀಜದ ಅಸಮರ್ಪಕ ಪೂರೈಕೆಯಂಥ ಸಮಸ್ಯೆಗಳು ಇಂದಿಗೂ ಮುಂದುವರೆದಿರುವುದು, ಈ ನೆಲದ ರೈತನ ಬದುಕಿಗೆ ಭರವಸೆಯ ಪುಟ್ಟ ಬಿಂದುವೂ ಗೋಚರಿಸದಿರುವುದು ಯಡಿಯೂರಪ್ಪನವರ ನಾಲಾಯಕ್ ಆಡಳಿತಕ್ಕೆ ಹಿಡಿದ ಕೈಗನ್ನಡಿ.


ಒಂದು ರಾಜ್ಯದಲ್ಲಿ ಬೇರ್‍ಯಾವ ಸಮಸ್ಯೆಗಳಿದ್ದರೂ ಸಹ ಶಾಂತಿ, ಸಹಬಾಳ್ವೆಗೆ ಅವಕಾಶವಿದ್ದರೆ ಖಂಡಿತವಾಗಿಯೂ ಜನ ನೆಮ್ಮದಿಯಿಂದಿರುತ್ತಾರೆ. ದುರಂತವೆಂದರೆ ಯಡಿಯೂರಪ್ಪ ಅಧಿಕಾರ ವಹಿಸಿಕೊಂಡ ಬಳಿಕ ಇವರೇ ಸಾಕಿಕೊಂಡು ಬಂದ ಧರ್ಮಾಂಧರ ಹಿಂಡು ನೆಮ್ಮದಿಗೆ ಕಂಟಕವಾಗಿ ಪರಿಣಮಿಸಿದೆ. ಯಡಿಯೂರಪ್ಪನವರಿಗೆ ತಾವು ಎಲ್ಲರ ಮುಖ್ಯಮಂತ್ರಿ ಅಂತ ಫೀಲ್ ಆಗಿದ್ದಿದ್ದರೆ ಶಾಂತಿ ಕಾಯಲು ಟೊಂಕ ಕಟ್ಟುತ್ತಿದ್ದರು. ಆದರೀತ ಒಂದು ವರ್ಗದ ಓಲೈಕೆಗಾಗಿ ಗೋಹತ್ಯೆ ನಿಷೇಧ ಕಾನೂನಿನ ಮೂಲಕ ಬಹುಜನರ ಆಹಾರಕ್ಕೆ ಕನ್ನ ಹಾಕುವ ನೀಚ ಮಟ್ಟಕ್ಕಿಳಿದರು. ಇಂದು ಅದನ್ನೇ ಎರಡು ವರ್ಷದ ಸಾಧನೆಯ ಪಟ್ಟಿಯೊಳಗಿಟ್ಟು, ಮತ್ತಷ್ಟು ಅಸಹ್ಯ ಹುಟ್ಟಿಸಿದ್ದಾರೆ. ಇದೆಲ್ಲ ಈ ಸರ್ಕಾರದ ಅದ್ಯತೆಗಳಿಗೆ ಸ್ಪಷ್ಟ ಸಾಕ್ಷಿಯಂತಿದೆ.

ಬಹುಶಃ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಒಂದೇ ಒಂದು ತಿಂಗಳು ತಗಾದೆಗಳಿಲ್ಲದೆ ನಿರಾತಂಕವಾಗಿ ಆಡಳಿತ ನಡೆಸಿರಲಿಕ್ಕಿಲ್ಲ. ಗಣಿಗಳ್ಳ ಜನಾರ್ದನ ರೆಡ್ಡಿಯಂಥ ಖದೀಮರನ್ನ ಸಂಭಾಳಿಸುವುದೇ ಮುಖ್ಯಮಂತ್ರಿಗಳ ಪಾಲಿಗೆ ಆಡಳಿತವಾಗಿ ಹೋಗಿದೆ. ಜನಾರ್ದನ ರೆಡ್ಡಿ ಹಡಬೆ ಹಣದ ಮದದಿಂದ ರಾಜ್ಯಪಾಲರಿಗೆ ಆವಾಜ್ ಹಾಕಿದರೂ, ಅಡಿಗಡಿಗೆ ಬ್ಲ್ಯಾಕ್‌ಮೇಲ್ ತಂತ್ರ ಅನುಸರಿಸಿದರೂ ಯಡಿಯೂರಪ್ಪ ಜನರ ಕೆಲಸ ಬಿಟ್ಟು ಆತನನ್ನು ಓಲೈಸಲು ನಿಲ್ಲುತ್ತಾರೆ. ಇದು ಅಸಹ್ಯವಲ್ಲದೆ ಮತ್ತೇನು? ಜನಾರ್ದನ ರೆಡ್ಡಿಯಂಥ ಹಣವಂತ ತರಲೆಗಳಿಗೆ ಬಹಿರಂಗವಾಗೊಂದು ಎಚ್ಚರಿಕೆ ಕೊಡದಷ್ಟು ದುರ್ಬಲ ಮನುಷ್ಯನನ್ನು ಮುಖ್ಯಮಂತ್ರಿಯೆಂದು ಒಪ್ಪಿಕೊಳ್ಳುವುದಾದರೂ ಹೇಗೆ?

ಇನ್ನು ಯಡಿಯೂರಪ್ಪನವರ ಕ್ಯಾಬಿನೆಟ್‌ನತ್ತ ತುಸು ಗಮನಹರಿಸಿದರೆ ಒಂದೇ ಒಂದು ನೆಟ್ಟಗಿರುವ ತಲೆಯೂ ಪತ್ತೆಯಾಗುವುದಿಲ್ಲ. ಬದಲಾಗಿ ಅಸಹ್ಯ ಹುಟ್ಟಿಸುವ ಪ್ರಭೃತಿಗಳೇ ಹೆಚ್ಚಾಗಿ ಕಾಣಸಿಗುತ್ತವೆ. ವಹಿಸಿಕೊಂಡ ಖಾತೆಯನ್ನು ಕನಿಷ್ಠ ಘನತೆಯಿಂದ ನಿರ್ವಹಿಸುವ ಮುಖಗಳೂ ವಿರಳ. ಅದೇ ನರ್ಸ್ ರೇಣುಕ, ಜನಾರ್ದನ ರೆಡ್ಡಿ ಇತ್ಯಾದಿ ಇತ್ಯಾದಿ!


ಯಡಿಯೂರಪ್ಪ ತಮ್ಮ ಕ್ಯಾಬಿನೆಟ್‌ಅನ್ನು ನಿರ್ವಹಿಸುತ್ತಿರುವ ಸ್ಥಿತಿಯಂತೂ ತೀರಾ ಶೋಚನೀಯ. ಗಣಿ ರೆಡ್ಡಿಗಳ ಸಪೋರ್ಟು ಕಳಚಿಕೊಳ್ಳುತ್ತದೆಂದಾಕ್ಷಣ ಈ ಆಸಾಮಿ ಎಂಥ ತಗಡು ಆಸಾಮಿಗಳನ್ನಾದರೂ ಸಂಪುಟಕ್ಕೆ ಸೇರಿಸಿಕೊಂಡು, ಇದ್ದುದರಲ್ಲಿ ನೆಟ್ಟಗೆ ಕೆಲಸ ನಿರ್ವಹಿಸುವವರನ್ನು ಕಿತ್ತೊಗೆಯಲೂ ಹೇಸುವುದಿಲ್ಲ. ಇದಕ್ಕೆ ನರ್ಸ್ ರೇಣುಕಾಚಾರ್ಯ ಹಾಗೂ ಶೋಭಾ ಕರಂದ್ಲಾಜೆ ಸ್ಪಷ್ಟ ಉದಾಹರಣೆ.

ಈ ರೀತಿ ಯಾರದೋ ಸೂತ್ರಕ್ಕೆ ಬೊಂಬೆಯಂತೆ ನೇತು ಬಿದ್ದಿರುವ ಯಡಿಯೂರಪ್ಪ ಅಡಿಗಡಿಗೆ



ನಾಲಾಯಕ್ ಮಂತ್ರಿಗಳು

ಅಸಂಬದ್ಧ ಗೃಹ ಸಚಿವ!



ಯಡಿಯೂರಪ್ಪರ ಕ್ಯಾಬಿನೆಟ್ಟೇ ಒಂಥರಾ ವಿಚಿತ್ರ. ವಾಸ್ತವವೆಂದರೆ ಯಾರ್‍ಯಾರು ಯಾವ್ಯಾವ ಖಾತೆಗಳನ್ನ ವಹಿಸಿಕೊಂಡಿದ್ದಾರೆಂಬುದೇ ಹಲವರಿಗೆ ನೆನಪಿಲ್ಲ. ಅದಕ್ಕೆಲ್ಲ ಪ್ರಮುಖ ಕಾರಣ ಯಾರೊಬ್ಬರೂ ತಂತಮ್ಮ ಖಾತೆಗಳಿಗೆ ತಕ್ಕುದಾಗಿ ನಡೆದುಕೊಳ್ಳುತ್ತಿಲ್ಲ. ಈ ಸಾಲಿನಲ್ಲಿ ಮುಂಚೂಣಿಯಲ್ಲಿರುವವರು ಗೃಹ ಸಚಿವ ವಿ.ಎಸ್.ಆಚಾರ್ಯ.

ಮಂಗಳೂರು, ಚಿಕ್ಕಮಗಳೂರು ಮುಂತಾದೆಡೆಗಳಲ್ಲಿ ಚರ್ಚುಗಳ ಮೇಲೆ ದಾಳಿ ನಡೆದ ಸಂದರ್ಭವಿರಬಹುದು, ಭಯೋತ್ಪಾದಕರ ದಾಳಿಯಂಥ ಸಂದರ್ಭವೇ ಇರಬಹುದು-ವಿ.ಎಸ್.ಆಚಾರ್ಯ ಘನತೆಯಿಂದ ವರ್ತಿಸಿದ ಉದಾಹರಣೆಗಳಿಲ್ಲ. ಅವರ ತವರು ನೆಲದಲ್ಲೇ ಪದ್ಮಪ್ರಿಯಾ ಹತ್ಯೆಯಂಥ ಗಂಭೀರ ಪ್ರಕರಣ ನಡೆದರೂ, ಅದರಲ್ಲಿ ಬಿಜೆಪಿ ಶಾಸಕ ರಘುಪತಿ ಭಟ್ಟನೆ ಇದ್ದರೂ ಆಚಾರ್ಯರದ್ದು ಯಥಾ ಲಕ್ಷಣಂ!

ಗೃಹಖಾತೆ ಹೊತ್ತವರೇ ಈ ರೀತಿ ಹೊಣೆಗೇಡಿಗಳಾಗಿರುವಾಗ ಇತರೆ ಖಾತೆಗಳ ಬಗ್ಗೆ ತಲೆಕೆಡಿಸಿಕೊಳ್ಳದಿರುವುದೇ ವಾಸಿ!

ರವೀಂದ್ರನಾಥ್ ಬದುಕಿದ್ದಾರ?




ಇನ್ನೇನು ರಾಜ್ಯಕ್ಕೆ ಮುಂಗಾರುಮಳೆ ಅಡಿಯಿಡುತ್ತಿದೆ. ಇಲ್ಲಿ ಕೃಷಿ ಸಚಿವ ಅಂತೊಬ್ಬ ಬದುಕಿದ್ದರೆ ಖಂಡಿತವಾಗಿಯೂ ಇಷ್ಟರಲ್ಲಾಗಲೇ ಕೃಷಿ ಚಟುವಟಿಕೆ ಬಿರುಸು ಪಡೆದಿರುತ್ತಿತ್ತು, ಆದರೆ ಕೃಷಿ ಪರಿಸರವನ್ನು ಡೋಲಾಯಮಾನ ಪರಿಸ್ಥಿತಿ ಆವರಿಸಿಕೊಂಡು ಬಿಟ್ಟಿದೆ. ಹೀಗಿರುವುದರಿಂದಲೇ ಮೇಲ್ಕಂಡ ಪ್ರಶ್ನೆ ಉದ್ಭವಿಸಿದೆ.

ರವೀಂದ್ರನಾಥ್ ನಾಲಾಯಕ್ ಸಚಿವನೆಂಬ ವಿಚಾರ ಕಳೆದ ಬಾರಿಯೇ ಸಾಬೀತಾಗಿತ್ತು ರಸಗೊಬ್ಬರ ಸಿಗದೆ ಬೀದಿಗಿಳಿದ ರೈತರೆದೆಗೆ ಬುಲೆಟ್ಟು ಬಿದ್ದ ನಂತರದ ಬೆಳವಣಿಗೆಗಳಲ್ಲೇ ರವೀಂದ್ರನಾಥ್‌ರ ಅಯೋಗ್ಯತೆಗಳು ಜಾಹೀರಾಗಿದ್ದವು.

ಅದೀಗ ನಿಚ್ಚಳವಾಗಿದೆ. ಸರ್ಕಾರದ ಕಡೆಯಿಂದ ಇನ್ನೂ ಕೃಷಿ ಚಕ್ರವೆಂಬುದು ಒಂದಿನಿತೂ ಮಿಸುಕಾಡಿಲ್ಲ. ಕೃಷಿ ಸಚಿವನ ಈ ಥರದ ಮಂಪರಿನ ಸ್ಥಿತಿಯಿಂದಲೇ ಮಾಫಿಯಾಗಳು ಮಿಸುಕಾಡಲಾರಂಭಿಸಿವೆ. ಇದೀಗಲೇ ರಾಜ್ಯದ ಹಲವೆಡೆಗಳಲ್ಲಿ ರಸಗೊಬ್ಬರಕ್ಕೆ ಬೂದಿ ಬೆರೆಸಿ ಮಾರಾಟ ಮಾಡುವ ದಂಧೆಗೆ ಚಾಲನೆ ಸಿಕ್ಕಿದೆ. ಬಿತ್ತನೆ ಬೀಜದಿಂದ ಮೊದಲ್ಗೊಂಡು ಕೀಟನಾಶಕ, ಕಳೆನಾಶಕಗಳವರೆಗೆ ಸರ್ಕಾರದ ವತಿಯಿಂದ ರೈತನ ಕೈಸೇರುವ ಪ್ರತಿ ವಸ್ತುವೂ ಕಳಪೆತನದೊಂದಿಗೆ ಹರಿದಾಡಲಾರಂಭಿಸಿದೆ.

ಆದರೆ ಇದೆಲ್ಲವನ್ನ ನಿಯಂತ್ರಿಸಿ ಬಡ ರೈತನ ಬದುಕಿಗೆ ನೆರವಾಗಬೇಕಿರುವ ಕೃಷಿ ಸಚಿವ ನಾಪತ್ತೆ, ಇದಕ್ಕಿಂತ ನಾಲಾಯಕ್‌ತನ ಮತ್ತೊಂದಿದೆಯಾ?

ಅಶೋಕ ಅಧಿಪತ್ಯ



ಬಿಜೆಪಿ ಕ್ಯಾಬಿನೆಟ್‌ನಲ್ಲಿ ಖಾತೆಯ ಬಲದಿಂದ ದೊಡ್ಡ ಮಟ್ಟದಲ್ಲಿ ಹಣ ಹೊಡೆಯುತ್ತಿರುವವರಲ್ಲಿ ಮೊದಲಿಗ ಸಾರಿಗೆ ಸಚಿವ ಆರ್.ಅಶೋಕ್.

ಅಧಿಕಾರಕ್ಕೆ ಬರುತ್ತಲೇ ಹೈಟೆಕ್ ಬಸ್‌ಗಳನ್ನ ರಸ್ತೆಗಿಳಿಸಿ ಮೆರೆದಾಡಿದ ಅಶೋಕ್, ಅಂಥ ಬಸ್‌ಗಳು ಇನ್ನೂ ಖಾಲಿ ಹೊಡೆಯುತ್ತಿದ್ದರೂ ತಲೆಕೆಡಿಸಿಕೊಂಡಿಲ್ಲ. ಇಂಥ ಬಸ್‌ಗಳಿಂದಾಗಿ ಸಾರಿಗೆ ಇಲಾಖೆಗೆ ನಷ್ಟವಾದರೂ ಅದೆಲ್ಲವನ್ನು ತೋರಿಸಿಕೊಳ್ಳದೆ 'ಲಾಭ'ದಲ್ಲಿಟ್ಟಿರುವುದು ಅಶೋಕ್ ಹೆಚ್ಚುಗಾರಿಕೆ. ಇಂಥ ಹೈಟೆಕ್ ಬಸ್ ಖರೀದಿಯಲ್ಲಿ ಅವ್ಯವಹಾರ ನಡೆದಿದೆಯೆಂಬ ಕೂಗು ಸಹ ಇದೀಗ ಹೈಟೆಕ್ ಬಸ್‌ಗಳಂತೆಯೇ ಅನಾಥವಾಗಿರುವುದು 'ಅಶೋಕ ಅಧಿಪತ್ಯ'ದ ಪವರ್‌ಗೆ ಸಾಕ್ಷಿ.

ಹೈಟೆಕ್ ಬಸ್ ಸಂಚರಿಸಿದಾಕ್ಷಣ ಬಡವರ ಬದುಕು ಉದ್ಧಾರವಾಗುತ್ತದೆಂದುಕೊಂಡಂತಿರುವ ಅಶೋಕ್ ಒಲವು ಒಕ್ಕಲಿಗರ ಕೋಟೆ ಕಟ್ಟುವುದರಲ್ಲೇ ನೆಲೆಯಾದಂತಿದೆ.

ಇದ್ದೂ ಇಲ್ಲದಂತಾದ ಶೆಟ್ಟರ್



ರೆಡ್ಡಿಗಳ ಬಾಲ ಹಿಡಿದು ರಚ್ಚೆಹಿಡಿದು, ರಂಪವೆಬ್ಬಿಸಿ ಯಡ್ಡಿ ಕ್ಯಾಬಿನೆಟ್ ಹೊಕ್ಕಾತ ಜಗದೀಶ್ ಶೆಟ್ಟರ್. ಉದಾರಿ ಯಡಿಯೂರಪ್ಪ ಕರಂದ್ಲಾಜೆಯಿಂದ ಕಸಿದುಕೊಂಡ ಗ್ರಾಮೀಣಾಭಿವೃದ್ಧಿ ಖಾತೆಯನ್ನು ಜಗದೀಶ್‌ನ ಉಡಿ ತುಂಬಿದರು. ಆದರೀಗ 'ಆವಯ್ಯ ಯಾತಕ್ಕೆ ಮಂತ್ರಿ ಆದ್ನೋ' ಅಂತ ಜನಸಾಮಾನ್ಯರು ಗೋಳಾಡುವಂತಾಗಿದೆ. ಯಾಕೆಂದರೆ ಈ ಆಸಾಮಿಯ ನಾಲಾಯಕ್‌ತನದಿಂದಾಗಿ ಸರ್ಕಾರದ ದುಡ್ಡು ಕೋಟಿಗಳ ಲೆಕ್ಕದಲ್ಲಿ ಕಳ್ಳರ ಪಾಲಾಗುತ್ತಿದೆ.

ಕೇಂದ್ರ ಸರ್ಕಾರದಿಂದ ಗ್ರಾಮೀಣಾಭಿವೃದ್ಧಿಯ ಉದ್ದೇಶದಿಂದ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಹೆಸರಲ್ಲಿ ಸಾವಿರಾರು ಕೋಟಿ ರೂ. ಗ್ರಾಮ್ಯ ಪ್ರದೇಶಗಳತ್ತ ಹರಿದುಬರುತ್ತಿದೆ. ಅದೆಲ್ಲ ಈಗ ಗ್ರಾಮ ಮಟ್ಟದಲ್ಲಿ ಕೊಳ್ಳೆ ಹೋಗುತ್ತಿದೆ. ಗ್ರಾಮ ಪಂಚಾಯ್ತಿ ಮಟ್ಟದ ಪುಢಾರಿಗಳಿಂದ ಮೊದಲ್ಗೊಂಡು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು, ಇಓಗಳು ಸಹಭೋಜನ ನಡೆಸುತ್ತಿದ್ದಾರೆ. ಇದೇ ಕಾರಣದಿಂದ ಪ್ರತಿ ಜಿಲ್ಲೆಯಲ್ಲಿ ಡಜನ್‌ಗಟ್ಟಲೆ ಗ್ರಾ.ಪಂ. ಕಾರ್ಯದರ್ಶಿಗಳು ಅಮಾನತುಗೊಳ್ಳುತ್ತಿದ್ದಾರೆ. ಇಷ್ಟೆಲ್ಲ ನಡೆದರೂ ಖಾತೆಯ ಜವಾಬ್ದಾರಿ ಹೊತ್ತ ಜಗದೀಶ್ ಶೆಟ್ಟರ್ ಕ್ರಮತೆಗೆದುಕೊಳ್ಳುವ ಔಚಿತ್ಯ ತೋರುತ್ತಿಲ್ಲ. ಹೊಟ್ಟೆ ಸೇರಿದ ಪಾಪದ ಹಣ ಬಾಯಿ ಕಟ್ಟಿಸಿರಬಹುದೇ?!

ಕಟ್ಟಾ ಟೋಪಿ ಇಟ್ಟ!



ಬಿಜೆಪಿ ಸರ್ಕಾರದ ಕಾರ್ಯಕ್ಷಮತೆಯ ಪ್ರತೀಕದಂತಿರುವಾತ ಕಟ್ಟಾ ಸುಬ್ರಮಣ್ಯನಾಯ್ಡು. ಕಟ್ಟರ್ ಭೂಮಾಫಿಯಾ ದೊರೆಯಾಗಿರುವ ಈತನಿಗೆ ಮಾನ್ಯ ಮುಖ್ಯಮಂತ್ರಿಗಳು ಮಾಹಿತಿ ತಂತ್ರಜ್ಞಾನ ಮತ್ತು ವಾರ್ತಾ ಪ್ರಸಾರ ಖಾತೆ ಸಚಿವನೆಂಬ ಕಿರೀಟ ತೊಡಿಸಿದ್ದಾರೆ. ಜನಪರತೆಯೆಂಬುದರ ಗಂಧಗಾಳಿಯಿಲ್ಲದ ಈತ ಆ ಕಿರೀಟದ ಬಲದಿಂದಲೇ ಹಳೇ ದಂಧೆಗಳಿಗೆ ಜೀವ ನೀಡಿ ಭರ್ಜರಿ ಕಾಸೆತ್ತುತ್ತಿದ್ದಾನೆ. ತನ್ಮೂಲಕ ತನ್ನ ನೆತ್ತಿಯ ಮೇಲಿರುವ ಟೋಪಿಯನ್ನು ಇಡೀ ಕರ್ನಾಟಕಕ್ಕೆ ಕವುಚಿ ವಿಜೃಂಭಿಸುತ್ತಿದ್ದಾನೆ.

ಜನಪ್ರತಿನಿಧಿಗಳಿಲ್ಲದ ಅವಧಿಯಲ್ಲಿ ಬಿಬಿಎಂಪಿಯೊಳಗೆ ಅಧಿಪತ್ಯ ಸಾಧಿಸಿದ್ದ ಕಟ್ಟಾ ಕೆಲ ಅಧಿಕಾರಿಗಳನ್ನು ಪಳಗಿಸಿಕೊಂಡು ಲ್ಯಾಂಡ್ ಮಾಫಿಯಾ ಹರಡಿದ. ತನ್ನ ಮಗ ಜಗದೀಶ್ ನಾಯ್ಡುವನ್ನೇ ಬಿಬಿಎಂಪಿ ಅಧಿಪತಿಯನ್ನಾಗಿಸಲು ಹವಣಿಸಿ ಸೋತ. ವೆಂಕಯ್ಯನಾಯ್ಡು ಎಂಬ ಪವರ್ ಬ್ರೋಕರ್‌ಗಳನ್ನು ರಾಜ್ಯಸಭಾ ಸದಸ್ಯನನ್ನಾಗಿಸಿ ಆ ಕಡೆಯಿಂದಲೂ ಲಾಭ ಗಿಟ್ಟಿಸಿಕೊಂಡ. ಇಷ್ಟರ ಹೊರತಾಗಿ ಕಟ್ಟಾ ಕಿಸಿದಿದ್ದೇನೂ ಇಲ್ಲ. ಇಂಥಾ ಲೋಭ ಪುರುಷ ಜನರ ಬಗೆಗಿರಲಿ, ತನ್ನ ಪಕ್ಷ ಬಿಜೆಪಿಯ ಬಗೆಗೂ ತಲೆಕೆಡಿಸಿಕೊಳ್ಳುವುದಿಲ್ಲ. ಇಂಥವನಿಗೆ ಸಚಿವಗಿರಿ ಕೊಟ್ಟ ಯಡ್ಡಿಗೆ ಏನೆನ್ನಬೇಕು?



ಡವಟ್ಟುಗಳನ್ನೇ ಸೃಷ್ಟಿಸುತ್ತಿದ್ದಾರೆ. ಇಂಥದ್ದರ ನಡುವೆ ನಕಲ್ಯಾಣ, ಅಭಿವೃದ್ಧಿಯತ್ತ ಕಡೆಗಣ್ಣಿಂದ ನೋಡಲೂ ರುಸೊತ್ತಿಲ್ಲವಾಗಿದೆ. 'ಅಭಿವೃದ್ಧಿಯಾಗುತ್ತಿಲ್ಲ' ಅಂತ ಗಿದಾಕ್ಷಣ ರಪ್ಪನೆ ಒಂದು ಯೋಜನೆ ಒಗೆದು ಬಿಡುವ ಳಿ ಯಡ್ಡಿಗೆ ಅಭ್ಯಾಸವಾಗಿದೆ. ಇಂಥ ಬಹುತೇಕ ೋಜನೆಗಳು ಸರ್ಕಾರದ ಅವಧಿ ಮುಗಿದರೂ ಕಿಯಿರುತ್ತವೆಂಬುದು ಖಂಡಿತ ಅತಿಶಯೋಕ್ತಿಯಲ್ಲ.

ಈ ರೀತಿ ಆಡಳಿತ ನಿರ್ವಹಣೆಯಲ್ಲಿ ಯನೀಯವಾಗಿ ಎಡವಿ ಬಿದ್ದಿರುವ ಯಡಿಯೂರಪ್ಪ ಡಂಬರದ ಮೂಲಕ ಹುಳುಕು ಮುಚ್ಚಿಕೊಳ್ಳಲು ಪ್ರಯತ್ನ ನಡೆಸುತ್ತಿದ್ದಾರೆ. ಇದರು ಜೊತೆಗೆ ಬಸುರಿ, ಣಂತಿ ಅಂತೆಲ್ಲ ಭತ್ಯೆಗಳನ್ನ ನೀಡುತ್ತಾ ಜನಸಾಮಾನ್ಯರಿಗೆ ಳಿತ ತಲುಪುತ್ತಿರುವಂತೆ ಭ್ರಮೆ ಬಿತ್ತುತ್ತಿದ್ದಾರೆ. ತೀರಾ ಡಜನರಿಗೆ ಉಪಯೋಗವಾಗುವಂಥ ಯೋಜನೆಗಳು ಸರ್ಕಾರದ ಕಡೆಯಿಂದ ಬಂದಿಲ್ಲ, ಬಂದಿದ್ದರೂ ಥವು ಅನುಷ್ಠಾನಗೊಂಡಿಲ್ಲ.

ವಿಷಯ ಹೀಗೆಲ್ಲಾ ವಿಷಮ ಸ್ಥಿತಿಯಲ್ಲಿರುವಾಗ ಡು ವರ್ಷ ಪೂರೈಸಿದ್ದನ್ನೇ ಸಾಧನೆಯೆಂಬಂತೆ ಬಿಸಿಕೊಳ್ಳುವುದು ಪಕ್ಕಾ ನಾಚಿಕೆಗೇಡಿನ ವಿಚಾರ. ದು ಸರ್ಕಾರ ನಿಜವಾಗಿಯೂ ಅಭಿವೃದ್ಧಿಯ ವಿದ್ದರೆ ಜನರೇ ಖುದ್ದಾಗಿ ಅದರ ವರ್ಷಾಚರಣೆಗಳನ್ನ ಭ್ರಮಿಸುತ್ತಾರೆ. ಆದಿಲ್ಲದೆ ಹೋದಾಗ ಸಾಧನೆಯ ಪದಲ್ಲಿ ಸರ್ಕಾರದ ಇರುವಿಕೆಯನ್ನೇ ಕಾಲಕಾಲಕ್ಕೆ ಪಿಸಬೇಕಾಗುತ್ತದೆ! ಸದ್ಯ ಯಡಿಯೂರಪ್ಪ ಅಂತಹುದೇ ಯಲ್ಲಿದ್ದಾರೆ.

ಇನ್ನಾದರೂ ನೈಜ ಅಭಿವೃದ್ಧಿಯತ್ತ ಗಮನ ಸದಿದ್ದರೆ ಸರ್ಕಾರಕ್ಕೆ ಮೂರು ವರ್ಷ ತುಂಬುತ್ತದೆ. ಲ್ಕರ ಗಡಿದಾಟಿ ಐದು ವರ್ಷದ ತುದಿಯನ್ನು ಟ್ಟುತ್ತದೆ. ನಂತರ ಯಡಿಯೂರಪ್ಪಾದಿಯಾಗಿ ಬಿಜೆಪಿ ಬಿನೆಟ್ಟು ಬೇಕಾದ ಹಾಗೆ 'ಸಾಧನೆ'ಯನ್ನು ಮೆಲುಕು ಕಬಹುದು; ಅವರವರ ಮನೆಗಳಲ್ಲಿ!

ಅಷ್ಟಕ್ಕೂ ಯಡವಟ್ಟು ಸರ್ಕಾರವೊಂದಕ್ಕೆ ಎರಡು ರ್ಷ ತುಂಬಿರುವುದಕ್ಕೆ ಕನಿಕರ ಪಟ್ಟುಕೊಳ್ಳಬೇಕು; ಭ್ರಮವನ್ನಲ್ಲ.

ಪ್ರವಾಹ ಪರಿಹಾರ 600 ಕೋಟಿ ಮಂಗಮಾಯ!



ಹಣ ಕಬಳಿಕೆಯ ವಿಚಾರದಲ್ಲಿ ಬಿಜೆಪಿ ಸರ್ಕಾರ ಯಾವ ಹಂತ ತಲುಪಿದೆಯೆನ್ನುವುದಕ್ಕೆ ಇದೊಂದು ಸಣ್ಣ ಉದಾಹರಣೆ ಸಾಕು. ಜೊತೆಗೆ ಸರ್ಕಾರದ ಕಾರ್ಯಕ್ಷಮತೆಗೂ ಇದು ಕೈಗನ್ನಡಿ. ಅದು ಪ್ರವಾಹ ಪರಿಹಾರದಲ್ಲಿ ಸಂಗ್ರಹವಾಗಿದ್ದ 600 ಕೋಟಿಗೂ ಮೀರಿ ಹಣ ಮಂಗಮಾಯವಾದ ಸುದ್ದಿ!

ಪ್ರವಾಹ ಬಂದು ಹೋಗಿ ವರ್ಷ ಕಳೆದರೂ ಆ ಭಾಗಗಳ ಜನರ ಬದುಕಿನ್ನೂ ಹಾಗೇ ಇದೆ. ಬಹುಶಃ ಕೆಲ ಸಂಘಸಂಸ್ಥೆಗಳು ನೇರವಾಗಿ ಕೊಟ್ಟ ಪರಿಕರಗಳೇ ಈ ಪಾಪದ ಜೀವಗಳಿಗೆ ಸಿಕ್ಕ ಆಸರೆಯಾಗಿರಬೇಕು. ಸರ್ಕಾರದ ಕಡೆಯಿಂದ ಅಂಥಾದ್ದ್ಯಾವುದೇ ಪ್ರಯೋಜನವಾಗಿಲ್ಲವೆಂಬುದು ಕಟುಸತ್ಯ.

ಆ ಕಡೆಯಿಂದ ಪ್ರವಾಹ ಇಳಿಯುತ್ತಲೇ ಬೆಂಗಳೂರಿನ ಬೀದಿಗಿಳಿದು ಚಂದಾ ಎತ್ತಲು ಶುರುವಿಟ್ಟ ಯಡಿಯೂರಪ್ಪ ಕೋಟಿಗಳ ಲೆಕ್ಕ ಕೊಟ್ಟಿದ್ದರು. ಇಲ್ಲಿನ ಅಮಾಯಕ ಮಂದಿ ಆ ಹಣದಿಂದಲೇ ಪ್ರವಾಹಪೀಡಿತರ ಬದುಕು ಉದ್ಧಾರವಾಗುತ್ತದೆ ಅಂದುಕೊಂಡಿದ್ದರು.

ಆದರೀಗ ಸರ್ಕಾರವೇ ತಪ್ಪೊಪ್ಪಿಕೊಂಡಿದೆ. ಕೆಲವೇ ಕೆಲ ಮನೆಗಳನ್ನು ಹೊರತುಪಡಿಸಿದರೆ ನಿರಾಶ್ರಿತರಿಗೆ ಸೂರು ಕಟ್ಟಿಕೊಟ್ಟಿಲ್ಲವೆಂಬುದು ಜಾಹೀರಾಗಿದೆ. ಇದೆಂಥ ವಿಪರ್ಯಾಸ? ತೀರಾ ಸರ್ಕಾರದ ಹಣ ಹಾಳು ಬಿದ್ದುಹೋಗಲಿ, ಜನಸಾಮಾನ್ಯರು, ಸಂಘಸಂಸ್ಥೆಗಳು ಹಾಗೂ ಕೆಲ ಮಠಮಾನ್ಯಗಳು ನೀಡಿದ ದೇಣಿಗೆಯಿಂದಲೇ ಪ್ರವಾಹ ಪೀಡಿತರಿಗೆ ಬದುಕು ಕಟ್ಟಿಕೊಡ ಬಹುದಿತ್ತಲ್ಲಾ?

ಹೀಗೆ ಶೇಖರಣೆಯಾದ ಹಣದ ಮೊತ್ತವೇ ಅಂದಾಜು 600 ಕೋಟಿ. ಈ ಹಣ ಏನಾಯಿತು? ಇದು ಜ್ವಲಂತ ಪ್ರಶ್ನೆ. ಆದರಿದಕ್ಕೆ ಆ ಭಾಗದ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಅಷ್ಟೇ ಯಾಕೆ ಖುದ್ದು ಯಡಿಯೂರಪ್ಪರಿಗೂ ಉತ್ತರ ಗೊತ್ತಿರಲಿಕ್ಕಿಲ್ಲ!

ಈಗ ಎರಡು ವರ್ಷ ಪೂರೈಸಿ 'ಸಾಧನೆ'ಯ ಪೋಸುಕೊಡುತ್ತಿರುವ ಬಿಜೆಪಿಯ ಆಡಳಿತ ವೈಖರಿಗೆ ಇದಕ್ಕಿಂತ ಅವಮರ್ಯಾದೆ ಇನ್ನೊಂದಿಲ್ಲ. ತೀರಾ ನೊಂದವರ ಬದುಕುಗಳಲ್ಲೂ ಈ ಪರಿ ಚೆಲ್ಲಾಟವಾಡುವ ಸರ್ಕಾರ ಅದೆಷ್ಟೇ ವರ್ಷ ಪೂರೈಸಿದರೂ ಪ್ರಯೋಜನವಿಲ್ಲ.

▶▶ 5 ದೇವೇಗೌಡ ಕಿರಿಕ್

ತಾನೇ? ಈ ಎಲ್ಲಾ ಕಾರಣಗಳಿಂದ ವೆಂಕಯ್ಯ ನಾಯ್ಡು ಮೇಲಿರುವ ಸಿಟ್ಟು ಮುಗಿಲೇರುವ ಸಾಧ್ಯತೆ ಕೂಡಾ ತಳ್ಳಿಹಾಕುವಂತಿಲ್ಲ. ಪಕ್ಷದ ವಿಪ್‌ಅನ್ನು ಬದಿಗಿಟ್ಟು ನಮ್ಮ ಶಾಸಕರು ಕನ್ನಡ ಪ್ರೇಮವನ್ನು ತೋರಿಸಿದ್ದೇ ಆದಲ್ಲಿ ವೆಂಕಯ್ಯ ನಾಯ್ಡು ಎಂಬ ಸೈತಾನ ಈ ಬಾರಿ ಮುಗ್ಗರಿಸಬಹುದು.

ಋಣ ತೀರಿಸಿದ ಯಡ್ಡಿ

ರಾಜ್ಯಸಭಾ ಚುನಾವಣೆಯಲ್ಲಿ ದೇವೇಗೌಡರಂತೆಯೇ ರಾಜಕೀಯ ಚತುರತೆಯನ್ನು ಪ್ರದರ್ಶಿಸಿದ ಮತ್ತೊಬ್ಬ ವ್ಯಕ್ತಿ ಎಂದರೆ ಮುಖ್ಯಮಂತ್ರಿ ಯಡಿಯೂರಪ್ಪ. ರಾಜ್ಯಸಭೆ ಚುನಾವಣೆ ಘೋಷಣೆಯಾದ ತಕ್ಷಣ ಬಿಜೆಪಿ ವಲಯದಿಂದ ತೇಲಿಬಂದ ಹೆಸರುಗಳೆಂದರೆ ವಾಮನಾಚಾರ್ಯ, ಡಾ.ವಿಎಸ್.ಆಚಾರ್ಯ.... ಮೊದಲಾದವರು. ಆದರೆ ಪಕ್ಷದ ಅಭ್ಯರ್ಥಿಯ ಪಟ್ಟಿ ಘೋಷಣೆಯಾದಾಗ ಎರಡನೇ ಅಭ್ಯರ್ಥಿಯಾಗಿ ಆಯನೂರು ಮಂಜುನಾಥ್ ಕಾಣಿಸಿಕೊಂಡಿದ್ದಾರೆ. ಇದು ಪಕ್ಷದಲ್ಲಿ ಬಹುತೇಕ ಎಲ್ಲರಿಗೂ ಅಚ್ಚರಿ ಮೂಡಿಸಿದೆ.


ಶಿವಮೊಗ್ಗದವರೇ ಆದ ಆಯನೂರು ಮಂಜುನಾಥ್ ಅವರನ್ನು ಆಯ್ಕೆ ಮಾಡುವ ಮುಖಾಂತರ ಯಡ್ಡಿ ಒಂದು ರೀತಿಯಲ್ಲಿ ಅವರ ಋಣವನ್ನು ತೀರಿಸಿದರೆ ಮತ್ತೊಂದು ರೀತಿಯಲ್ಲಿ ತನ್ನ ಮಗ ರಾಘವೇಂದ್ರನ ರಾಜಕೀಯ ಜೀವನ ಸುಗಮವಾಗಿ ಸಾಗುವಂತೆ ನೋಡಿಕೊಂಡಿದ್ದಾರೆ. ಮೊನ್ನೆ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ತಾನೇ ಅಭ್ಯರ್ಥಿಯಾಗುವ ಬದಲು ರಾಘವೇಂದ್ರನಿಗೆ ಆಯನೂರು ಅವಕಾಶ ಮಾಡಿಕೊಟ್ಟದ್ದು ಮಾತ್ರವಲ್ಲ; ರಾಘವೇಂದ್ರನ ಜಯದಲ್ಲಿ ಪ್ರಮುಖ ಪಾತ್ರವನ್ನೂ ಆಯನೂರು ವಹಿಸಿದ್ದರು. ಆ ಕಾರಣಕ್ಕೇ ಆಯನೂರು ಮಂಜುನಾಥ್‌ಗೆ ರಾಜಸಭಾ ಸ್ಥಾನವನ್ನು ಬಹುಮಾನ ರೂಪದಲ್ಲಿ ನೀಡಿರುವ ಯಡ್ಡಿ ತನ್ನ ಋಣವನ್ನು ತೀರಿಸಿದ್ದಾರೆ. ಅಷ್ಟೇ ಅಲ್ಲ, ಆಯನೂರು ಮಂಜುನಾಥ್‌ನ ಆಯ್ಕೆ ಮಾಡುವ ಮೂಲಕ ತಾನಿನ್ನೂ ಬಲಿಷ್ಠ ಮತ್ತು ದೆಹಲಿ ನಾಯಕರ ಜೊತೆಗೆ ತನಗೆ ಒಳ್ಳೆಯ ಸಂಬಂಧವಿದೆ ಎಂಬುದನ್ನು ಶಾಸಕರಿಗೆ ಪರೋಕ್ಷವಾಗಿ ಯಡಿಯೂರಪ್ಪ ತಿಳಿಸಿಕೊಟ್ಟಿದ್ದಾರೆ. ಆದರೂ ಕಾಂಗ್ರೆ ಪಕ್ಷಕ್ಕೆ ವಲಸೆ ಹೋಗಿ ಮತ್ತೆ ಬಿಜೆಪಿಗೆ ಬಂದಿರುವ ಆಯನೂರು ಮಂಜುನಾಥ್‌ಗೆ ಯಡ್ಡಿ ಇಷ್ಟು ದೊಡ್ಡ ಸ್ಥಾನವನ್ನು ನೀಡಿದ್ದರ ಬಗ್ಗೆ ಅನೇಕರಿಗೆ ಅಸಮಾಧಾನವಿದೆ. ಆದರೂ ಆಯನೂರು ಮಂಜುನಾಥ್ ವ್ಯಕ್ತಿಗತವಾಗಿ ಒಳ್ಳೆಯ ಮನುಷ್ಯನಾಗಿರುವುದರಿಂದ ಇವರ ಆಯ್ಕೆಯ ಬಗ್ಗೆ ಅಂತಹ ಪ್ರಬಲ ವಿರೋಧಗಳೇನೂ ಇಲ್ಲ.

ಅಂತೂ ರಾಜ್ಯಸಭಾ ಚುನಾವಣೆಯ ನೆಪದಲ್ಲಿ ರಾಜ್ಯ ರಾಜಕೀಯದಲ್ಲಿ ಮೈತ್ರಿಯ ಹೊಸ ಅಧ್ಯಾಯ ಆರಂಭವಾಗಲಿದೆ. ಕಾಂಗ್ರೆ ಜೆಡಿಎಸ್ ಮೈತ್ರಿ ಗಟ್ಟಿಯಾದರೆ ಬಿಜೆಪಿಯ ನಾಗಾಲೋಟಕ್ಕೆ ಕಡಿವಾಣ ಹಾಕಿದಂತೆ! ಇವರಿಬ್ಬರ ಮೈತ್ರಿ ಮುರಿದುಬಿದ್ದಲ್ಲಿ ಬಿಜೆಪಿ ಮೂರನೆಯ ಅಭ್ಯರ್ಥಿಯಾಗಿ ಶ್ರೀಮಂತ ಉದ್ಯಮಿಯೊಬ್ಬರನ್ನು ಹಿಂಬಾಗಿಲಿನಿಂದ ನಿಲ್ಲಿಸಿ ತಮ್ಮ ಬೇಳೆಯನ್ನು ಬೇಯಿಸಿ ಕೊಳ್ಳಬಹುದು, ಜೇಬನ್ನೂ ತುಂಬಿಸಿಕೊಳ್ಳಬಹುದು!

ಕಳೆದ ಹನ್ನೆರಡು ವರ್ಷಗಳಲ್ಲಿ ಎಂದೂ ರಾಜ್ಯದ ಪರ ಧ್ವನಿಯೆತ್ತದ ವೆಂಕಯ್ಯ ನಾಯ್ಡು ಮೂರನೇ ಬಾರಿಗೆ ಪುನಃ ಆಯ್ಕೆಯಾಗುತ್ತಿರುವುದು ಕೂಡಾ ಕನ್ನಡಿಗರ ದೌರ್ಭಾಗ್ಯವೇ ಸರಿ. ನಾಲ್ಕು ಸ್ಥಾನಕ್ಕಾಗಿ ನಡೆಯುತ್ತಿರುವ ರಾಜ್ಯಸಭಾ ಚುನಾವಣೆಗಾಗಿ ಎರಡು ರಾಷ್ಟ್ರೀಯ ಪಕ್ಷಗಳನ್ನು ಪ್ರಾದೇಶಿಕ ಪಕ್ಷವಾದ ಜನತಾದಳ ಆಟವಾಡಿಸುತ್ತಿರುವುದು ಕೂಡಾ ತಮಾಷೆಯೇ ಸರಿ.

• ಸದಾಶಿವ ಶೆಣೈ
shenoylankesh@gmail.com

ರವಿಶಂಕರ್ ಗುರೂಜಿ ಬಿಜೆಪಿ ಪಕ್ಷದ ಸೇಫ್‌ಡಿಪಾಸಿಟ್ ಲಾಕರ್



ಚೆಳ್ಳಕೆರೆಯಲ್ಲಿ ಬಸ್ ದುರಂತ ಸಂಭವಿಸಿ 30 ಜನ ಸಜೀವ ದಹನಗೊಂಡರೂ ಅಲ್ಲಿಗೆ ಭೇಟಿ ನೀಡಿ ನೊಂದವರಿಗೆ ಸಾಂತ್ವನವನ್ನು ಹೇಳುವ ಸೌಜನ್ಯವನ್ನೂ ತೋರದ ಮುಖ್ಯಮಂತ್ರಿ ಯಡಿಯೂರಪ್ಪ, ಅದೇ ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್ ಗುರೂಜಿಯ 'ಹತ್ಯಾ' ಪ್ರಯತ್ನ ಸುದ್ದಿ ತಿಳಿದಾಕ್ಷಣ ಅವರ ಆಶ್ರಮಕ್ಕೆ ದೌಡಾಯಿಸಿ ಅವರಿಗೆ ಸಮಾಧಾನ ಹೇಳಿದರು. ಇದರಿಂದಲೇ ಸಾಮಾನ್ಯರ ಜೀವದ ಬಗ್ಗೆ ಯಡ್ಡಿಗೆ ಬೆಲೆಯಿಲ್ಲದಿರುವುದು ಗೊತ್ತಾಗುತ್ತದೆ. ಇಷ್ಟಕ್ಕೂ ಚಿತ್ರದುರ್ಗಕ್ಕೆ ಹೋಗಲು ಮುಖ್ಯಮಂತ್ರಿಗೆ ಎಷ್ಟು ಗಂಟೆ ಬೇಕಾಗುತ್ತಿತ್ತು ಅಲ್ಲವೇ?

ರವಿಶಂಕರ್ ಗುರೂಜಿಯ ಬಗ್ಗೆ ಇಷ್ಟೊಂದು ಪ್ರೀತಿಯನ್ನು ತೋರಿಸಿದ್ದು ಯಡ್ಡಿ ಮಾತ್ರವಲ್ಲ. ಅವರ ಬಿಜೆಪಿ ಪಕ್ಷದ ರಾಷ್ಟ್ರೀಯ ನಾಯಕ ಗಡ್ಕರಿ ಕೂಡಾ ಬಾಯಿ ಬಡಿದುಕೊಂಡು "ಗುರೂಜಿಗೆ ಸೂಕ್ತ ರಕ್ಷಣೆ ನೀಡಿ" ಎಂದು ಬೊಬ್ಬೆಹಾಕಿದರು. ಬಿಜೆಪಿಯ ಮಾಜಿ ಅಧ್ಯಕ್ಷ ಅಧ್ವಾನಿ ಕೂಡಾ ರವಿಶಂಕರ್ ಗುರೂಜಿಗೆ ಫೋನ್ ಮಾಡಿ ಅವರ ಆರೋಗ್ಯದ ಬಗ್ಗೆ ವಿಚಾರಿಸಿಕೊಂಡರು.

ಆದರೆ ಬಿಜೆಪಿ ನಾಯಕರನ್ನು ಹೊರತುಪಡಿಸಿ ಬೇರೆ ಯಾವ ಪಕ್ಷದ ನಾಯಕರಾರೂ ಈ ಡೋಂಗಿ ಗುರೂಜಿಯ ಆರೋಗ್ಯವನ್ನು ವಿಚಾರಿಸುವ ತೊಂದರೆಯನ್ನು ತೆಗೆದುಕೊಳ್ಳಲಿಲ್ಲ. ಇದಕ್ಕೆ ಪೂರಕವೆಂಬಂತೆ ಕೇಂದ್ರ ಗೃಹ ಸಚಿವ ಚಿದಂಬರಂ ಕೂಡಾ ಇದೊಂದು ಮಾಮೂಲಿ ಪ್ರಕರಣವೆಂಬಂತೆ ಪ್ರತಿಕ್ರಿಯಿಸಿ, ರಾಜ್ಯದ ಪೊಲೀಸ್ ಮಹಾನಿರ್ದೇಶಕ ಹೇಳಿದ್ದನ್ನೇ ಪುನರುಚ್ಚರಿಸಿ ಇದೀ 'ಹತ್ಯಾ ಯತ್ನ' ನಾಟಕವನ್ನು ನಿರ್ಲಕ್ಷಿಸಿದರು. ಈ ಸಂದರ್ಭದಲ್ಲೇ ತನ್ನ ಹಾಳ್ಮೆಯನ್ನು ಕಳೆದುಕೊಂಡ ಗುರೂಜಿ ಇದೊಂದು ಮಾಮೂಲಿ ಪ್ರಕರಣವೆಂದು ಪರಿಗಣಿಸದೇ, ಗಂಭೀರವಾಗಿ ಸ್ವೀಕರಿಸಬೇಕು ಎಂದು ರಾಜ್ಯ ಪೊಲೀಸರಿಗೆ ಲೈಟಾಗಿ ರೋಫು ಹೊಡೆದ.

ಈ ಎಲ್ಲಾ ಅಂಶಗಳನ್ನು ಗಮನಿಸಿಯೇ ರಾಜ್ಯ ಬಿಜೆಪಿ ಶಾಸಕರೇ "ರವಿಶಂಕರ್ ನಮ್ಮ ಪಕ್ಷದ ಸೇಫ್‌ಡಿಪಾಸಿಟ್ ಲಾಕರ್ ತರಹ ಕಾರ್ಯ ನಿರ್ವಹಿಸುತ್ತಿದ್ದಾರೆ" ಎಂದು ಹೇಳುತ್ತಿದ್ದಾರೆ. ಅಂದರೆ ಬಿಜೆಪಿ ಪಕ್ಷದ ಕಪ್ಪುಹಣ ಈ ಡೋಂಗಿ ಗುರುವಿನ ಆಶ್ರಮದಲ್ಲಿ ಸುರಕ್ಷಿತವಾಗಿ ಇಡಲಾಗಿದೆಯಂತೆ! ಆ ಕಾರಣಕ್ಕಾಗಿಯೇ ಆತನ ಮೇಲೆ ಅಟ್ಯಾಕಾದ ಸುದ್ದಿ ತಿಳಿದಾಕ್ಷಣ ಯಡ್ಡಿ ಆಶ್ರಮಕ್ಕೆ ಓಡಿಹೋಗಿದ್ದು, ಬಿಜೆಪಿಯ ರಾಷ್ಟ್ರೀಯ ನಾಯಕರು ಫೋನಾಯಿಸಿ ವಿಚಾರಿಸಿಕೊಂಡಿದ್ದು ಎಂದು ಕೇಳಿಬರುತ್ತಿದೆ. ಬಹುಶಃ ಈ ಅಟ್ಯಾಕ್ ಬಗ್ಗೆ ನಿಷ್ಪಕ್ಷಪಾತವಾದ ತನಿಖೆ ನಡೆದರೆ ಈ ಡೋಂಗಿ ಗುರೂಜಿ ಮತ್ತು ಡೋಂಗಿ ರಾಷ್ಟ್ರ ಭಕ್ತ ಬಿಜೆಪಿ ಪಕ್ಷದ ನಡುವಿನ ಸಂಬಂಧ ಜಗಜ್ಜಾಹೀರಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ನಂದಕುಮಾರ್ ಬಂಧನ ಕುಸಿಯುತ್ತಿರುವ ನಕ್ಸಲರ ಕೋಟೆ



ನಕ್ಸಲರಿಗೆ ಈಗ ಹಳ್ಳಿಗಳಲ್ಲಿ ಹೋರಾಟವಿಲ್ಲ, ಪಟ್ಟಣಗಳಲ್ಲಿ ಬೆಂಬಲಿಗರಿಲ್ಲ ಎನ್ನುವ ಸ್ಥಿತಿ ಬಂದಿದೆ. ಕರ್ನಾಟಕದ ನಿರ್ದಿಷ್ಟ ಪರಿಸ್ಥಿತಿಗೆ ಬೇಕಾಗಿರುವ ಹೋರಾಟಗಳ ಕಾರ್ಯತಂತ್ರಗಳ ಬಗ್ಗೆ, ಈಗಿನ ಎಲ್ಲಾ ಚಳವಳಿಗಳು ಎದುರಿಸುತ್ತಿರುವ ಸ್ಥಗಿತತೆ ಮುರಿದು ಮುನ್ನಡೆಸುವ ಬಗ್ಗೆ ಈಗಿನ ನಕ್ಸಲ್ ನಾಯಕರ ಬಳಿ ಯಾವ ಚಿಂತನೆಗಳೂ ಇದ್ದಂತಿಲ್ಲ.

ನಕ್ಸಲ್ ನಂದಕುಮಾರ್ ಯಾನೆ ರಂಗಪ್ಪ ಅರೆಸ್ಟಾಗಿದ್ದಾರೆ.

ಕರ್ನಾಟಕದ ನಕ್ಸಲ್ ಹೋರಾಟದ ಹಿರಿಯ ಕಾರ್ಯಕರ್ತನಾಗಿದ್ದ ನಂದಕುಮಾರ್ ರಾಜ್ಯ ಸಮಿತಿಯ ಸದಸ್ಯನೂ ಆಗಿದ್ದರೆಂದು ಕೆಲ ಪತ್ರಿಕಾ ವರದಿಗಳಲ್ಲಿ ಹೇಳಲಾಗಿದೆ. ಇದು ನಿಜವೇ ಆಗಿದ್ದರೆ ರಾಜ್ಯ ನಕ್ಸಲರು ಕಟ್ಟುತ್ತಿದ್ದ ಕೋಟೆಯ ಇನ್ನೊಂದು ಪ್ರಮುಖ ಆಧಾರಸ್ತಂಭವು ಸದ್ಯಕ್ಕೆ ಕೈತಪ್ಪಿ ಹೋದಂತೆಯೇ ಲೆಕ್ಕ. ಏಕೆಂದರೆ ಕರ್ನಾಟಕ ಪೊಲೀಸರ ಕೈಗೆ ಸಿಕ್ಕಿಬೀಳುವ ಬಹುತೇಕ ನಕ್ಸಲ್ ಕಾರ್ಯಕರ್ತರು ಕನಿಷ್ಠ ಮೂರ್ನಾಲ್ಕು ವರ್ಷ ವಿಚಾರಣಾಧೀನ ಕೈದಿಗಳಾಗಿಯೇ ಜೈಲಿನಲ್ಲಿ ಇರುವಂತೆ ಪೊಲೀಸರು ನೋಡಿಕೊಳ್ಳುತ್ತಾರೆ ವಿಚಾರಣೆ ಮುಂದಕ್ಕೆ ಹಾಕಿಸುವುದು, ಆರೋಪಿಗಳನ್ನು ಕೋರ್ಟ್‌ಗೆ ಕರೆತಂದು ಸತಾಯಿಸುವುದು, ಜಾಮೀನು ಸಿಗದಂತೆ ಕಿರುಕುಳ ನೀಡುವ ದುಷ್ಟ ವಿದ್ಯೆಗಳೆಲ್ಲಾ ಪೊಲೀಸರಿಗೆ ಕರತಲಾಮಲಕ.




ಈಗ ನಂದಕುಮಾರ್ ಬಂಧನದೊಂದಿಗೆ ಸೆರೆಮನೆಯ ಪಾಲಾಗಿರುವ ದೇವೇಂದ್ರಪ್ಪ, ಅನಿತ, ಆಶಾ, ಜಗನ್ನಾಥ, ಕೃಷ್ಣ... ಮುಂತಾದವರ ಪಟ್ಟಿ ನೋಡುತ್ತಿದ್ದರೆ ಅಳಿದುಳಿದ ಶಕ್ತಿಯೊಂದಿಗೆ ನಕ್ಸಲರು ತಮ್ಮ ಹೋರಾಟ ಮುಂದುವರೆಸಲು ಸಾಧ್ಯವೇ ಎಂಬ ಪ್ರಶ್ನೆ ಸಹಜವಾಗಿಯೇ ಮೇಲೇಳುತ್ತದೆ.

ಆದರೂ ನಕ್ಸಲರ ಇಚ್ಛಾಶಕ್ತಿ ಹಾಗೂ ಸ್ವಭಾವ ತಿಳಿದಿರುವವರಿಗೆ, ಅವರ ಸಂಖ್ಯೆ ಮೂರಿರಲಿ ಇಲ್ಲಾ ನೂರಿರಲಿ ಅವರೆಂದೂ ವಿಚಲಿತರಾಗಲಾರರು ತಮ್ಮ ಗುರಿಯಿಂದ ಹಿಂದೆ ಸರಿಯಲಾರರೆಂಬ ಅಂಶ ಗೊತ್ತಿದೆ. ಆದರೆ ಪ್ರಶ್ನೆ ಅದಲ್ಲ, ನಕ್ಸಲರು ಕಾನೂನುಬಾಹಿರವಾದ ಸಶಸ್ತ್ರ ಹೋರಾಟದ ಹಾದಿ ಹಿಡಿದಿರುವ ಬಗ್ಗೆ ಟೀಕಿಸುವವರೂ ಸಹ ಇಂದು ಅವರು ಎತ್ತುತ್ತಿರುವ ಸಾಮಾಜಿಕ ನ್ಯಾಯದ ವಿಷಯ ಸರಿಯಿದೆ ಎಂತಲೇ ಒಪ್ಪುತ್ತಿದ್ದಾರೆ. ಸ್ವತಃ ಯುಪಿಎ ಅಧ್ಯಕ್ಷೆ ಸೋನಿಯಾ ಗಾಂಧಿಯೇ ನಕ್ಸಲ್ ಹೋರಾಟದ ಹಿಂದೆ ಸಾಮಾಜಿಕ ಆರ್ಥಿಕ ಅಸಮಾನತೆಯ ವಿಚಾರವೂ ಇದೆ ಎಂದು ಒಪ್ಪಿಕೊಂಡಿದ್ದಾರೆ. ವಿಚಾರ ಹೀಗಿದ್ದಾಗಲೂ ದೊಡ್ಡ ಸಂಖ್ಯೆಯಲ್ಲಿ ಜನರು ಹೋರಾಟಗಳಲ್ಲಿ ಭಾಗವಹಿಸುವಂತೆ ಯುದ್ಧ ನೀತಿ ರೂಪಿಸುವ ಬದಲಾಗಿ ಸಮೂಹ ಸಂಘಟನೆಗಳನ್ನೇ ಸಶಸ್ತ್ರ ಹೋರಾಟದ ಅಗ್ನಿಕುಂಡಕ್ಕೆ ಬಲಿಕೊಡುತ್ತಾ ಹೋಗುವ ವಿಧಾನ ಎಷ್ಟು ಸರಿ ಎಂಬ ಪ್ರಶ್ನೆಗೆ ನಕ್ಸಲರು ಉತ್ತರ ಕಂಡುಕೊಳ್ಳಲು ಇನ್ನೂ ಆಗಿಲ್ಲ.

ಈಗ ನಂದಕುಮಾರ್ ಬಂಧನದೊಂದಿಗೆ ಈ ಪ್ರಶ್ನೆ ಮತ್ತೆ ಬರುತ್ತದೆ.

ಸರಳ ವ್ಯಕ್ತಿತ್ವದ ನಂದ

ಕೊಪ್ಪ ತಾಲ್ಲೂಕಿನ ಕಾಚಗಲ್ ಗ್ರಾಮದ ನಂದಕುಮಾರ್ ಪ್ರಗತಿಪರರ ಒಡನಾಟದಲ್ಲಿ ಬೆಳೆದು ನಂತರ ನಕ್ಸಲರ ಹೋರಾಟಕ್ಕೆ ಸೇರಿಕೊಂಡವರು. ಈಗ ಮಾವ್ರೋವಾದಿಗಳಿಂದ ದೂರ ಸರಿದಿರುವ ಕೊಪ್ಪದ ಸಿರಿಮನೆ ನಾಗರಾಜರಿಂದ ನಂದಕುಮಾರ್ ಸಾಮಾಜಿಕ ನ್ಯಾಯದ ಹಾಗೂ ಅನೇಕ ಜೀವನ ಮೌಲ್ಯಗಳ ಬಗ್ಗೆ ಅರಿವು ಬೆಳೆಸಿಕೊಂಡರು ಎನ್ನಲಾಗಿದೆ. ಹೀಗೆ ನಂದಕುಮಾರ್‌ನಲ್ಲಿ ಹೋರಾಟದ ಕಿಚ್ಚು ಬೆಳೆಯುತ್ತಿರುವಾಗಲೇ ರಾಯಚೂರು ಪ್ರಾಂತ್ಯ ತ್ಯಜಿಸಿದ ನಕ್ಸಲರು ಮಲೆನಾಡಿಗೆ ಬರೋಣವಾಯಿತು. ನಾಗರಾಜ್ ಇದರಿಂದ ನಿಧಾನಕ್ಕೆ ದೂರ ಸರಿದರೆ ನಂದ, ಬಿ.ಜಿ. ಕೃಷ್ಣಮೂರ್ತಿ, ನೀಲಗೂಳಿ ಪದ್ಮನಾಭ ಹಾಗೂ ಪಾರ್ವತಿ ಮುಂತಾದವರು ಸಶಸ್ತ್ರ ಹೋರಾಟದ ಹಾದಿ ಆರಿಸಿಕೊಂಡರು. ಇವರಲ್ಲಿ ಪಾರ್ವತಿಯನ್ನು 2003 ರ ನವೆಂಬರ್‌ನಲ್ಲಿ ಉಡುಪಿಯ ಈದು ಗ್ರಾಮದಲ್ಲಿ ಪೊಲೀಸರು ಕೊಂದರು. ನಗದು ಬಹುಮಾನ, ಪ್ರಶಸ್ತಿ ಪ್ರಮೋಷನ್‌ಗಳ ದುರಾಶೆಗಾಗಿ ಪೊಲೀಸರು ಪಾರ್ವತಿ-ಹಾಜಿಮಾರನ್ನು ಬಲಿ ತೆಗೆದುಕೊಂಡಿದ್ದರು. ಅಲ್ಲಿಂದಾಚೆಗೆ ನಕ್ಸಲರಿಗೆ ಹಿನ್ನಡೆಯಾಗುವ ಘಟನೆಗಳು ವೇಗವಾಗಿ ಸಂಭವಿಸಿದವು. 2004 ರ ಅಕ್ಟೋಬರ್‌ನಲ್ಲಿ ರಾಜ್ಯಸಮಿತಿ ಸದಸ್ಯ ಉಜ್ಜನಿಗೌಡ ಹೊಸಪೇಟೆಯಲ್ಲಿ ಅರೆಸ್ಟಾದರು. 2005ರ ಫೆಬ್ರವರಿಯಲ್ಲಿ ನಕ್ಸಲ್ ನಾಯಕ ಸಾಕೇತ್‌ರನ್ನೇ ಪೊಲೀಸರು ಅಮಾನುಷವಾಗಿ ಕೊಂದರು. ಇದಕ್ಕೆ ಪ್ರತೀಕಾರವಾಗಿ ಆಂಧ್ರ ನಕ್ಸಲರಿಂದ ಕರ್ನಾಟಕ ಪೊಲೀಸರ ಹತ್ಯೆಯೂ ಆಗಿಹೋಯಿತು.



ಕರ್ನಾಟಕ ನಕ್ಸಲ್ ಹೋರಾಟದ ಪಾಲಿಗೆ ಇದೇ ನಿರ್ಣಾಯಕ ಹಿನ್ನಡೆಯಾಗಿ ಹೋಯಿತು. ನಕ್ಸಲ್ ಹೋರಾಟದ ಬಗ್ಗೆ ರೋಮಾಂಟಿಕ್ ಕಲ್ಪನೆಯಿದ್ದ ಜನಸಾಮಾನ್ಯರಾದಿಯಾಗಿ, ನ್ಯಾಯ-ಅನ್ಯಾಯದ ಕಾರಣಕ್ಕೆ, ಸಮಾಜ ಬದಲಾಗಲಿ ಎಂಬ ಕಾರಣಕ್ಕೆ ನಕ್ಸಲರ ಪರ ಸಹಾನುಭೂತಿ ಬೆಳೆಸಿಕೊಂಡಿದ್ದ ಪ್ರಗತಿಪರರೂ ನಕ್ಸಲರಿಂದ ದೂರವಾಗತೊಡಗಿದರು. ವಿವೇಚನಾರಹಿತ ಹಿಂಸೆ, ಕೇವಲ ಸಾಹಸ ಮನೋಭಾವದ ಒಲವಿರುವವರಂತೆ ನಕ್ಸಲರು ಜನರಿಗೆ ಭಾಸವಾದರು. ಹಾಗಾಗಿ 2006 ಡಿಸೆಂಬರ್‌ನಲ್ಲಿ ನಾರಾವಿ ದಿನಕರ್ ಹತ್ಯೆಯಾದಾಗ ಅದು ಜನಸಾಮಾನ್ಯರ ಪ್ರತಿಭಟನೆಯಾಗಿ ಪ್ರತಿಕ್ರಿಯೆ ಪಡೆಯಲಿಲ್ಲ, 2007 ರಲ್ಲೇ ಮೆಣಸಿನಹಾಡ್ಯದಲ್ಲಿ ರಾಜ್ಯ ಪೊಲೀಸರು ಒಬ್ಬ ನಕ್ಸಲರೊಂದಿಗೆ ನಾಲ್ಕಾರು ಅಮಾಯಕ ಗಿರಿಜನರನ್ನು ಗುಂಡಿಟ್ಟು ಕೊಂದರು. ಇದೆಲ್ಲಾ ಜನಸಾಮಾನ್ಯರಲ್ಲಿ



ಸರ್ಪದೋಷ

ಸಂಜೆಯ ಇಳಿಹೊತ್ತು, ಅದೊಂದು ರೀತಿಯ ಬೆಳಗು ಭೂಮಿಗೆ ಚೆಲ್ಲಿತ್ತು, ಇಳಿಹೊತ್ತಾದ್ದರಿಂದ ಬೆಳಕು ಹೊಂಬಣ್ಣಕ್ಕೆ ತಿರುಗುತ್ತಿರುವಾಗಲೇ ಸೂರ್ಯನ ಪ್ರಭೆಗೆ ನೇರವಾಗಿ ಸಿಕ್ಕಿದ ಅವರ ಮುಖಗಳು ವಿಸ್ಮಯದಿಂದ ಕಂಗೊಳಿಸುತ್ತಿದ್ದವು. ಈ ಜನರಲ್ಲಿದ್ದ ವಿಸ್ಮಯಕರ ನೋಟಕ್ಕೆ ಬೆರಗಾದ ನಾನೂ ಅತ್ತ ನೋಡಿದೆ. ಒಂದೂವರೆ ಮಾರುದ್ದದ ಎರಡು ಹಾವುಗಳು ಹಗ್ಗದಂತೆ ಉಡಿದುಕೊಂಡು ಭೂಮಿಯಿಂದ ಮೂರಡಿ ಎದ್ದು ಸೆಣಸುತ್ತಿದ್ದವು. ಗಲಾಟೆ ಮಾಡಿದರೆ ಅವುಗಳು ಹೊರಟುಹೋಗಬಹುದೆಂದು ಎಲ್ಲರೂ ಪಿಸುದನಿಯಲ್ಲಿ ಮಾತನಾಡುತ್ತಾ ಕೈ ಸನ್ನೆ ಮಾಡುತ್ತಿದ್ದರು. ಸುರಸುಂದರಿಯಂತಿದ್ದ ಹೆಣ್ಣುಮಗಳೊಬ್ಬಳು ತೀರಾ ಹೆದರಿಕೊಂಡೇ ನೋಡುತ್ತಿದ್ದಳು. ಅವಳ ಹತ್ತಿರ ಹೋದ ನಾನು "ಹೆದರಬೇಡ ಮಗು. ಅವು ಕೇರೆ ಹಾವುಗಳು. ಅವುಗಳಲ್ಲಿ ವಿಷವಿಲ್ಲ, ಬೇಕಾದರೆ ಸಾಕಬಹುದು" ಎಂದೆ. "ಅಂಗಾದ್ರೆ ತಗಂಡೋಗಿ ಸಾಕಿ" ಎಂದಳು. "ನೀನು ದಿನಕ್ಕೊಂದು ಮೊಟ್ಟೆ ಕೊಡುವುದಾದರೆ ಸಾಕುತ್ತೇನೆ" ಎಂದೆ. "ಆಂ" ಎಂದು ನಕ್ಕಳು.

ಅಷ್ಟರಲ್ಲಿ ಮೂಢನೊಬ್ಬ "ನೋಡಿ, ಅದು ನಾಗರಾವು. ಅದು ಕೇರೆ ಹಾವು. ನಾಗರಹಾವಿನಲ್ಲಿ ಗಂಡಾವು ಇಲ್ಲದ ಕಾರಣ ಅದು ಕೇರೆ ಹಾವಿನೊಂದಿಗೆ ಬೆದೆಯಾಡುತ್ತದೆ" ಎಂದ. "ಅಲ್ಲಯ್ಯ, ನಾಗರಹಾವಿನಲ್ಲಿ ಗಂಡಾವು ಇಲ್ಲ ಅನ್ನೋದಾದ್ರೆ ನಾಗಪ್ಪ ಎಲ್ಲಿಂದ ಬಂದ" ಎಂದೆ. "ಅದೇನೋ ಅಂಗಂತರೆ ಸಾರ್" ಎಂದು ತಪ್ಪಿಸಿಕೊಳ್ಳಲು ನೋಡಿದ. "ಜನಗಳಿಗೆ ಸುಳ್ಳೇಳಬಾರ್ದು ಕಂಡ್ರಿ, ಯಾವಾಗಲೋ ಏನೋ ಕೇರೆ ಹಾವು ನಾಗರಹಾವು ಸರಸ ಆಡಿರಬೌದು, ಅದಕ್ಕೆ ಹಾಗಂದು ಬಿಡೋದೆ?" ಎಂದೆ. "ಅಂಗೇಳಕ್ಕೆ ಬರಲ್ಲ ಸಾರ್" ಎಂದೊಬ್ಬ ದನಿ ಹೊರಡಿಸಿದ. "ಅದನ್ನು ಉರಗತಜ್ಞರು ಹೇಳಬೇಕು ಕಣಯ್ಯ, ಕನಿಷ್ಠ ಮೂವತ್ತು ಅಡಿ ದೂರದಿಂದ ಹಾವುಗಳನ್ನ ನೋಡಿದ್ರೂ ಪರಾರಿಯಾಗೊ ಜನ ನೀವು. ಅಂತಾದ್ರಲ್ಲಿ ಬೇರೆ ಬೇರೆ ಜಾತಿ ಹಾವು ತೆಕ್ಕೆಬಡದವೆ ಅಂತ ಹೇಳ್ತಿರಿ. ಸರಿಯಾಗಿ ಕೇಳಿದ್ರೆ ಸುಳ್ಳು ಸುಳ್ಳೇ ಹೇಳ್ತೀರಿ" ಎಂದು ರೇಗಿದೆ. ಆತ ರೇಗುವ ಹಕ್ಕು ನಿಮಗಿಲ್ಲವೆನ್ನುವಂತೆ ನೋಡಿದ.

ಈ ನಡುವೆ ಬಂದ ಕೆಲವರು ಹಾವಿನ ಸರಸ ನೋಡಿದ ಕೂಡಲೇ ಹೇಳದೆ ಕೇಳದೆ ಪರಾರಿಯಾದರು. ಅವರು ಹೋದ ಬಿಸಿ ನೋಡಿ ನನಗೆ ಎರಡು ಘಟನೆಗಳು ಜ್ಞಾಪಕಕ್ಕೆ ಬಂದವು.

ಗೆಳೆಯ ಬೀರೂರು ಶಿವಣ್ಣನವರ ಮಾವ ತೋಟದ ಹತ್ತಿರ ಹಾವುಗಳು ತೆಕ್ಕೆ ಹಾಕಿಕೊಂಡಿದ್ದನ್ನ ನೋಡಿದ ಕೂಡಲೇ ಬರುವವರ ಕೈಯಲ್ಲಿ ನಿಮ್ಮ ಮಗ ತೀರೋದ ಅಂತ ನಮ್ಮನೆಗ್ಹೇಳಿ ಎಂದು ಹೇಳಿಕಳಿಸಿದ್ದ, ಆದಲ್ಲಿನ ನಡವಳಿಕೆಯಾದ್ದರಿಂದ ಬಂದು ಹಾಗೇ ಹೇಳಿದರು. ಆ ಕೂಡಲೇ ಮನೆಯ ಜನವೆಲ್ಲ ಭೂಮಿ ಆಕಾಶವನ್ನು ಒಂದು ಮಾಡುತ್ತ ಅಬ್ಬರಿಸಿಕೊಂಡು ಹೋದರೆ, ಮಾವ ನಗುತ್ತಾ ಮರದಡಿ ನಿಂತಿದ್ದ. ಕಾರಣ ಕೇಳಿದಾಗ, "ಹಾವು ಜೊತೆಲಿದ್ವೊ ಅದ್ಕೆ ಹೇಳಿಕಳಿಸ್ದೆ" ಎಂದ. ಎಲ್ಲರಿಗೂ ಖುಷಿಯಾಗಿ ತಮಗಾದ ಆಘಾತಗಳನ್ನು ಹೇಳಿಕೊಂಡು ಊರು ತಲುಪಿದರು.

ಈ ಹಾವುಗಳು ತೆಕ್ಕೆಬಿದ್ದಿರುವುದನ್ನ ನೋಡಿದವರ ಆಚರಣೆಗಳು ಏನೇನಿವೆಯೋ. ನನ್ನ ಗೆಳೆಯನೊಬ್ಬ ಹೊಸ ಅಂಗಿಯನ್ನೇ ಚಿಂದಿಮಾಡಿ ಎಸೆದು ಬರಿಮೈಯಲ್ಲಿ ಬಂದಿದ್ದ, "ಯಾಕೆ, ನಿನ್ನ ಅಂಗಿಗೆ ಏನಾಯ್ತು" ಎಂದು ಕೇಳಿದೆ. "ಹಾವು ಬೆದೆ ಆಡದು ನೋಡಿದ್ರೆ ಅಂಗಿ ಅರದಾಕಬೇಕಂತೆ" ಎಂದಿದ್ದ ಆತ.

ಇಂತಹ ನಂಬಿಕೆಗಳನ್ನು ಅದಿನ್ಯಾರು ಇವರ ಮೇಲೆ ಹೇರಿದರೋ ಏನೋ, ಸಾವಿರ ವರ್ಷದ ಹಿಂದಿನ ಚರಿತ್ರೆ ನೋಡಿದರೂ ಇವರ ನಡವಳಿಕೆ ಹೀಗೆ ಇವೆ. ಈಗಲೂ ಹಾಗೇ ಇವೆ. ಈಗ ಹಾವುಗಳನ್ನ ನೋಡಿ ಹೋದವರು ಏನು ಮಾಡಿಕೊಂಡರೋ ಏನೋ ಎನ್ನುತ್ತಿರುವಾಗ, ಈ ಅಪೂರ್ವ ದೃಶ್ಯವನ್ನು ಸೆರೆ ಹಿಡಿಯುವ ಆಲೋಚನೆ ಬಂದು ಫೋಟೊಗ್ರಾಫರ್ ನಂದನ್‌ಗೆ ಫೋನ್ ಮಾಡಿದೆ. ಅವರು "ಇಲ್ಲೊಂದು ಕೋಳಕಮಂಡಲ 52 ಮರಿಹಾಕಿದೆ ಸಾರ್. ಅದನ್ನ ತೆಗೆಯಲು ಹೋಗುತ್ತಿದ್ದೇನೆ" ಎಂದರು.

ಇನ್ನ ಹಾವು ಹಿಡಿದು ಕಾಡಿಗೆ ಬಿಡುವುದರಲ್ಲಿಯೇ ದಾಖಲೆ ಮಾಡುತ್ತಿರುವ ಸ್ನೇಕ್ ಕಿರಣ್ ಅವರ ಫೋನು 'ವ್ಯಾಪ್ತಿ ಪ್ರದೇಶದ ಹೊರಗೆ' ಎಂದು ಹೇಳುತ್ತಿತ್ತು.

ಅಷ್ಟರಲ್ಲಿ ಬರೋಬ್ಬರಿ ಒಂದು ಗಂಟೆಯಾಯ್ತು, ಹಾವಿನ ಕುತ್ತಿಗೆ ಬಳಿ ಸುರುಳಿಯಾದ ಆಕಾರ ಬಾಲದ ಬಳಿ ಕೊನೆಯಾಗುತ್ತಾ ನಿರಂತರ ಹಗ್ಗ ಹೊಸೆದಂತೆ ಕಾಣುತ್ತಿತ್ತು, ಬಹುಶಃ ಅವಿನ್ನೂ ನಿಜವಾದ ರಾಸಲೀಲೆ ಆರಂಭಿಸಿರಲಿಲ್ಲ ಅನ್ನಿಸುತ್ತೆ, ಅದು ಶುರುವಾದಾಗ ಈ ಉರಿತ ನಿಲ್ಲಬಹುದು. ಅದಕ್ಕಾಗಿ ಗಂಟೆಗಳೇ ಜರುಗಬಹುದೇನೋ. ಅಂತೂ ಕತ್ತಲಾಗುವವರೆಗೂ ಕೇರೆ ಹಾವಿನ ಎಣೆಯಾಟಕ್ಕೆ ಎಣೆಯೇ ಇರಲಿಲ್ಲ, ನಾನು ನೋಡಿ ನೋಡಿ ಸಾಕಾಗಿ ಹೊರಟು ಬಂದೆ.

ಮರುದಿನ ಹಾವು ನೋಡಿದ ಜಾಗದಲ್ಲಿದ್ದವರೊಬ್ಬರು ಎದುರು ಬಂದರು. ಬಂದವರೇ ನಕ್ಕರು. "ನೆನ್ನೆ ನೋಡಿದ್ರಲ್ಲ ಸಾರ್, ಭಾಳ ಇದು ಬಿಡಿ ಸಾರ್" ಎಂದವರೇ ಒಂದು ಎಂಟ ಫಾರಂ ಮುಂದೆ ಚಾಚಿ "ಇದನ್ನ ತುಂಬಿಕೊಡಿ ಸಾರ್" ಎಂದರು. ಪೋಸ್ಟಾಫೀಸಿನ

ಸಂಕಟ ಹುಟ್ಟಿಸಿತೇ ವಿನಃ ಪ್ರತಿಭಟನಾ ಆಂದೋಲನದ ರೂಪ ಪಡೆಯಲಿಲ್ಲ.

ನಂತರ 2008 ರಲ್ಲಿ ಕೃಷ್ಣ ಹಾಗೂ ಜಗನ್ನಾಥರ ಬಂಧನವಾಯಿತು. ಈ ಕೃಷ್ಣ ಎನ್ನುವ ಪೊಳ್ಳು ವ್ಯಕ್ತಿತ್ವದವನನ್ನು ನಕ್ಸಲರು ಅದೆಷ್ಟು ನಂಬಿದ್ದರೆಂದರೆ ಅವನ ಲೆವೆಲ್‌ನ ಕಾರ್ಯಕರ್ತರಿಗೆ ಗೊತ್ತೇ ಆಗಬಾರದಿದ್ದ ರಹಸ್ಯ ವಿಚಾರಗಳೆಲ್ಲಾ ಕೃಷ್ಣನಿಗೆ ಗೊತ್ತಿದ್ದವು. ಆಮೇಲೆ ಅದೆಲ್ಲಾ ಪೊಲೀಸರಿಗೆ ತಿಳಿಯುವುದೇನು ತಡವಾಗಲಿಲ್ಲ, ನಕ್ಸಲರ ಕಷ್ಟಗಳು ಹೆಚ್ಚಾಗುವಂತೆ 2008 ರ ನವೆಂಬರ್‌ನಲ್ಲಿ ಮತ್ತೆ ಮೂವರ ಹತ್ಯೆಯಾಯಿತು. ಅತ್ಯಂತ ಸಜ್ಜನ ಹಾಗೂ ಪ್ರಾಮಾಣಿಕ ಹೋರಾಟಗಾರರಾಗಿದ್ದ ಮನೋಹರ್, ದೇವಯ್ಯ ಹಾಗೂ ಅಭಿಷೇಕ್ ಎಂಬುವವರನ್ನು ಪೊಲೀಸರು ಗುಂಡಿಟ್ಟು ಕೊಂದರು.

ಹೀಗೆ ಅರಳುವ ಮೊದಲೇ ಬಾಡಿಹೋಗುವ ಹಾದಿ ಹಿಡಿದ ನಕ್ಸಲ್ ಚಳವಳಿಗೆ 2009 ಹಾಗೂ 2010 ರಲ್ಲೂ ಪದೇಪದೇ ಪೆಟ್ಟು ಬೀಳುತ್ತಾ ಹೋಯಿತು. ಅನಿತಾ, ಆಶಾ, ದೇವಣ್ಣ ಮುಂತಾದವರು ಶಾಲಾಮಕ್ಕಳು ಕಣ್ಣಾಮುಚ್ಚಾಲೆ ಆಟದಲ್ಲಿ ಸಿಕ್ಕಿಬೀಳುವಂತೆ ಪೊಲೀಸರ ಕೈಗೆ ಸಿಕ್ಕಿಬಿದ್ದರು. ಅದರ ಮುಂದುವರಿಕೆಯಾಗಿ ಈಗ ಇನ್ನೊಬ್ಬ ನಾಯಕ ನಂದಕುಮಾರರ ಬಂಧನವೂ ಆಗಿಹೋಗಿದೆ.

ಈಗ ಮೈಸೂರು ಜೈಲಿನಲ್ಲಿರುವ ಆಶಾ ನಂದಕುಮಾರನ ಪತ್ನಿ. ಆಕೆಯ ಜಾಮೀನಿಗೆ ನಂದಕುಮಾರ್ ಪ್ರಯತ್ನಿಸುತ್ತಿದ್ದು ಆ ಓಡಾಟದ ಸಂದರ್ಭದಲ್ಲೇ ಕೆಲವು ಶಂಕಿತರ ಫೋನ್ ನಂಬರ್ ಟ್ಯಾಪ್ ಮಾಡಿದ ಪೊಲೀಸರಿಗೆ ನಂದನ ಚಲನವಲನ ಗೊತ್ತಾಯಿತು ಎನ್ನಲಾಗಿದೆ. ಮಲೆನಾಡಿನ ಸಶಸ್ತ್ರ ಗೆರಿಲ್ಲಾ ಸ್ಕ್ವಾಡ್‌ಗಳಲ್ಲಿ ನಂದಕುಮಾರ್ ಇರುತ್ತಿರಲಿಲ್ಲ ಎಂಬುದು ಪೊಲೀಸರಿಗೆ ಗೊತ್ತಿದ್ದರೂ ಈಗ ಅನೇಕ ಆರೋಪಗಳನ್ನು ಹೊರಿಸುತ್ತಿದ್ದಾರೆ.

ಇಲ್ಲಿಂದಾಚೆಗೆ ಅದೇನಿದ್ದರೂ ಕಾನೂನಿನ ಪ್ರಕ್ರಿಯೆ. ಈ ಕಾನೂನಿಗೆ ಕಣ್ಣಿಲ್ಲವೆಂಬುದು ಎಲ್ಲರಿಗೂ ತಿಳಿದಿರುವ ಸತ್ಯವೆ.

ಪ್ರಶ್ನೆಗಳು ಮತ್ತು ಪ್ರಶ್ನೆಗಳು

ಕರ್ನಾಟಕದಲ್ಲಿ ನಕ್ಸಲ್ ಚಳವಳಿಗೆ 25 ವರ್ಷಗಳ ಇತಿಹಾಸವಿದೆ. ಹೈದರಾಬಾದ್ ಕರ್ನಾಟಕದಲ್ಲಿ 15 ವರ್ಷ ಸೆಣಸಾಡಿದ ನಕ್ಸಲರು ಕೊನೆಗೂ ಅಲ್ಲಿ ಜನಾಂದೋಲನ ಕಟ್ಟಲಾಗಿರಲಿಲ್ಲ, ಸರ್ಕಾರದ ದಮನ, ಪೊಲೀಸರ ಕ್ರೌರ್ಯಗಳೆದುರು ಅಲ್ಲಿನ ದಮನಿತ ಜನ ನಲುಗಿಹೋಗಿದ್ದರು. ಜನರಿಗೆ ತಮ್ಮ ಕಷ್ಟಗಳಿಂದ ಬಿಡುಗಡೆ ಬೇಕಿತ್ತಾದರೂ, ನಕ್ಸಲರಂತಹ ಮಿಲಿಟೆಂಟ್ ಯುವ ಜನರ ನ್ಯಾಯದ ಕಲ್ಪನೆ ಆಚರಣೆಗೆ ಬರಬೇಕಿತ್ತಾದರೂ ಅಲ್ಲಿನ ಒಟ್ಟಾರೆ ಸಂದರ್ಭ ಸಶಸ್ತ್ರ ಹೋರಾಟಕ್ಕೆ ಪೂರಕವಾಗಿರಲಿಲ್ಲ, ಮಾಸ್ ಮೂವ್‌ಮೆಂಟ್‌ಗಳು ಅಲ್ಲಿ ಚಿಗುರಲು ನಕ್ಸಲರು ಅವಕಾಶವನ್ನೇ ಕೊಡಲಿಲ್ಲ, ಕೊನೆಗೆ 2000 ರಲ್ಲಿ ಇಡೀ ಚಳವಳಿ ಮಲೆನಾಡಿಗೆ ವರ್ಗಾ ಆಯಿತು. ಅದು ಇಂದಿಗೆ 10 ವರ್ಷಗಳೇ ಆಗಿಹೋಗಿವೆ. ಈಗಲೂ ಸಮಾಜದ ವಿವಿಧ ವಲಯಗಳ ದಮನಿತ ಜನರನ್ನು ಹೋರಾಟಕ್ಕೆ ಅಣಿಗೊಳಿಸುವ ಸಮೂಹ ಸಂಘಟನೆಗಳತ್ತ ನಕ್ಸಲರ ಗಮನ ಇಲ್ಲ, ಬದಲಾಗಿ ಮಲೆನಾಡಿನಲ್ಲಿ ನಡೆಯಬೇಕಿರುವ ಸಶಸ್ತ್ರ ಗೆರಿಲ್ಲಾ ಹೋರಾಟಕ್ಕೆ ನಾಡಿನ ಉಳಿದೆಲ್ಲಾ ಜನರು, ಸಂಘಟನೆಗಳು ಬೆಂಬಲಿಸಲಿ ಎನ್ನುವ ನಿರೀಕ್ಷೆ ನಕ್ಸಲರಿಗಿದೆ.

ಆದರೆ ಇದು ಕಾರ್ಯಸಾಧುವಾದ ವಿಚಾರವೆ? ಇದರಿಂದ ಏನಾಗಿ ಹೋಗಿದೆಯೆಂದರೆ ನಕ್ಸಲರಿಗೆ ಈಗ ಹಳ್ಳಿಗಳಲ್ಲಿ ಹೋರಾಟವಿಲ್ಲ, ಪಟ್ಟಣಗಳಲ್ಲಿ ಬೆಂಬಲಿಗರಿಲ್ಲ ಎನ್ನುವ ಸ್ಥಿತಿ ಬಂದಿದೆ. ಕರ್ನಾಟಕದ ನಿರ್ದಿಷ್ಟ ಪರಿಸ್ಥಿತಿಗೆ ಬೇಕಾಗಿರುವ ಹೋರಾಟಗಳ ಕಾರ್ಯತಂತ್ರಗಳ ಬಗ್ಗೆ, ಈಗಿನ ಎಲ್ಲಾ ಚಳವಳಿಗಳು ಎದುರಿಸುತ್ತಿರುವ ಸ್ಥಗಿತತೆ ಮುರಿದು ಮುನ್ನಡೆಸುವ ಬಗ್ಗೆ ಈಗಿನ ನಕ್ಸಲ್ ನಾಯಕರ ಬಳಿ ಯಾವ ಚಿಂತನೆಗಳೂ ಇದ್ದಂತಿಲ್ಲ. ಕೇವಲ ಕೆಲವು ಹಳ್ಳಿಗಳಿಗೆ ಹೋಗಿ ಕರಪತ್ರ ಹಂಚಿಬರುವುದು ಅವರ ಸೀಮಿತ ಚಟುವಟಿಕೆಯಾಗಿದೆ. ಈ ಮಿನಿಮಂ ಪ್ರಚಾರ ಕಾರ್ಯ ನಡೆಸಲೂ ಪ್ರಾಣವನ್ನೇ ಪಣಕ್ಕಿಟ್ಟು ಅರಣ್ಯದಿಂದ ಆಚೆಗೆ ಬಂದು ವಾಪಸಾಗಬೇಕಿರುವ ಬಿಕ್ಕಟ್ಟನ್ನು ಸ್ವತಃ ನಕ್ಸಲರೇ ಸೃಷ್ಟಿಸಿಕೊಂಡಿದ್ದಾರೆ.

ಈಗ್ಗೆ 5 ವರ್ಷಗಳ ಹಿಂದಿನ ತನಕವೂ ಕರ್ನಾಟಕದ ಅನೇಕ ವಿದ್ಯಮಾನಗಳ ಬಗ್ಗೆ ನಕ್ಸಲರ ನಿಲುವು ಏನೆಂಬುದಾಗಿ ಕುತೂಹಲವಾದರೂ ಇರುತ್ತಿತ್ತು, ನಕ್ಸಲರ ಅಂತಹ ಹೇಳಿಕೆಗಳಿಗೆ ಸುದ್ದಿ ಮಾಧ್ಯಮಗಳೂ ಮಹತ್ವ ನೀಡುತ್ತಿದ್ದವು. ಆದರೀಗ ರಾಜ್ಯದಲ್ಲಿ ನಕ್ಸಲರ ಅಸ್ತಿತ್ವವು ಮೊದಲಿನ ಮಹತ್ವ ಉಳಿಸಿಕೊಂಡಂತೆ ಕಾಣುತ್ತಿಲ್ಲ, ನಕ್ಸಲರ ಹೋರಾಟದ ರೂಪುರೇಷೆಗಳು ವಿಧಾನಗಳು ಇಲ್ಲಿನ ಪರಿಸ್ಥಿತಿಗೆ ಹೊಂದುವಂತೆ ಪುನರ್ ರಚನೆ ಆಗದೇ ಹೋದರೆ ನಕ್ಸಲರು ಜನರಿಂದ ಇನ್ನಷ್ಟು ದೂರವಾಗುವ ಸಾಧ್ಯತೆ ಇದ್ದೇ ಇದೆ.

ಆದರೆ ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರ್‍ಯಾರು?

ಮುಂಡೆ ಮಕ್ಕಳು ಇಡೀ ಫಾರಮ್ಮನ ಇಂಗ್ಲಿಷಿನಲ್ಲಿ ಪ್ರಿಂಟ್ ಮಾಡಿರುವುದರಿಂದ ಇವರು ನನ್ನ ಬಳಿ ತಂದಿರಬಹುದೆಂದು ಅವರ ಹೆಸರು ಮತ್ತು ಅಡ್ರೆಸ್ ಕೇಳಿದೆ. "ರಶೀದ್" ಎಂದ. ಆತ ಮಳ್ಳಘಟದ ಅಡ್ರೆಸ್ ಹೇಳಿದ. ಅದನ್ನ ತುಂಬಿದೆ. "ಹಣ ಎಷ್ಟು?" ಎಂದೆ. "ನೂರ ಒಂದು ರೂಪಾಯಿ ಸಾರ್" ಎಂದ. ಕಳಿಸುವ ಅಡ್ರೆಸ್ ಕೇಳಿದೆ.

"ಅದೇ ಕುಕ್ಕೆಸುಬ್ರಮಣ್ಯಕ್ಕೆ ಸಾರ್. ನೆನ್ನೆ ಹಾವುಗೆ ನೋಡಿದವುಲ್ಲಾ, ಅದ್ಕೆ ದೋಸ ಪರಿಯಾರಕ್ಕೆ ಸುಬ್ರಮಣ್ಣಿಗೆ ಹಣ ಕಳುಸಬೇಕು ಸಾರ್" ಎಂದ.

"ಯಾರೋ ಮಾರಾಯ ನಿನಗೆ ಹೇಳಿದೋರು?" ಎಂದೆ.

"ಇಲ್ಲ ಸಾರ್, ಹಾವುಗೆ ಸರಸ ನೋಡಿದ್ರೆ ದೋಸ. ಅದ್ಕೆ ಹಣ ಕಳಸ್‌ಬಿಡಿ. ಅದ್ರಲ್ಲಿ ನಂದು ಹೆಂಡ್ತಿ ಜುವೇರಿಯಾ, ಮಗಳು ಸಾಲಿಯಾ ಹೆಸರಿಗೆ ಹಾಕ್ಬಿಡಿ. ನಿನ್ನೆ ಅವರೂ ನೋಡಿಬಿಟ್ಟಿದ್ದಾರೆ" ಎಂದ.

ನನಗಾಗ ಅರಿವಿಗೆ ಬಂತು. ಕೇರೆ ಹಾವು ನೋಡಲು ಮೊಟ್ಟೆ ಕೇಳಿದನಲ್ಲ, ಆ ಸುಂದರಿ ಈತನ ಮಗಳಿರಬೇಕು ಅನಿಸಿತು.

ಬಡ ಮುಸ್ಲಿಮನ ನೂರು ರೂಪಾಯಿ ಸುಬ್ರಮಣ್ಯ ಸೇರುವುದು ನನಗೆ ಸುತರಾಂ ಇಷ್ಟವಿರಲಿಲ್ಲ, ಆದ್ದರಿಂದ "ಅಲ್ಲಪ್ಪ, ನಾನು ಹಿಂದೂವಾಗಿ ನನಿಗೇ ದೋಶ ಇಲ್ಲ ಅಂದಮೇಲೆ, ನಿನಿಗೆಂಗಯ್ಯ ದೋಶ?" ಎಂದೆ. "ಇರ್ತದೆ ಸಾರ್, ನಿಮುಗೆ ದೋಶ ಇಲ್ಲ ಅಂದ್ರೆ ನಮುಗೆ ಇರಬಾರ್ದ? ಅವು ಜೊತೇಲಿ ಇದ್ರೂ ಅದು ಪ್ರೈವೇಟ್. ಆಗ ಯಾರೂ ನೋಡಬಾರ್ದು. ಈಗ ನೀವು ನಿಮ್ಮ ಹೆಂಡ್ತಿ ಜೊತೆ ಬೆಡ್‌ರೂಂನಲ್ಲಿ ಇರ್ತೀರಿ. ಆಗ ಯಾರೂ ನೋಡಬಾರ್ದು. ನೋಡಿದ್ರೆ ಸರಿಯಿಲ್ಲ, ಈಗ ನಾವು ಹಾವುಗೆ ನೋಡಿ ಬಿಟ್ಟಿದ್ವಿ. ಅದ್ಕೆ ದೋಶ ಆಗಬಾರ್ದು. ಪರಿಯಾರ ಆಗಬೇಕು. ಅದ್ಕೆ ಹಣ ಕಳಸ್‌ಬಿಡ್ತಿನಿ" ಎಂದ.


"ಯಾವ ತರ ದೋಶ ಆಗ್ಯದೆ ಅಂತ ಹೇಳ್ತಿಯಾ?" ಎಂದೆ.

"ಅದು ಹೇಳಕ್ಕೆ ಬರಲ್ಲ, ಹಾವುಗಳು ಆಗ ನಮ್ಮ ನೋಡಿ 'ಏನಪ್ಪ ಈ ಮನ್ಸುರ್‍ಗೆ ನಾಚ್ಗೆ ಹೇಸ್ಗೆ ಇಲ್ಲ, ಹಿಂಗೆ ನೋಡ್ತ ನಿಂತಿದ್ದಾರಲ್ಲ, ಇವುರಿಗೆ ಒಳ್ಳೆದಾಗಬಾರ್ದು' ಅಂತ ಹೇಳ್ಕಂಡಿದ್ರೆ? ಅದೆಲ್ಲಾ ಯಾತ್ಗೆ ಬೇಕು ಸಾರ್. ಸುಬ್ರಮ್ಮಣ್ಣಿಗೆ ಹಣ ಹೋದ್ರೆ ಎಲ್ಲ ಸರಿಯಾಗ್ತದೆ. ಈಗ ಫಾರಂ ಭರ್ತಿ ಮಾಡಿ" ಎಂದು ತವಕಿಸಿದ.

"ನಿಮ್ಮಲ್ಲೇ ಯಾವ ಪರಿಹಾರವೂ ಇಲ್ವೆ?" ಎಂದೆ.

"ನಮ್ಮಲ್ಲಿ ಇಲ್ಲ ಸಾರ್. ನಂದು ಹೆಂಡ್ತಿದು ಒತ್ತಾಯ ಜಾಸ್ತಿಯಾಯ್ತು ಸಾರ್. ಅದ್ಕೆ ಕಳುಸ್‌ಬಿಡ್ತಿನಿ" ಅಂದ. "ರಶೀದ್, ಬೇಜಾರಾಗಬೇಡಿ. ಆ ಸುಬ್ರಮಣ್ಯದ ಅಡ್ರೆಸ್ ನನಿಗೆ ಗೊತ್ತಿಲ್ಲ" ಎಂದೆ. "ಹೋಗ್ಲಿ ಕೊಡಿ ಸಾರ್, ಪೋಸ್ಟಾಫೀಸಿನಲ್ಲೇ ಇರ್ತದೆ, ತುಂಬಿಸ್ತಿನಿ ಕೊಡಿ" ಎಂದುಹೋದ. ಆ ನಂತರ ನನಗೆ ತಿಳಿದಿದ್ದೇನೆಂದರೆ. ಆ ಕೇರೆ ಹಾವುಗಳ ಎಣೆಯಾಟವನ್ನು ಬಿಡಿಸಿ ಓಡಿಸಿದವನೇ ಈ ರಶೀದನಂತೆ ಅದರ ದೋಶ ಪರಿಹಾರಕ್ಕಾಗಿ ಸುಬ್ರಮಣ್ಯಕ್ಕೆ ನೂರ ಒಂದು ರೂ. ಕಾಣಿಕೆ! ಮೂಢನಂಬಿಕೆ ಆರಾಧಕರು ಹಿಂದೂಗಳಲ್ಲಷ್ಟೇ ಇದ್ದಾರೆ ಎಂದು ತಿಳಿದಿದ್ದೆ. ಇನ್ನೂ ಯಾವ್ಯಾವ ದೇವರಿಗೆ ಈ ಸಾಬರು ಮನಿಯಾರ್ಡರ್ ಮಾಡುತ್ತಿದ್ದಾರೋ, ಏನೋ. ಈಸಿಕೊಳ್ಳುವ ದೇವರಿಗೇ ಗೊತ್ತು!!


• ಬಿ.ಚಂದ್ರೇಗೌಡ



ಬಳ್ಳಾರಿ ಕಳ್ಳರ ಸಂಗ ಬಿಜೆಪಿಗೆ ಜಗನ್?

ಆಂಧ್ರದ ದಿವಂಗತ ಮುಖ್ಯಮಂತ್ರಿ ರಾಜಶೇಖರ ರೆಡ್ಡಿ ಅವರ ಮಗ ಜಗನ್ ಮೋಹನ್ ರೆಡ್ಡಿ, ಬಳ್ಳಾರಿ ರೆಡ್ಡಿಗಳ ಬೆಂಬಲದೊಂದಿಗೆ ಬಿಜೆಪಿಯೊಳಗೆ ನುಸುಳಲು ಯತ್ನಿಸುತ್ತಿದ್ದಾನಾ? ಅಥವಾ ಬಿಜೆಪಿಯವರೇ ಜಗನ್‌ನನ್ನು ಕ್ಯಾಚ್ ಹಿಡಿಯಲು ತಯಾರಿ ನಡೆಸುತ್ತಿದ್ದಾರಾ?

ಎಂಬ ಎರಡೂ ಪ್ರಶ್ನೆಗೆ ಉತ್ತರ 'ಹೌದು.'


ರಾಜಶೇಖರರೆಡ್ಡಿ


ರಾಜಶೇಖರ ರೆಡ್ಡಿ ವಿಮಾನ ಅಪಘಾತದಲ್ಲಿ ಜೀವಬಿಟ್ಟಮೇಲೆ, ಅಪ್ಪನ ಕುರ್ಚಿಯಲ್ಲಿ ಕೂರಲು ಜಗನ್ ತುದಿಗಾಲಲ್ಲಿ ನಿಂತಿದ್ದ, ಆದರೆ ಕಾಂಗ್ರೆಸ್ ಹೈಕಮಾಂಡ್ ಆಂಧ್ರದ ಫೈನಾನ್ಸ್ ಮಿನಿಸ್ಟರ್ ರೋಸಯ್ಯನವರನ್ನು ಮುಖ್ಯ ಮಂತ್ರಿ ಸ್ಥಾನಕ್ಕೆ ಪಟ್ಟಾಭಿಷೇಕ ಮಾಡಿತು.

ಅಂದಿನಿಂದ ಜಗನ್‌ಗೆ ಕಾಂಗ್ರೆಸ್ ಹೈಕಮಾಂಡ್ ಬಗ್ಗೆ ಒಂಥರಾ ಸಿಡಿಮಿಡಿ ಇದ್ದೇ ಇದೆ. ಹೇಗಾದರೂ ಮಾಡಿ ರೋಸಯ್ಯನನ್ನು ಪದಚ್ಯುತಗೊಳಿಸಿ ತಾನು ಆಂಧ್ರದ ಮುಖ್ಯಮಂತ್ರಿಯಾಗಬೇಕು ಎಂಬುದು 36 ವರ್ಷ ವಯಸ್ಸಿನ ಈ ಎಳೇ ರಾಜಕಾರಣಿಯ ಹಂಬಲ. ಹೀಗಾಗಿ ರೋಸಯ್ಯನವರ ಆಡಳಿತದ ವಿರುದ್ಧ ತನ್ನ 'ಸಾಕ್ಷಿ' ಪತ್ರಿಕೆ ಮತ್ತು ಟಿವಿ ಚಾನೆಲ್‌ಗಳಲ್ಲಿ ಮೇಲಿಂದ ಮೇಲೆ ಸುದ್ದಿ ಮಾಡಿಸತೊಡಗಿದ್ದಾನೆ. ಅಲ್ಲಿನ ಗ್ರೀನ್‌ಕಾರ್ಡ್ ಅವ್ಯವಹಾರವನ್ನು ಬಂಡವಾಳವನ್ನಾಗಿಸಿಕೊಂಡು ರೋಸಯ್ಯನಿಗೆ ಇನ್ನಿಲ್ಲದ ಕಾಟ ಕೊಡುತ್ತಿದ್ದಾನೆ...



'ಸಾಂತ್ವನ ಯಾತ್ರೆ'ಯ ನೆಪ

ರಾಜಶೇಖರ ರೆಡ್ಡಿ ಸತ್ತಾಗ ಆಂಧ್ರದ ಕೆಲ ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಆದರೆ ಆ ಸಂದರ್ಭದಲ್ಲಿ ಚಿಕೂನ್ ಗುನ್ಯಾ, ಹಂದಿಜ್ವರ ತರಹದ ಕಾಯಿಲೆಗಳಿಂದಾಗಿ ಸತ್ತವರನ್ನು, ಇತರೆ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಂಡವರನ್ನೂ 'ರಾಜಶೇಖರ ರೆಡ್ಡಿಗಾಗಿ ಜೀವಬಿಟ್ಟವರು' ಎಂದು ಜಗನ್ ರೆಡ್ಡಿಯ ಸುದ್ದಿ ಮಾಧ್ಯಮಗಳು ಬಣ್ಣಿಸಿದ್ದವು. ಹೀಗೆ ತನ್ನ ತಂದೆಗಾಗಿ ಜೀವತೆತ್ತ(!)ವರನ್ನು ಮತ್ತು ಇನ್ನೂ ಆ ನೋವಿನಲ್ಲಿರುವವರನ್ನು ಭೇಟಿ ಮಾಡಬೇಕು ಎಂಬ ನೆಪದಲ್ಲಿ ಜಗನ್ 'ಸಾಂತ್ವನ ಯಾತ್ರೆ'ಯನ್ನು ಆರಂಭಿಸಿದ್ದ ಕಾಂಗ್ರೆಸ್ ಹೈಕಮಾಂಡ್‌ನ ವಿರೋಧದ ನಡುವೆಯೂ ಜಗನ್ ತೆಲಂಗಾಣ, ರಾಯಲಸೀಮಾ, ಪ್ರದೇಶಗಳಲ್ಲಿ ಯಾತ್ರೆ ನಡೆಸಿದ.


ರೋಸಯ್ಯ

ಅಸಲಿಗೆ ಜಗನ್ ರೆಡ್ಡಿಗೆ ಸತ್ತವರ ಬಗ್ಗೆ ಕಾಳಜಿಯಾಗಲಿ, ಸಾಂತ್ವನ ಹೇಳುವ ಮನಸ್ಸಾಗಲಿ ಯಾವುದೂ ಇರಲಿಲ್ಲ. 'ಯಾತ್ರೆ'ಯ ಸಬೂಬು ಹೇಳಿ ಲಕ್ಷಲಕ್ಷ ಜನರನ್ನು ಸೇರಿಸಿಕೊಂಡು 'ನನಗೆ ಜನ ಬೆಂಬಲವಿದೆ' ಎಂಬುದನ್ನು ಮುಖ್ಯಮಂತ್ರಿ ರೋಸಯ್ಯನಿಗೆ ಮತ್ತು ಕಾಂಗ್ರೆಸ್ ಹೈಕಮಾಂಡಿಗೆ ಮನದಟ್ಟು ಮಾಡುವುದೇ ಆತನ ಮೂಲ ಉದ್ದೇಶವಾಗಿತ್ತು.

ಜಗನ್ ತಂದೆ ರಾಜಶೇಖರ ರೆಡ್ಡಿ ಪ್ರತ್ಯೇಕ ತೆಲಂಗಾಣವನ್ನು ಹಿಂದಿನಿಂದಲೂ ವಿರೋಧಿಸಿಕೊಂಡು ಬಂದಿದ್ದವರು. ಅಷ್ಟೇ ಅಲ್ಲ ಸ್ವತಃ ಜಗನ್ ಕೂಡ ಸಂಸತ್ತಿನಲ್ಲಿ ಯಾವುದೇ ಕಾರಣಕ್ಕೂ ಆಂಧ್ರವನ್ನು ವಿಭಜಿಸಿ ಎರಡು ರಾಜ್ಯಗಳನ್ನಾಗಿಸುವುದು ಬೇಡ ಎಂದಿದ್ದ, ಆದರೆ ಪ್ರತ್ಯೇಕ ರಾಜ್ಯಕ್ಕೆ ಹೋರಾಟ ನಡೆಸಿರುವ ತೆಲಂಗಾಣದ ಜನರಿಗೆ ಕಾಂಗ್ರೆಸ್ ವಿರುದ್ಧ ಸಿಕ್ಕಾಪಟ್ಟೆ ಸಿಟ್ಟಿದೆ. ಈ ಹಿನ್ನಲೆಯಲ್ಲಿಯೇ 'ಸಾಂತ್ವನದ ನೆಪದಲ್ಲಿ ತೆಲಂಗಾಣ ಪ್ರಾಂತ್ಯಕ್ಕೆ ನುಸುಳುವ ಪ್ರಯತ್ನ ಮಾಡಬೇಡ' ಎಂದು ಟಿಆರ್‌ಎಸ್‌ನವರು ಜಗನ್‌ಗೆ ವಾರ್ನ್ ಮಾಡಿದ್ದರು. ಹಾಗೆಯೇ ಕಾಂಗ್ರೆಸ್ ಕೂಡ ತೆಲಂಗಾಣ ಮತ್ತೆ ಹತ್ತಿ ಉರಿಯುವುದು ಬೇಡವೆಂದು ಈ ಯಾತ್ರೆಯನ್ನು ಕೈಬಿಡು ಎಂದು ಜಗನ್‌ಗೆ ಆದೇಶಿಸಿತ್ತು, ಅದನ್ನೆಲ್ಲ ಧಿಕ್ಕರಿಸಿದ ಜಗನ್ ತಾನು ಗೆದ್ದಿರುವ ಕಡಪಾ ಕ್ಷೇತ್ರದ ಜನರ ಹಿಂಡುಕಟ್ಟಿಕೊಂಡು, ಸಾಂತ್ವನದ ನೆಪದಲ್ಲಿ ಜಾಥಾ ಹೊರಟರೆ ಗತಿ ಏನಾಗಬೇಡ? ಮಾತ್ರವಲ್ಲ ಈತ ಮೊದಲು ಭೇಟಿ ನೀಡಿದ್ದೂ ತೆಲಂಗಾಣ ರಾಜಕೀಯದ ಕೇಂದ್ರ ಸ್ಥಾನವಾದ ವಾರಂಗಲ್‌ಗೆ. ಅಲ್ಲಿ ಈತನ ಯಾತ್ರೆಯಿಂದಾಗಿ ಸಾಂತ್ವನ ಸೃಷ್ಟಿಯಾಗುವ ಬದಲಾಗಿ ದೊಂಬಿ ಗಲಾಟೆಗಳಾಗಿ, ಪೊಲೀಸ್ ಫೈರಿಂಗ್‌ಗಳಾದವು. ನೂರಾರು ಜನರಿಗೆ ಲಾಠಿ ಏಟುಗಳು ಬಿದ್ದವು. ಪರಿಸ್ಥಿತಿಯನ್ನು ಹತೋಟಿಗೆ ತರಲು ರಾಜ್ಯ ಸರ್ಕಾರ ಸ್ವತಃ ಜಗನ್‌ನನ್ನೇ ಅರೆಸ್ಟ್ ಮಾಡಿತು.

ಜೂನ್ 11ಕ್ಕೆ ಬೈ ಎಲೆಕ್ಷನ್ ಇರುವ ಈ ಸಂದರ್ಭದಲ್ಲಿ ಈತನನ್ನು ಹೀಗೆ ಬಿಟ್ಟರೆ ಈತ ಆಂಧ್ರಕ್ಕೇ ಬೆಂಕಿಯಿಕ್ಕುತ್ತಾನೆ ಎಂಬುದನ್ನು ಅರಿತ ಆಂಧ್ರ ಕಾಂಗ್ರೆಸ್‌ನ ಉಸ್ತುವಾರಿ ವಹಿಸಿರುವ ವೀರಪ್ಪ ಮೊಯ್ಲಿ ತಕ್ಷಣ ಜಗನ್‌ನನ್ನು ಡೆಲ್ಲಿಗೆ ಕರೆಸಿಕೊಂಡು 'ಯಾತ್ರೆ ನಿಲ್ಲಿಸು' ಎಂದು ಆಜ್ಞೆ ಹೊರಡಿಸಿದರು.

ಬಿಜೆಪಿ ಬಲೆಗೆ?

ಜಗನ್ ಹುಂಬಾಟಗಳಿಗೆ ಸ್ವತಃ ಕಾಂಗ್ರೆಸ್‌ನಲ್ಲೇ ವಿರೋಧ ವ್ಯಕ್ತವಾಗುತ್ತಿರುವ ಈ ಸಂದರ್ಭವನ್ನು ಬಿಜೆಪಿಯವರು ಎನ್‌ಕ್ಯಾಷ್ ಮಾಡಿಕೊಳ್ಳಲು ಹವಣಿಸುತ್ತಿದ್ದಾರೆ.

ಮೊನ್ನೆ ಜಗನ್ ರೆಡ್ಡಿ ಕಾಂಗ್ರೆಸ್ ಹೈಕಮಾಂಡ್‌ನೊಂದಿಗೆ ಮೀಟಿಂಗ್‌ಗೆಂದು ದೆಹಲಿಗೆ ಹೋದವನು ಅಲ್ಲಿ ಬಿಜೆಪಿ ನಾಯಕರನ್ನೆಲ್ಲ ಗುಟ್ಟಾಗಿ ಭೇಟಿಯಾಗಿ ಬಂದಿದ್ದಾನೆ. ಯಶವಂತ ಸಿನ್ಹಾ, ಅಹ್ಲುವಾಲಿಯಾ, ನಿಶಾಂತ್ ದುಬೆ ಹೀಗೆ ಪ್ರತಿಯೊಬ್ಬರೊಂದಿಗೂ ಪ್ರತ್ಯೇಕವಾಗಿ ಸಮಾಲೋಚನೆ ನಡೆಸಿದ್ದಾನೆ. ದೆಹಲಿಗೆ ಹೋದ ಜಗನ್ ಕಾಂಗ್ರೆಸ್ ಮೀಟಿಂಗ್‌ನಲ್ಲಿ ಪಾಲ್ಗೊಂಡಿದ್ದಕ್ಕಿಂತಾ ಬಿಜೆಪಿ ಪಾಳೆಯದಲ್ಲಿ ಕಾಣಿಸಿಕೊಂಡಿದ್ದೇ ಹೆಚ್ಚು...

ಮೊದಲೇ ಕರ್ನಾಟಕದ ಗಣಿಕಳ್ಳ ಜನಾರ್ದನ ರೆಡ್ಡಿ ಇವತ್ತು ಜಗನ್ ನೇತೃತ್ವದ ಇಪ್ಪತ್ತೈದು ಸಾವಿರ ಕೋಟಿ ಬಂಡವಾಳದ ಬ್ರಾಹ್ಮೀ ಸ್ಟೀಲ್ಸ್, ಜಗತಿ ಪಬ್ಲಿಕೇಷನ್ಸ್ ಸೇರಿದಂತೆ ಹಲವಾರು ವ್ಯವಹಾರಗಳಲ್ಲಿ ಪಾಲುದಾರನಾಗಿದ್ದಾನೆ. ಹೀಗಾಗಿ ಕಾಂಗ್ರೆಸ್ ಹೈಕಮಾಂಡ್ ಜೊತೆ ಜಗನ್ ಒಳಜಗಳ ಮುಂದುವರೆದರೆ ಜನಾರ್ದನ ರೆಡ್ಡಿಯ ಬೆಂಬಲದೊಂದಿಗೆ ಜಗನ್ ಬಿಜೆಪಿಗೆ ಎಗರಿಬೀಳುವುದು ಗ್ಯಾರೆಂಟಿ ಎಂಬಂತಾಗಿದೆ.


ಹಾಗೇನಾದರೂ ಆದರೆ ಬಳ್ಳಾರಿ ಧಣಿಗಳನ್ನು ಬರೀ ಕರ್ನಾಟಕದಲ್ಲಿ ಮಾತ್ರವಲ್ಲ, ಆಂಧ್ರದಲ್ಲೂ ಹಿಡಿದು ನಿಲ್ಲಿಸಲು ಸಾಧ್ಯವಿಲ್ಲ...

• ಅರುಣ್ ಕುಮಾರ್.ಜಿ
arunodayagc@gmail.com

ಶೂಟೌಟ್‌ನ ಮರ್ಮ ಮತ್ತು ರವಿಶಂಕರನ ಕರ್ಮ

ನೊಬೆಲ್‌ಗಾಗಿ ನಾಟಕ?

• ರಾ. ಸೋಮನಾಥ್
ra.somanath2010@gmail.com



ಆರ್ಟ್ ಆಫ್ ಲೀವಿಂಗ್‌ನ ರವಿಶಂಕರ್‌ನನ್ನು ಕೊಂದು ನಕ್ಸಲೀಯರಿಗಾಗಲಿ, ಅಲ್‌ಖೈದಾದ ಲಾಡೆನ್‌ಗಾಗಲಿ ಅಥವಾ ಎಲ್ಟಿಟಿಇ ಉಗ್ರರಿಗಾಗಲಿ ನಯಾಪೈಸೆಯ ಲಾಭ ಹುಟ್ಟುವುದುಂಟಾ?

ಆತನನ್ನು ಮುಗಿಸಿದ ಮಾತ್ರಕ್ಕೆ ದೇಶಕ್ಕಾಗಲಿ, ರಾಜ್ಯಕ್ಕಾಗಲಿ ಏನಾದರೂ ಹಾನಿ ಮಾಡಬಹುದೆಂದು ಯಾರಾದರೂ ಲೆಕ್ಕ ಹಾಕಬಹುದಾ?

ಇಂಥದೊಂದು ಕಾಮನ್‌ಸೆನ್ಸ್ ಕೂಡ ಸೋಗಲಾಡಿ ರವಿಶಂಕರ್‌ಗಿಲ್ಲ. ತನ್ನನ್ನು ಮುಗಿಸಲೆಂದೇ ಗುಂಡಿನ ದಾಳಿ ನಡೆಯಿತೆಂದೂ ತನ್ನ ದೈವೀಶಕ್ತಿಯಿಂದಲೇ ಹಂತಕರ ಉದ್ದೇಶ ವಿಫಲವಾಯಿತೆಂದೂ ಕಂಡಕಂಡ ಮೀಡಿಯಾಗಳಿಗೆ ತನ್ನ ಛೇಲಾಗಳ ಮೂಲಕ ಫೋನಾಯಿಸಿ ಪುಕಾರೆಬ್ಬಿಸಿದ ರವಿಶಂಕರ್ ರವಿಶಂಕರಗೆ ಆತನ ಕಪಟ ನಾಟಕವೇ ಉಲ್ಟಾ ಹೊಡೆದಿದೆ.

ಮೊನ್ನೆ ಭಾನುವಾರದ ಸಂಜೆ ಕನಕಪುರ ರಸ್ತೆಯ ವ್ಯಕ್ತಿ ವಿಕಾಸ ಕೇಂದ್ರ ಅರ್ಥಾತ್ ಆರ್ಟ್ ಆಫ್ ಲೀವಿಂಗ್ ಅಡ್ಡೆಯಲ್ಲಿ ಹಾರಿದ ಗುಂಡಿನ ಮೂಲ ಭೇದಿಸುತ್ತಾ ಹೋದಂತೆಲ್ಲ ರವಿಶಂಕರ್ ಸುತ್ತಲ ಚಿತ್ರವಿಚಿತ್ರ ಕೂಟಗಳು, ಅಲ್ಲಿನ ಆಂತರಿಕ ಕಚ್ಚಾಟ, ಒಬ್ಬರನ್ನೊಬ್ಬರು ತುಳಿಯಲು ನಡೆಸುವ ಷಡ್ಯಂತ್ರಗಳು ಮತ್ತು ಇಡೀ ಆರ್ಟ್ ಆಫ್ ಲೀವಿಂಗ್ ಹೇಗೆ ರೋಗಕ್ಕೆ ಸಿಲುಕಿ ಕೊಳೆಯುತ್ತಿದೆಯೆಂಬ ಸತ್ಯ ಗೋಚರಿಸುತ್ತದೆ. ಮೊನ್ನೆ ನಡೆದ ಶೂಟ್‌ಔಟ್ ಈ ಎಲ್ಲಾ ಕೊಳಕಿನ ಅಡ್ಡ ಪರಿಣಾಮವಷ್ಟೆ.

ಮೇ 30 ರ ಭಾನುವಾರ ಸಂಜೆ ಸತ್ಸಂಗಕ್ಕೆಂದು ವಿಶಾಲಾಕ್ಷಿ ಮಂಟಪಕ್ಕೆ ಬಂದಿದ್ದ ರವಿಶಂಕರ್ ಮೇಲೆ ಯಾರೋ ದುಷ್ಕರ್ಮಿಗಳು ಗುಂಡು ಹಾರಿಸಿದರೆಂದೂ ರವಿಶಂಕರ ಪವಾಡ ಸದೃಶವಾಗಿ ಬಚಾವಾದರೆಂದೂ ಮರುದಿನದ ಪತ್ರಿಕೆಗಳಲ್ಲಿ ಸುದ್ದಿಯಾಗಿದ್ದೇ ಕಪಟ ನಾಟಕವಾಗಿತ್ತು. ಹಾಗೆ ಕಂಡಕಂಡ ಮೀಡಿಯಾಗಳಿಗೆ ಫೋನ್ ಮಾಡಿ ಸುದ್ದಿ ಹಬ್ಬಿಸಿದ್ದು ಕೂಡ ರವಿಶಂಕರ್‌ನ ಮತ್ತೊಂದು ಹುನ್ನಾರವಾಗಿತ್ತು.

ಪಟಾಕಿ ಸದ್ದು

ನಡೆದ ಘಟನೆ ಮತ್ತು ನಂತರದ ಗೊಂದಲದ ಕಲಸುಮೇಲೋಗರವೇ ಇಡೀ ಶೂಟೌಟ್ ಪ್ರಕರಣವನ್ನು ಮತ್ತಷ್ಟು ಅವಾಂತರಕ್ಕೀಡುಮಾಡಿತ್ತು. ಅವತ್ತು ಸಂಜೆಯ ಸತ್ಸಂಗಕ್ಕೆಂದು ಬಂದ ಭಕ್ತಾದಿಗಳ ಸಂಖ್ಯೆಯೇ ಐದಾರು ಸಾವಿರದಷ್ಟಿತ್ತು. ಆರು ಗಂಟೆಯ ಹೊತ್ತಿಗೆ ಸತ್ಸಂಗ ಮುಗಿಸಿದ ರವಿಶಂಕರ್ ವಿಶಾಲಾಕ್ಷಿ ಮಂಟಪದಿಂದ ಡಿವೈನ್‌ಶಾಪ್ ಅನ್ನು ಹಾದು ಯಜ್ಞಶಾಲೆಯನ್ನು ದಾಟಿ ಅಲ್ಲೇ ನಿಲ್ಲಿಸಿದ್ದ ತಮ್ಮ ಕಾರ್ ಹತ್ತಿ ಕೂತಿದ್ದಾರೆ. ಅದು ಸಂಜೆ 6.10ರ ಸಮಯ. ಕಾರ್ ಇನ್ನೇನು ಚಲಿಸಬೇಕೆನ್ನುವಷ್ಟರಲ್ಲಿ ಪಟಾಕಿ ಹೊಡೆದಂತೆ ಸದ್ದಾಗಿದೆ. ಯಾರೋ ಭಕ್ತಾದಿಗಳು ಪಟಾಕಿ ಹೊಡೆದಿರಬೇಕೆಂದು ಲೆಕ್ಕಹಾಕಿದ ರವಿಶಂಕರ್ ತನ್ನ ಕಾರಿನ ಸಮೇತ ಜಾಗ ಖಾಲಿ ಮಾಡುತ್ತಿದ್ದಂತೆ ಯಜ್ಞ ಶಾಲೆಯ ಬಳಿಯಿದ್ದ ಚಪ್ಪಲಿ ಸ್ಟ್ಯಾಂಡ್ ಬಳಿ ಕಿರುಚಾಟ ಶುರುವಾಗಿದೆ. ಅದು ವಿನಯ್ ಎಂಬ ರವಿಶಂಕರನ ಪರಮ ಭಕ್ತನೊಬ್ಬ ಮತ್ತು ಆತನ ತಂದೆ ಮಲ್ಲಿಕಾರ್ಜುನ ಎಂಬ ಬೆಳಗಾವಿ ಮೂಲದ ಬ್ರಾಹ್ಮಣ ಕುಬೇರನೋರ್ವ ಸೇರಿಕೊಂಡು ಎಬ್ಬಿಸಿದ ಗದ್ದಲ. ಇದ್ದಕ್ಕಿದ್ದಂತೆ 'ಅಯ್ಯೋ ಗುಂಡು... ಯಾರೋ ಶೂಟ್ ಮಾಡ್ತಾ ಇದ್ದಾರೆ! ರವಿಶಂಕರನವರನ್ನ ಕೊಲ್ಲೋಕೆ ಯಾರೋ ಗುಂಡು ಹಾರಿಸ್ತಿದ್ದಾರೆ....!' ಇತ್ಯಾದಿಯಾಗಿ ದೆವ್ವ ಹಿಡಿದವನಂತೆ ಕಿರುಚಲಾರಂಭಿಸಿದ್ದಾನೆ ವಿನಯ್.

ಇದನ್ನು ದೂರದಿಂದ ಗಮನಿಸಿದ್ದೇ ರವಿಶಂಕರ್ ಕಾರೆತ್ತಿಕೊಂಡು ಪರಾರಿಯಾಗಿದ್ದಾನೆ. ಹಾಗೇ ಕಾರನ್ನೇರಿ ಹೋದ ರವಿಶಂಕರ್ ಕೆಲವೇ ನಿಮಿಷಗಳ ನಂತರ ಮತ್ತೆ ವಾಪಸ್ಸಾಗಿ ಬಿದ್ದ ಬುಲೆಟ್ಟು, ಸುತ್ತಲ ಸ್ಥಳ; ಇತ್ಯಾದಿಗಳನ್ನು ತಡಕಾಡಿದಂತೆ ಮಾಡಿ ಮತ್ತೆಲ್ಲಿಗೋ ಹೋಗಿದ್ದಾನೆ. ನೆರೆದ ಭಕ್ತಾದಿಗಳೆಲ್ಲ ದಿಗ್ಭ್ರಾಂತರಾಗಿ ತಲೆಗೊಂದು ರೀತಿ ಮಾತಾಡುತ್ತಿದ್ದರು. ಈ ಮಧ್ಯೆ ಮತ್ತೆ ಎಂಟೂವರೆಗೆ ಪ್ರತ್ಯಕ್ಷನಾದ ರವಿಶಂಕರ್ ಅದೇ ವಿಶಾಲಾಕ್ಷಿ ಮಂಟಪದಲ್ಲಿ ಇಂಗ್ಲಿಷ್ ಭಾಷಣ ಮಾಡಿದ್ದಾನೆ.

ರವಿಶಂಕರನ ನಾಟಕ

ಅದೇನು ಚರ್ಚೆಯಾಯಿತೊ ಗೊತ್ತಿಲ್ಲ, ಆಶ್ರಮದ ಸೆಕ್ಯೂರಿಟಿ ಆಫೀಸರ್ ಕಿಶೋರ್‌ಪ್ರಸಾದ್ 9.15 ರ ಹೊತ್ತಿಗೆ ಹಾರೋಹಳ್ಳಿ ಪೊಲೀಸ್ ಠಾಣೆಗೆ ಫೋನ್ ಮಾಡಿ ಯಾರೋ ರವಿಶಂಕರನ ಮೇಲೆ ಗುಂಡು ಹಾರಿಸಿದ್ದಾರೆಂದು ದೂರಿದ್ದಾನೆ. ಇದಾಗಿ ಮುಕ್ಕಾಲು ಗಂಟೆಯ ನಂತರ ಅಂದರೆ ರಾತ್ರಿ ಸುಮಾರು ಹತ್ತರ ಹೊತ್ತಿಗೆ ಆಶ್ರಮದ ಆಡಳಿತಾಧಿಕಾರಿ ಲಂಬಾ ಎಂಬಾತ ರಾಮನಗರದ ಡಿವೈಎಸ್‌ಪಿ ದೇವರಾಜ್‌ಗೆ ಫೋನಾಯಿಸಿ ರವಿಶಂಕರನ ಹತ್ಯೆಗೆ ನಡೆದ ಯತ್ನದ ವಿವರಗಳನ್ನು ಬಣ್ಣಿಸಿದ್ದಾನೆ. ಪೊಲೀಸರು ಬರುವುದಕ್ಕೂ ಮೊದಲೇ ಅಲ್ಲಿ ಸುದ್ದಿ ಚಾನಲ್ಲುಗಳ ಕ್ಯಾಮೆರಾಗಳು ಬಂದಾಗಿತ್ತು. ರವಿಶಂಕರ್‌ನ ಛೇಲಾಗಳು ಪೊಲೀಸರಿಗಿಂತಲೂ ಮೊದಲೇ ಟೀವಿಗಳ ವರದಿಗಾರರಿಗೆ ಸುದ್ದಿ ಮುಟ್ಟಿಸಿದ್ದರು!


ಬಂದ ಪೊಲೀಸರು ಎಷ್ಟೆಲ್ಲಾ ತಲೆ ಕೆಡಿಸಿಕೊಂಡರೂ ಗುಂಡಿನ ಮರ್ಮ ಮಾತ್ರ ಗೊತ್ತಾಗಲೇ ಇಲ್ಲ. ರವಿಶಂಕರ ಕಾರು ನಿಂತಿದ್ದ ಜಾಗಕ್ಕೂ ಭಕ್ತ ವಿನಯ್‌ಗೆ ಗುಂಡು ಬಿದ್ದ ಜಾಗಕ್ಕೂ ಅಜಗಜಾಂತರ ದೂರ. ಬಿದ್ದ ಗುಂಡಿಗೆ ವಿನಯ್‌ನ ಪ್ಯಾಂಟು ಹರಿದು ತರಚಿದಂತೆ ಮೇಲು ಮಟ್ಟದ ಗಾಯವಾಗಿತ್ತೇ ಹೊರತು ಬುಲೆಟ್ಟು ಆತನ ತೊಡೆ ಹೊಕ್ಕಿರಲಿಲ್ಲ. ಗುಂಡು ಸಿಡಿದದ್ದನ್ನು ಖಾತರಿ ಮಾಡಿಕೊಂಡ ರವಿಶಂಕರ್ ನಂತರವೇ ಕಾರನ್ನೇರಿ ಹೋಗುತ್ತಾನೆ. ಹಾಗೇ ಹೋದವನು ಕೆಲ ಹೊತ್ತಿನ ನಂತರ ಮತ್ತೆ ವಾಪಸ್ಸಾಗಿ ಏನೋ ಪರಿಶೀಲಿಸಿದ ನಾಟಕವಾಡುತ್ತಾನೆ. ಇದಾಗಿ ಎಷ್ಟೋ ಹೊತ್ತಿನ ನಂತರ ಮತ್ತೆ ಬಂದು ಅದೇ ಕಳ್ಳಸಗೆ ಬೀರಿ ಸತ್ಸಂಗ ನಡೆಸುತ್ತಾನೆ. ಘಟನೆ ನಡೆದು ಮೂರು ಗಂಟೆಯಾದರೂ ಪೊಲೀಸರಿಗೆ ದೂರು ಕೊಡದ ರವಿಶಂಕರ್ ಇದೆಲ್ಲಕ್ಕೂ ಮೊದಲೇ ಕೊಲೆಯತ್ನದಿಂದ ರವಿಶಂಕರ ಪಾರಾದರೆಂದು ಮಾಧ್ಯಮಗಳಿಗೆ ಛೇಲಾಗಳ ಮೂಲಕ ಸುದ್ದಿ ಮುಟ್ಟಿಸುತ್ತಾನೆ.

ಒಂದಕ್ಕೊಂದು ತಾಳೆ ಹೊಂದದ ಇಂಥ ಪ್ರಸಂಗಗಳನ್ನೆಲ್ಲ ಲೆಕ್ಕ ಹಾಕಿಯೇ ಪೊಲೀಸ್ ಮಹಾ ನಿರ್ದೇಶಕ ಅಜಯ್‌ಕುಮಾರ್ ಸಿಂಗ್ ಇದೊಂದು ಘಟನೆಯೇ ಹೊರತು ದಾಳಿಯಲ್ಲ ಎಂದು ಸ್ಪಷ್ಟವಾಗಿ ಹೇಳಿಬಿಟ್ಟರು. ಏಕೆಂದರೆ ಅಜಯ್‌ಕುಮಾರ್ ಸಿಂಗ್‌ಗೂ ಮೊದಲೇ ಕೇಂದ್ರ ಗೃಹ ಸಚಿವ ಚಿದಂಬರಂ 'ಗುಂಡು ಹಾರಿದೆ ನಿಜ; ಆದರೆ ರವಿಶಂಕರ ಹೋದ ಐದು ನಿಮಿಷದ ನಂತರ ಶೂಟೌಟ್ ಸಂಭವಿಸಿದೆಯಾದ್ದರಿಂದ ಇದು ಹತ್ಯಾಯತ್ನ ಅಲ್ಲವೇ ಅಲ್ಲ...' ಎಂದು ಸ್ಪಷ್ಟವಾಗಿ ಹೇಳಿಬಿಟ್ಟಿದ್ದರು.

ಹಂಸಧಾಮದಲ್ಲಿ....

ಬಹುಶಃ ತನ್ನ ಹತ್ಯಾಯತ್ನದ ಸುದ್ದಿ ಹರಡಿ ಅಲ್ಲೋಲಕಲ್ಲೋಲವಾಗುತ್ತದೆ ಎಂದು ಲೆಕ್ಕ ಹಾಕಿದ್ದ ರವಿಶಂಕರ್‌ಗೆ ಕೇಸು ಎಲ್ಲೋ ಉಲ್ಟಾ ಹೊಡೆಯುತ್ತಿದೆ ಎನ್ನಿಸಿರಬೇಕು. ತಕ್ಷಣವೇ ಪತ್ರಿಕಾಗೋಷ್ಠಿ ಕರೆದು 'ನನಗೆ ಯಾರೂ ಶತ್ರುಗಳಿಲ್ಲ. ಯಾರು ನನ್ನ ಹತ್ಯೆಗೆ ಯತ್ನಿಸಿದ್ದಾನೋ ಆತನನ್ನು ಕ್ಷಮಿಸಿದ್ದೇನೆ. ಖಂಡಿತಾ ಆತನನ್ನು ಸತ್ಸಂಗದಿಂದ ಮನಃಪರಿವರ್ತನೆ ಮಾಡುತ್ತೇನೆ.....!' ಎಂದು ಚಿತ್ರವಿಚಿತ್ರವಾಗಿ ಬಡಬಡಿಸಿದ್ದಾನೆ.

ನಡೆದದ್ದು ಹತ್ಯಾಯತ್ನ, ತನ್ನನ್ನು ಕೊಲ್ಲಲೆಂದೇ ಗುಂಡು ಹಾರಿಸಿದ್ದು ಎಂದು ರವಿಶಂಕರ್‌ಗೆ ಹೇಳಿದವರ್ಯಾರು? ಪೊಲೀಸರಿನ್ನು ತನಿಖೆಯನ್ನೇ ಮುಗಿಸಿಲ್ಲ ಆಗಲೇ ರವಿಶಂಕರ್ ಇದು ತನ್ನ ಕೊಲೆಯತ್ನವೆಂದು ಏಕೆ ಮತ್ತು ಹೇಗೆ ನಿರ್ಧರಿಸಿದ?



ಹಾಗೊಮ್ಮೆ ರವಿಶಂಕರ್‌ನನ್ನು ಯಾರಾದರೂ ಕೊಲ್ಲಬೇಕೆಂದು ಮನಸ್ಸು ಮಾಡಿದ್ದರೆ ಈ ರೀತಿ ಅರೆಬರೆಯಾಗಿ ತೀರ ಬೇಕಾಬಿಟ್ಟಿಯಾಗಿ ಯತ್ನಿಸುತ್ತಿರಲಿಲ್ಲ. ಕೊಲ್ಲಲೇಬೇಕೆಂದರೆ ಇದಕ್ಕಿಂತಲೂ ಉತ್ತಮ ಅವಕಾಶಗಳು ಸಿಕ್ಕಾಪಟ್ಟೆ ಇದ್ದವು. ರವಿಶಂಕರ ಸದ್ಯ ವಾಸಿಸುವುದು ಉರಿಪಾಳ್ಯದ ಆರ್ಟ್ ಆಫ್ ಲೀವಿಂಗ್ ಅಡ್ಡೆಯಲ್ಲಲ್ಲ. ಇಲ್ಲಿಂದ ಸರಿಸುಮಾರು ಎರಡೂವರೆ ಮೈಲಿ ದೂರದ ವಡೇರಹಳ್ಳಿ ಕೆರೆಯ ದಂಡೆ ಮೇಲಿನ ಹಂಸಧಾಮ ಸುತ್ತ ಯಾರೇ ಹಂತಕ ಅಡಗಿ ಕೂತರೂ ರವಿಶಂಕರ್‌ನನ್ನು ಸಲೀಸಾಗಿ ಕೊಂದುಬಿಡಬಹುದು. ಈ ಹಂಸಧಾಮದಲ್ಲಿ ಹೆಚ್ಚೆಂದರೆ ಐದೋ ಆರೋ ಮಂದಿ ಶಿಷ್ಯರಿರುತ್ತಾರೆ. ಅಂಥಾ ಸೆಕ್ಯೂರಿಟಿ ಕೂಡ ಇಲ್ಲ. ಕೆಲವೊಮ್ಮೆ ರವಿಶಂಕರ್ ಕೆರೆದಂಡೆಗುಂಟ ಒಬ್ಬೊಬ್ಬನೇ ವಾಕ್ ಮಾಡುತ್ತಿರುತ್ತಾನೆ.

ಕೊಲ್ಲಲೇಬೇಕೆಂದರೆ ಹಂಸಧಾಮಕ್ಕಿಂತ ಉತ್ತಮ ತಾಣ ಮತ್ತೊಂದಿಲ್ಲ. ಅಂಥ ಅವಕಾಶವನ್ನು ಬಿಟ್ಟು ಸಾವಿರಾರು ಜನ ಸೇರಿದ್ದ ಸತ್ಸಂಗವನ್ನೇ ಹಂತಕ ಆಯ್ದುಕೊಳ್ಳುತ್ತಾನೆಂದರೆ ಅದು ಮೂರ್ಖತನವಷ್ಟೆ. ಹಾಗೊಮ್ಮೆ ಹಂಸಧಾಮದಲ್ಲಿ ಸಾಧ್ಯವಾಗದೇ ಹೋದರೆ ಹುಣ್ಣಿಮೆ ರಾತ್ರಿಯಲ್ಲಿ ಚಂದ್ರನನ್ನು ನೋಡುತ್ತಾ ಹುಚ್ಚುಚ್ಚಾಗಿ ಅಲೆಯುವ ರವಿಶಂಕರ್‌ನನ್ನು ಅದೇ ಸಮಯ ಕಾದು ಮುಗಿಸಬಹುದಿತ್ತು. ಆರ್ಟ್ ಆಫ್ ಲೀವಿಂಗ್ ಅಡ್ಡೆಯಲ್ಲಿ ರವಿಶಂಕರನ ಪೂಜಾಸ್ಥಾನ, ಸಂದರ್ಶನದ ಕೊಠಡಿ, ಡಿವೈನ್‌ಶಾಪ್‌ನ ಕಾರಿಡಾರ್, ಯಾಗ ಶಾಲೆ... ಹೀಗೆ ಬೇಕಾಬಿಟ್ಟಿ ಸ್ಥಳಗಳಲ್ಲಿ ನಿರ್ಜನ ಸನ್ನಿವೇಶಗಳನ್ನು ಕಾದು ಗುಂಡು ಹಾರಿಸಬಹುದಿತ್ತು.

ಭಕ್ತರ ಕಚ್ಚಾಟ

ಇದನ್ನೆಲ್ಲ ಬಿಟ್ಟು ಸಾವಿರಾರು ಜನ ಸೇರಿದ್ದ ಭಾನುವಾರದ ಸತ್ಸಂಗವನ್ನೇ ಕಾದಿದ್ದು ಗುಂಡು ಹಾರಿಸುವ ಮೂರ್ಖತನವಂತೂ ಖಂಡಿತ ಹಂತಕನಿಗಿರುವುದಿಲ್ಲ. ಸಾವಿರಾರು ಜನ ಸೇರಿದಾಗಲೇ ಈ ಥರದ ನಾಟಕ ನಡೆದಿದೆಯೆಂದರೆ ಅದು ಪ್ರಚಾರದ ಉದ್ದೇಶದ, ಪೊಲೀಸರನ್ನು ದಿಕ್ಕುತಪ್ಪಿಸುವ ಮತ್ತು ನೆರೆದ ಭಕ್ತಾದಿಗಳನ್ನು ಯಾಮಾರಿಸುವ ಕಿತಾಪತಿಯಲ್ಲದೇ ಮತ್ತೇನಲ್ಲ.

ಒಂದೋ ರವಿಶಂಕರನೇ ಇಂಥದ್ದೊಂದು ನಾಟಕದ ಸೂತ್ರಧಾರನಾಗಿರಬೇಕು. ಅಥವಾ ಆತನ ಶಿಷ್ಯರ ಕಚ್ಚಾಟಕ್ಕೆ ಈ ಥರದ ಬಣ್ಣ ಕಟ್ಟಿರಬೇಕು. ಇವೆರಡೂ ಇಲ್ಲದ ಪಕ್ಷದಲ್ಲಿ ಇದು ರಿಯಲ್ ಎಸ್ಟೇಟ್ ಸಂಬಂಧಿ ಅಡ್ಡಪರಿಣಾಮವಾಗಿರಬೇಕು.

ಘಟನೆಯ ತಲೆಬುಡ ಮತ್ತು ರವಿಶಂಕರ್‌ನ ವಿಚಿತ್ರ ವರ್ತನೆ ನೋಡಿದರೆ ಮೊದಲನೇ ಸಾಧ್ಯತೆಯೇ ಹೆಚ್ಚಿರುವಂತಿದೆ. ಅದು ರವಿಶಂಕರ್‌ನ ನೋಬೆಲ್ ಹುಚ್ಚು. ಟಿಬೆಟಿಯನ್ ಗುರು ದಲಾಯಿಲಾಮಗೇ ನೋಬೆಲ್ ಶಾಂತಿ ಪಾರಿತೋಷಕ ಸಿಕ್ಕ ಮೇಲೆ ತನಗದು ದಕ್ಕುವುದು ಯಾವ ಕಷ್ಟ ಎಂಬುದು ರವಿಶಂಕರನ ಭ್ರಮೆ.

ಇಂಥ ದುರಾಸೆಗೆ ಬಿದ್ದೇ ಕಳೆದ ಕೆಲ ವರ್ಷಗಳಿಂದ ರವಿಶಂಕರ್ ದಿನಕ್ಕೊಂದು ದೊಂಬರಾಟ ನಡೆಸುತ್ತಲೇ ಬಂದ. ಮೊದಲು ಇರಾಕ್‌ಗೆ ಭೇಟಿ ಕೊಟ್ಟ. ಅಲ್ಲಿನ ಬಂದುಕೋರರ ಮನಪರಿವರ್ತಿಸುತ್ತೇನೆ ಎಂದು ಏನೇನೋ ಗಿಮ್ಮಿಕ್ ಮಾಡಿ ಬಂದ. ನಂತರ ಇರಾನ್‌ನಲ್ಲಿ ಆರ್ಟ್ ಆಫ್ ಲೀವಿಂಗ್‌ನ ಶಾಖೆ ತೆರೆದ. ಒಂದಷ್ಟು ಮಂದಿ ಇರಾನಿಯನ್ನರ ಜೊತೆ ನಿಂತು ಫೋಟೋ ಕೂಡ ತೆಗೆಸಿಕೊಂಡ. ತದನಂತರ ಶ್ರೀಲಂಕಾಗೆ ಕಾಲಿಟ್ಟ. ಅಲ್ಲಿ ಎಲ್ಟಿಟಿಇ ಬಂಡುಕೋರರ ಮನವೊಲಿಸುತ್ತೇನೆಂದು ರೈಲುಬಿಟ್ಟ. ಇದಾಗಿ ಕೆಲದಿನಕ್ಕೆ ಕಾಶ್ಮೀರಿ ಉಗ್ರರನ್ನು ಪರಿವರ್ತಿಸುತ್ತೇನೆಂದು ಕಾಶ್ಮೀರದಲ್ಲಿ ಷೋ ಕೊಟ್ಟ. ಅಫಘಾನಿಸ್ತಾನಕ್ಕೂ ಹೋಗಿಬಂದ. ತಾಲಿಬಾನ್ ಬಂಡುಕೋರರೆಲ್ಲ ತನ್ನ ಮಾತು ಕೇಳಿ ಆಯುಧ ತ್ಯಜಿಸುತ್ತಾರೆಂದು ಬಂಡಲ್ ಬಿಟ್ಟ. ಪಾಕಿಸ್ತಾನದ ಉಗ್ರರನ್ನೂ ಸರಿಪಡಿಸುತ್ತೇನೆಂದು ಮತ್ತೊಂದು ಐಲಾಟ ಮಾಡಿಬಂದ. ಕೊನೆಗೆ ನಕ್ಸಲೀಯರು ಕೂಡ ತನ್ನ ಮಾತು ಕೇಳಿ ಗಾಂಧಿಗಿರಿಯ ಹಾದಿ ಹಿಡಿದಿದ್ದಾರೆನ್ನುವಂತೆ ಇನ್ನೆಂಥದೋ ಸರ್ಕಸ್ ನಡೆಸಿ ಬಂದ.

ನೋಬೆಲ್‌ಗಾಗಿ ಗಿಮ್ಮಿಕ್

ಯಾರೋ ಒಂದಷ್ಟು ಮಂದಿ ಮಾಜಿ ನಕ್ಸಲೀಯರನ್ನು ಕಂಡು ಮಾತಾಡಿದ ಮಾತ್ರಕ್ಕೇ ಅದು ನಕ್ಸಲೀಯರ ಜೊತೆಗಿನ ಸಂಧಾನವಾಗುತ್ತಾ? ಅಷ್ಟಕ್ಕೂ ನಕ್ಸಲ್ ಸಮಸ್ಯೆಗೆ ಪರಿಹಾರ ಕಲ್ಪಿಸುವಂತೆ ರವಿಶಂಕರ್‌ನನ್ನು ಗೋಗರೆದವರು ಯಾರು? ರವಿಶಂಕರ್ ಹೇಳಿದ ಎಂದಾಕ್ಷಣ ನಕ್ಸಲೀಯರು ಹೋರಾಟ ನಿಲ್ಲಿಸಿಬಿಡುತ್ತಾರಾ?

ರವಿಶಂಕರ್‌ಗೆ ಸಮಸ್ಯೆಯಾಗಲಿ, ಅದನ್ನು ಪರಿಹರಿಸುವುದಾಗಲಿ ಮುಖ್ಯವಲ್ಲ, ಬದಲಿಗೆ ಅದನ್ನೇ ಮುಂದಿಟ್ಟುಕೊಂಡು ಪ್ರಚಾರಗಿಟ್ಟಿಸಬೇಕು. ಆತ ಶ್ರೀಲಂಕಾಕ್ಕೆ ಹೋಗಿದ್ದ ಸುದ್ದಿಯಾಯಿತೇ ಹೊರತು ಅಲ್ಲಿ ಏನು ಮಾಡಿದ? ಯಾರನ್ನು ಕಂಡು ಏನು ಮನವೊಲಿಸಿದ? ಇತ್ಯಾದಿ ವಿವರಣೆಗಳಿಲ್ಲ. ಕಾಶ್ಮೀರಕ್ಕೆ ಹೋಗಿ ಬಂದಾಕ್ಷಣ ಅಲ್ಲಿನ ಉಗ್ರರನ್ನು ಸರಿದಾರಿಗೆ ತಂದಂತಲ್ಲ. ಅಫಘಾನಿಸ್ತಾನ ಸುತ್ತಿ ಬಂದಾಕ್ಷಣ ತಾಲಿಬಾನ್ ಉಗ್ರರು ಬಂದು ರವಿಶಂಕರನ ಮುಂದೆ ಕೈಕಟ್ಟಿ ನಿಲ್ಲುವುದಿಲ್ಲ. ಇರಾಕ್ ಸುತ್ತಿ ಇರಾನ್‌ಗೆ ಪ್ರದಕ್ಷಿಣೆ ಹಾಕಬಹುದೇ ಹೊರತು ಅದರಿಂದ ನಯಾಪೈಸೆಯ ಪ್ರಯೋಜನವಿಲ್ಲ. ಇಂಥ ಸಮಸ್ಯೆಗಳ ಬಗ್ಗೆ ಸಮಗ್ರ ಪರಿಜ್ಞಾನ ಕೂಡ ರವಿಶಂಕರ್‌ಗಿಲ್ಲ. ಅವುಗಳ ಪರಿಹಾರದತ್ತ ಪ್ರಾಮಾಣಿಕ ಕಳಕಳಿಯೂ ಇಲ್ಲ. ಇದ್ದಿದ್ದರೆ ತನ್ನ ಆರ್ಟ್ ಆಫ್ ಲೀವಿಂಗ್ ಎಂಬ ಕೋರ್ಸಿನ ಅಸಂಖ್ಯಾತ ಅಂಗಡಿಗಳನ್ನು ತೆರೆದು ಚಿತ್ರವಿಚಿತ್ರ ಕೋರ್ಸ್‌ಗಳನ್ನು ಮಾಡಿ ಪ್ರತಿ ಕೋರ್ಸಿಗೂ ಸಾವಿರಾರು ರೂಪಾಯಿಗಳನ್ನು ಸುಲಿಯುತ್ತಿರಲಿಲ್ಲ. ಅಧ್ಯಾತ್ಮ ಮತ್ತು ಯೋಗ ಎಂಬುದು ರವಿಶಂಕರ್ ಪಾಲಿಗೆ ದುಡ್ಡು ದೋಚುವ ಸಾಧನ ಮಾತ್ರ.

ಬೀದಿಪಾಲಾದ ವಡೇರಹಳ್ಳಿಯ ದಲಿತರು
ನೆಲಕೊಟ್ಟವನೇ ಮೊದಲ ಶತ್ರು

'ನನಗೆ ಯಾರೂ ಶತ್ರುಗಳಿಲ್ಲ, ನನ್ನಿಂದ ಯಾರಿಗೂ ಅನ್ಯಾಯವಾಗಿಲ್ಲ' ಎಂದು ಸತ್ಯದ ನೆತ್ತಿಗೆ ಬಡಿದಂತೆ ಡೈಲಾಗ್ ಕೊಚ್ಚುವ ರವಿಶಂಕರ್‌ಗೆ ...ಲೀಯರಾಗಲಿ, ಎಲ್ಟಿಟೀಇಗಳಾಗಲಿ, ಕಾಶ್ಮೀರಿ ಉಗ್ರರಾಗಲಿ ಶತ್ರುಗಳಲ್ಲ ... ಇಂಥ ಶಕ್ತಿಗಳು ತಲೆ ಕೆಡಿಸಿಕೊಳ್ಳುವಷ್ಟು ಜನಪ್ರಿಯತೆ, ವೈಚಾರಿಕತೆ, ...ತನ, ಪ್ರಾಮಾಣಿಕತೆ ಮತ್ತು ಪ್ರಖರತೆಗಳ್ಯಾವುದಾದರೂ ಈತನಲ್ಲಿದ್ದರೆ ...ನೆ?

ರವಿಶಂಕರ್ ಪಾಲಿಗೆ ಶತ್ರುಗಳು, ಆಗದವರು ಅಂತಿದ್ದರೆ ಅದು ಈತನಿಂದ ...ದಿಪಾಲಾದ ದಲಿತರು ಮತ್ತು ರೈತರು ಮಾತ್ರ!

ಕನಕಪುರ ರಸ್ತೆಯ ಉರಿಪಾಳ್ಯದಲ್ಲಿ ನಾನೂರು ಎಕರೆಗೂ ಅಧಿಕ ವಿಸ್ತೀರ್ಣದಲ್ಲಿ ...ಎತ್ತಿನಿಂತ ಆರ್ಟ್ ಆಫ್ ಲೀವಿಂಗ್ ಸಾಮ್ರಾಜ್ಯಕ್ಕಾಗಿ ಈ ಸುತ್ತಮುತ್ತಲ ...ಮಾಳ, ಗುಂಡು ತೋಪು, ಕೆರೆ, ಕಾಲುವೆಗಳನ್ನೆಲ್ಲ ರವಿಶಂಕರ್ ನುಂಗಿದ್ದಾನೆ. ...ಕ್ಕೊಂದು ಭಕ್ತರ ಸೋಗಿನ ರೌಡಿಗಳನ್ನು ಬಳಸಿದ್ದಾನೆ. ಈತನ ಭೂದಾಹಕ್ಕೆ ...ಯಾದ ರೈತರ ಕಣ್ಣೀರ ಕತೆಗಳು ಒಂದೆಡೆಯಾದರೆ ಇವತ್ತಿಗೂ ನ್ಯಾಯಕ್ಕಾಗಿ ...ರ್ಟು, ಕಚೇರಿ ಅಲೆದು ಹೈರಾಣಾದ ದಲಿತರದ್ದೇ ಮತ್ತೊಂದು ಕಥೆ.

ಈ ಪೈಕಿ ಕೆಂಗೇರಿ ಹೋಬಳಿಯ ವಡೇರಹಳ್ಳಿಯ ದಲಿತರ ಪಾಲಿಗೆ ...ಶಂಕರ್ ನಿಜಕ್ಕೂ ರಕ್ಕಸನ ಅವತಾರ. ಕೆಂಗೇರಿ ಹೋಬಳಿ ಬಿ.ಎಂ. ...ವಲು ಸರ್ವೆ ನಂಬರ್ 137 ರಲ್ಲಿದ್ದ 66 ಎಕರೆ ದಲಿತರ ಭೂಮಿಯನ್ನು ...ಶಂಕರ್ ಕಬಳಿಸಿದ ರೀತಿಗೆ ಬೆಂಗಳೂರಿನ ರೌಡಿಗಳೇ ನಾಚಬೇಕು. ಅದು ...ಡೇರಹಳ್ಳಿಯ ಹನ್ನೊಂದು ಮಂದಿ ದಲಿತರಿಗೆ ...ದಿತ್ತು. ವೆಂಕಟಾಬೋವಿ, ಚೆನ್ನಲ್ಲಾ ಬೋವಿ, ...ಮ್ಮಾಬೋವಿ, ಗುರುವಾ ಬೋವಿ, ಕುಳ್ಳಾ ...ಬೋವಿ, ಮುನಿಸ್ವಾಮಿ, ಕಬ್ಬಾಳ ಬೋವಿ, ಕುಂಟಾ ...ಬೋವಿ, ಈರಾಬೋವಿ, ಹವಳಾ ಬೋವಿ; ಇತ್ಯಾದಿ ...ನ್ನೊಂದು ಮಂದಿ ದಲಿತರಿಗೆ ಮೈಸೂರು ...ಮಹಾರಾಜರ ಕಾಲದಲ್ಲಿ ತಲಾ ಆರು ಎಕರೆಯಂತೆ ...ಮಂಜೂರಾಗಿತ್ತು.



1953 ರಲ್ಲಿ ಕಾಯಂ ಮಂಜೂರಾತಿಗೀಡಾದ ... ಭೂಮಿ ವರ್ಷಾಂತರಗಳಿಂದ ...ಳುಬದ್ದಿದ್ದರಿಂದ 1995 ರ ಹೊತ್ತಿಗೆ ಲಿಕ್ಕರ್ ...ದೊರೆ ಹರಿ ಖೋಡೆ ಇದಕ್ಕೆ ಕಣ್ಣು ಹಾಕಿ ...ಇಪ್ಪತ್ತೈದು ಹತ್ತು ಎಕರೆಗಳಷ್ಟನ್ನು ...ಕ್ರಮಿಸಿಕೊಂಡಿದ್ದ. ಇದನ್ನೇ ಕಾದಿದ್ದು ಕುಪ್ಪರಾಜು ಎಂಬ ಆಂಧ್ರ ಮೂಲದ ...ದೀಮನೊಬ್ಬ ಮತ್ತೆ ಹತ್ತಕರೆಯನ್ನು ಕಬಳಿಸಿದ. ಈ ಕುಪ್ಪರಾಜು ಹೋಟೆಲ್ ...ಯಾದ ಧಣಿ ಚಿನ್ನಸ್ವಾಮಿ ರಾಜು ಎಂಬಾತನ ಅಣ್ಣ. ಉಳಿದದ್ದು 36 ...ಕರೆಯಾದರೂ ಹರಿ ಖೋಡೆ ಮತ್ತು ಕುಪ್ಪ ರಾಜು ಸೇರಿದಂತೆ ವಡೇರ ...ಳ್ಳಿಯ ದಲಿತರೆಲ್ಲರನ್ನೂ ಸೇರಿಸಿಕೊಂಡೇ ಜಮೀನಿನಿಂದ ಹೊರದಬ್ಬಲು ...ಶಂಕರ್ ರೆಡಿಯಾದ.

ಈ ಹೊತ್ತಿಗೆ ಹನ್ನೊಂದು ಮಂದಿ ಬೋವಿಗಳ ವಾರಸುದಾರರ ಸಂಖ್ಯೆ ...ಐವತ್ತಾಗಿತ್ತು. 2008ರ ಹೊತ್ತಿಗೆ ಮೊದಲು 28 ಎಕರೆಗೆ ಕೈಯಿಟ್ಟ ...ಶಂಕರ್ ಅಡ್ವಾನ್ಸಾಗಿ ಎಕರೆಗೆ 25 ಲಕ್ಷ ಕೊಡ್ತೀನಿ, ಮಿಕ್ಕದ್ದನ್ನು ಆಮೇಲೆ ...ಮಾತಾಡ್ತೀನಿ ಎಂದು ದಲಿತರನ್ನು ನಂಬಿಸಿದ್ದ. ಏನೇ ಆದರೂ ಸ್ವಾಮೀಜಿ ...ನೆ? ಸಿಕ್ಕಾಪಟ್ಟೆ ಫಾರಿನ್ ಫಂಡ್ ಬರುತ್ತಿದೆಯಾದ್ದರಿಂದ ಮುಂದೆ ತಾವು ...ಳಿದಷ್ಟು ಬೆಲೆಗೆ ಖಂಡಿತ ಜಮೀನು ಕೊಳ್ಳುತ್ತಾನೆಂಬ ನಂಬಿಕೆ ದಲಿತರಿಗಿತ್ತು.

ರವಿಶಂಕರ್ 25 ಲಕ್ಷ ಅಡ್ವಾನ್ಸ್ ಕೊಟ್ಟಾಗಲೇ ವಡೇರಹಳ್ಳಿಯ ಭೂಮಿ ...ಬೆಲೆ ಎಕರೆಗೆ 65 ಲಕ್ಷದಷ್ಟಿತ್ತು. ಹೆಚ್ಚಲ್ಲದಿದ್ದರೂ ಕನಿಷ್ಠ ಮಾರುಕಟ್ಟೆ ...ಬೆಲೆಯಾದರೂ ಸಿಕ್ಕೇ ಸಿಗುತ್ತದೆ ಎಂದು ಭರವಸೆಯಿಟ್ಟು ಒಪ್ಪಂದ ಪತ್ರ ...ಬರೆದುಕೊಟ್ಟ ದಲಿತರಿಗೆ ರವಿಶಂಕರನ ನಿಜ ಬಣ್ಣ ಗೊತ್ತಾಗುವ ಹೊತ್ತಿಗೆ ...ಮಿಂಚಿತ್ತು. ಬರುಬರುತ್ತ ನಾನು ಕೊಡೋದೇ ಇಷ್ಟು. 25 ಲಕ್ಷದ ...ಮೇಲೆ ನಯಾಪೈಸೆ ಕೊಡಲ್ಲ. ನನ್ನ ಹೊರತಾಗಿ ಬೇರೆ ಯಾರಿಗೂ ನೀವು ...ಮಾರುವಂತಿಲ್ಲ. ಅಷ್ಟಕ್ಕೂ ನಾನು ನಿಮಗೆ ಶೌಚಾಲಯ ಕಟ್ಟಿಸಿ ಕೊಡ್ತೀನಿ. ...ಮ್ಮ ಊರನ್ನು ನನ್ನ ದೈವೀಶಕ್ತಿಯಿಂದ ಉದ್ಧಾರ ಮಾಡ್ತೀನಿ. ದೈವೇಚ್ಛೆ ...ರಿ ನೀವೇನಾದ್ರೂ ಜಮೀನು ಬಿಟ್ಟುಕೊಡದೇ ಹೋದ್ರೆ ನಿಮ್ಮನ್ನು ...ರ್ವನಾಶ ಮಾಡೋ ಶಕ್ತಿಯನ್ನೂ ಆ ದೇವರೇ ನನಗೆ ಕರುಣಿಸುತ್ತಾನೆ, ...ನ್ನಾಯ್ತು? ಎಂದು ರವಿಶಂಕರ್ ಹೂಂಕರಿಸಿಬಿಟ್ಟ.

ರೋಸತ್ತ ವಡೇರಹಳ್ಳಿಯ ದಲಿತರೆಲ್ಲ ಗುರೂಜಿಯ ವಿರುದ್ಧ ತಿರುಗಿಬಿದ್ದಿದ್ದಾರೆ. ಮಾರ್ಕೆಟ್ ರೇಟು ಕೊಡದೇ ಹೇಗೆ ಜಮೀನಿಗೆ ಕಾಲಿಡುತ್ತಾನೋ ನೋಡೇ ಬಿಡ್ತೀವಿ ಎಂದು ಪ್ರತಿಭಟನೆಗಿಳಿದಿದ್ದಾರೆ. ಆದರೆ ಆ ಹೊತ್ತಿಗಾಗಲೇ ಬಿಜೆಪಿ ಅಧಿಕಾರಕ್ಕೆ ಬಂದಾಗಿತ್ತು, ಇದು ನನ್ನ ಸರ್ಕಾರ ಗೊತ್ತಾ? ಎಂದಿದ್ದೇ ರವಿಶಂಕರ್ ಆರೆಸ್ಸೆಸ್ ವರಿಷ್ಠರಿಗೆಲ್ಲ ಫೋನಾಯಿಸಿ ಗೃಹ ಮಂತ್ರಿ ಆಚಾರ್ಯರ ಮೂಲಕ ಪೊಲೀಸ್ ಅಧಿಕಾರಿಗಳನ್ನು ಸರಿಮಾಡಿಕೊಂಡ.

ಅದು 2009ರ ವಿಜಯದಶಮಿಯ ದಿನ. ನೂರಕ್ಕೂ ಅಧಿಕ ರೌಡಿಗಳನ್ನು ಕಲೆಹಾಕಿದ ರವಿಶಂಕರ್ ಅವರೆಲ್ಲರಿಗೂ ಆಶ್ರಮದ ಭಕ್ತಾದಿಗಳಂತೆ ಬಿಳಿವಸ್ತ್ರ ತೊಡಿಸಿದ್ದ. ದೊಣ್ಣೆ ಮಚ್ಚು ರಾಡು ಹಿಡಿದ ಆರ್ಟ್ ಆಫ್ ಲಿವಿಂಗ್‌ನ ಗೂಂಡಾಗಳು ಏಕಾಏಕಿ ದಲಿತರ ಜಮೀನಿಗೆ ನುಗ್ಗಿದ್ದಾರೆ. ಇದನ್ನು ತಡೆದ ನಂಜಪ್ಪ ಎಂಬ ದಲಿತನನ್ನು ನೆಲಕ್ಕೆ ಹಾಕಿ ತುಳಿದಿದ್ದಾರೆ. ನಂಜಪ್ಪನಿಗೆ ಒದೆ ಬಿದ್ದಿದ್ದು ಗೊತ್ತಾಗಿ ವಡೇರಹಳ್ಳಿಯ ಗ್ರಾಮಸ್ಥರೆಲ್ಲ ರಕ್ಷಣೆಗೆ ಬಂದರೆ ರವಿಶಂಕರನೇ ನಿಂತು ಗ್ರಾಮಸ್ಥರನ್ನು ಅಟ್ಟಾಡಿಸಿ ಹೊಡೆಸಿದ್ದಾನೆ.

ಪೆಟ್ಟು ತಿಂದ ದಲಿತರು ರಕ್ತ ಸುರಿಸಿಕೊಂಡು ತಲಘಟ್ಟಪುರ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟರೆ ಮೊದಲೇ ಅಣಿಯಾಗಿದ್ದ ಇನ್ಸ್‌ಪೆಕ್ಟರ್ ಮಹದೇವಯ್ಯ ದಲಿತರನ್ನೇ ಹಿಡಿದು ಬಡಿದ. ನಿಮ್ಮನ್ನೆಲ್ಲಾ ಗಡೀಪಾರು ಮಾಡ್ತೀನಿ ಎಂದು ಧಮಕಿ ಹಾಕಿದ.

ಗುರೂಜಿಯ ವಿರುದ್ಧವಾಗಲಿ ಆತನ ರೌಡಿ ಗ್ಯಾಂಗ್ ವಿರುದ್ಧವಾಗಲಿ ಯಕಶ್ಚಿತ್ ದೂರು ದಾಖಲಿಸುವುದಕ್ಕೂ ವಡೇರಹಳ್ಳಿಯ ದಲಿತರಿಂದ ಸಾಧ್ಯವಾಗಲಿಲ್ಲ. ಬಿಜೆಪಿ ಸರ್ಕಾರ ಇರೋತನಕ ನನ್ನನ್ನು ನೀವೇನೂ ಮಾಡಲಿಕ್ಕಾಗೊಲ್ಲ... ' ಎಂದು ರವಿಶಂಕರ್ ಹೀಯಾಳಿಸಿದ್ದ.


ಅಂತಿಮವಾಗಿ ಒಂದಿಬ್ಬರು ದಲಿತ ಮುಖಂಡರ ಮಧ್ಯಸ್ಥಿಕೆಯಿಂದಾಗಿ ಎಕರೆಗೆ 25 ಲಕ್ಷದ ಮೇಲೆ ಐದು ಲಕ್ಷವನ್ನಷ್ಟೇ ಹೆಚ್ಚಿಗೆ ಕೊಡಲು ರವಿಶಂಕರ್ ಒಪ್ಪಿಕೊಂಡನಾದರೂ ಎಕರೆಗೆ ಎಪ್ಪತ್ತು ಲಕ್ಷ ಬೆಲೆಬಾಳುವ ಜಮೀನು ಬಿಟ್ಟುಕೊಡಲು ದಲಿತರು ಒಪ್ಪಲಿಲ್ಲ. ಪ್ರತಿನಿತ್ಯ ವಡೇರಹಳ್ಳಿಯ ದಲಿತರಿಗೂ ರವಿಶಂಕರ್ ಚೇಲಾಗಳಿಗೂ ಘರ್ಷಣೆಗಳಾಗುತ್ತಲೇ ಇವೆ. ಕೆಲವೊಮ್ಮೆ ದಲಿತರು ಗುಂಪು ಕಟ್ಟಿಕೊಂಡು ಆಶ್ರಮಕ್ಕೆ ನುಗ್ಗಿ ಬಾಕಿ ಹಣಕ್ಕಾಗಿ ಒತ್ತಾಯಿಸಿದರೆ ಕೆಲವೊಮ್ಮೆ ರವಿಶಂಕರ್ ಬಂಟರು ಜಮೀನಿಗೆ ನುಗ್ಗಿ ದಾಂಧಲೆಯೆಬ್ಬಿಸುತ್ತಿದ್ದಾರೆ.

ರವಿಶಂಕರ್ ತನಗೆ 'ಝಡ್' ಸೆಕ್ಯೂರಿಟಿ ಬೇಕೆಂದು ಪದೇಪದೇ ಸರ್ಕಾರಕ್ಕೆ ಮನವಿ ಕೊಡುತ್ತಿರುವುದರ ಅಸಲೀ ಮರ್ಮವಿದು. ಕೇವಲ ವಡೇರ ಹಳ್ಳಿಯ ದಲಿತರಿಗಷ್ಟೇ ಅಲ್ಲ, ಆಶ್ರಮದ ಎದುರಿಗೇ ಇರುವ ಉರಿಪಾಳ್ಯದ ದಲಿತರಿಗೂ ರವಿಶಂಕರ್‌ನ ಬಂಟರಿಗೂ ಪದೇ ಪದೇ ಹೊಡೆದಾಟಗಳಾಗಿವೆ. ಅದೂ ಎಂಥಾ ಅಮಾನುಷ ಕಾರಣಕ್ಕೆಂದರೆ: ತನ್ನ ಹೈಟೆಕ್ ಆಶ್ರಮದ ಎದುರು ದಲಿತರು ಗುಡಿಸಲಲ್ಲಿ ವಾಸಿಸುವುದೇ ಅಸಹ್ಯವಂತೆ!

ಆಶ್ರಮದ ಎದುರು ದಾರಿದ್ರ್ಯಕ್ಕೆ ಕನ್ನಡಿ ಹಿಡಿದಂತೆ ದಲಿತರ ಕಾಲೋನಿಯನ್ನು ಎತ್ತಂಗಡಿ ಮಾಡುವುದು ರವಿಶಂಕರ್‌ನ ಮತ್ತೊಂದು ಹುನ್ನಾರ. ದೇಶವಿದೇಶಗಳಿಂದ ಬರುವ ಭಕ್ತಾದಿಗಳಿಗೆ ಆಶ್ರಮದೆದುರೇ ದಲಿತರ ಜೋಪಡಿಗಳು ಕಂಡರೆ ತನಗದು ಅವಮಾನವೆಂದೇ ಗುರೂಜಿ ಭಾವಿಸುತ್ತಾನಂತೆ. ದಲಿತರ ಕಾಲೋನಿಯನ್ನೇ ಎತ್ತಿಸಲು ಪಂಚಾಯ್ತಿಯವರನ್ನೂ ರವಿಶಂಕರ್ ಛೂಬಿಟ್ಟಿದ್ದಾನೆ. ಇಷ್ಟಲ್ಲದೇ ಪಕ್ಕದ ಓಬಿಚೂಡನಹಳ್ಳಿ, ಸಾಲಹುಣಸೆ, ಅಗರ ಮತು ಉತ್ತರಿ ಗ್ರಾಮಗಳ ಬಡ ದಲಿತರ ಬಹುತೇಕ ಜಮೀನನ್ನು ರವಿಶಂಕರ್ ಕಬಳಿಸಿದ್ದಾನೆ. ವಿದೇಶಿ ಭಕ್ತರ ಪಾಲಿಗೆ ರವಿಶಂಕರ್ ಸ್ವಾಮೀಜಿಯಾದರೆ ಇಲ್ಲಿನ ದಲಿತರ ಪಾಲಿಗೆ ಅಕ್ಷರಶಃ ಕಂಟಕ. ಸಾಲದ್ದಕ್ಕೆ ಲಿಕ್ಕರ್ ದೊರೆ ಹರಿ ಖೋಡೆ ಮತ್ತು ಖದೀಮ ಬಿಲ್ಡರ್ ಕುಪ್ಪ ರಾಜುಗೂ ರವಿಶಂಕರ್‌ಗೂ ಭೂ ಸಂಬಂಧಿ ದುಷ್ಮನಿಯಿದೆ.

ರೊಚ್ಚಿಗೆದ್ದ ದಲಿತರೋ ಅಥವಾ ಹರಿ ಖೋಡೆ, ಕುಪ್ಪ ರಾಜು ಕಡೆಯವರೋ ಇವತ್ತಲ್ಲ ನಾಳೆ ತನ್ನನ್ನು ಮುಗಿಸಬಹುದೆಂಬ ಪಾಪಪ್ರಜ್ಞೆ ರವಿಶಂಕರ್‌ನನ್ನು ಕಾಡುತ್ತಿದೆ. ಅದಕ್ಕೇ 'ಝೀಡ್' ಸೆಕ್ಯೂರಿಟಿ ಬೇಕಾಗಿದೆ. ಯಾರೋ ಕೊಲೆಗೆ ಕೈ ಹಾಕುವ ಮುನ್ನ ತಾನೇ ಅಂಥದ್ದೊಂದು ನಾಟಕವಾಡಿಬಿಟ್ಟರೆ?

ಸರ್ಕಾರವೇ ಸೆಕ್ಯೂರಿಟಿ ಕೊಡುವಾಗ ಕಪಟ ನಾಟಕವಾಡಲು ಏನು ಕಷ್ಟ?



ಸೋಗಲಾಡಿ ಷಡ್ಯಂತ್ರ?

ಆತನಿಗೀಗ ದುಡ್ಡಿನ ಬರವಿಲ್ಲ, ಬೇಕಿರುವುದು ಖ್ಯಾತಿ ಮತ್ತು ಪುರಸ್ಕಾರ. ದಲಾಯಿ ಲಾಮ, ಮದರ್ ಥೆರೇಸಾರ ಹಾಗೆ ತಾನೂ ನೋಬೆಲ್ ಗಿಟ್ಟಿಸಬೇಕೆಂಬ ಹುಚ್ಚು ತಲೆಗೇರಿದೆ. ನಕ್ಸಲ್, ಎಲ್ಟಿಟೀಇ, ತಾಲಿಬಾನ್, ಕಾಶ್ಮೀರ, ಇರಾಕ್; ಇತ್ಯಾದಿ ಪ್ರತಿಯೊಂದು ಮಿಲಿಟೆಂಟ್ ಸಮಸ್ಯೆಗೂ ಕೈಹಾಕಿ ಏನೂ ಬರಕತ್ತಾಗದೇ ನಗೆಪಾಟಲಿಗೀಡಾದ ಪೇಚಾಟವನ್ನು ಹೇಗಾದರೂ ಮಾಡಿ ತಪ್ಪಿಸಿಕೊಳ್ಳಬೇಕಲ್ಲ; ಅದಕ್ಕೆ ಶೂಟೌಟ್ ನಾಟಕ ಹೆಣೆದಿದ್ದಾನೆ ಅಥವಾ ಕ್ಷುಲ್ಲಕ ಘಟನೆಯನ್ನೇ ಬಂಡವಾಳ ಮಾಡಿಕೊಳ್ಳುತ್ತಿದ್ದಾನೆ.

ತನ್ನನ್ನು ಕೊಲ್ಲಲು ಯತ್ನಿಸಿದವರನ್ನೇ ಕ್ಷಮಿಸಿದ್ದೇನೆ ಎನ್ನುವುದು, ಅಂಥವರನ್ನು ಸತ್ಸಂಗದಿಂದ ಪರಿವರ್ತಿಸುತ್ತೇನೆಂದು ರೈಲು ಬಿಡುವುದು ರವಿಶಂಕರ್‌ನ ವಂಚಕ ಗಿಮ್ಮಿಕ್ಕುಗಳ ಪುನರಾವರ್ತನೆಯಷ್ಟೆ. ಗುಂಡು ಹಾರಿಸಿದಾತ ಶಿಷ್ಯ ವಿನಯ್‌ನನ್ನೇ ಗುರಿಯಿಟ್ಟು ಗುಂಡು ಹೊಡೆದನೆ? ಅದೂ ಪ್ಯಾಂಟ್‌ಗೆ ಸವರಿಕೊಂಡು ಹೋಗುವಂತೆ ಪ್ರಾಣಾಪಾಯ ಸಂಭವಿಸದಂತೆ ಎಚ್ಚರ ವಹಿಸಿ ಫೈರ್ ಮಾಡುತ್ತಾನಾ? ಪಟಾಕಿ ಸದ್ದು ಕೇಳಿದ್ದು ಖಾತರಿ ಮಾಡಿಕೊಂಡೇ ರವಿಶಂಕರ್ ಜಾಗ ಖಾಲಿ ಮಾಡುತ್ತಾನಾ? ನಿಜಕ್ಕೂ ಪ್ರಾಣಾಪಾಯವಿದ್ದಿದ್ದರೆ ಹೋದ ಕೆಲವೇ ನಿಮಿಷಕ್ಕೆ ಪೊಲೀಸರಿಲ್ಲದೇ ಏಕೆ ವಾಪಸ್ಸು ಬರುತ್ತಿದ್ದ? ಎಷ್ಟೋ ಸಮಯದ ನಂತರ ಮತ್ತೆ ಏಕೆ ಪೊಲೀಸರಿಗೆ ಸುದ್ದಿ ಮುಟ್ಟಿಸುತ್ತಿದ್ದ? ತಾನೇ ಹಾಕಿದ ಬಲೆಗೆ ತಾನೇ ಎಲ್ಲಿ ಸಿಕ್ಕಿಬೀಳುತ್ತೇನೋ ಎಂಬ ಭೀತಿಯಾ?

ಇಂಥಾ ಕ್ಷುಲ್ಲಕ ಗಿಮ್ಮಿಕ್ ಮಾಡಿದಾಕ್ಷಣ ನೋಬೆಲ್ ದಕ್ಕುತ್ತದೆ ಎಂದು ಹೇಳಿದ ಮುಠ್ಠಾಳ ಯಾರು?

ಆಶ್ರಮದಲ್ಲಿ ಕ್ರಿಮಿನಲ್‌ಗಳು ಮತ್ತು ಡಾಲರ್ ದುಡ್ಡಿನ ಕಚ್ಚಾಟ

ಆರ್ಟ್ ಆಫ್ ಲೀವಿಂಗ್ ಕಲಿತು ಯಾರೇನಾದರೋ ಗೊತ್ತಿಲ್ಲ, ರವಿಶಂಕರ್ ಶಿಷ್ಯರ ಪೈಕಿ ಯಾರೊಬ್ಬರಲ್ಲೂ ಮನುಷ್ಯತ್ವದ ಲಕ್ಷಣಗಳಂತೂ ಖಂಡಿತ ಇಲ್ಲ. ಸದ್ಯ ಕನಕಪುರ ರಸ್ತೆಯ ರವಿಶಂಕರ್‌ನ ಅಡ್ಡೆಯಲ್ಲಿ ಎತ್ತಿಂದೆತ್ತ ಸುತ್ತಾಡಿದರೂ ಕಣ್ಣಿಗೆ ರಾಚುವುದು ಕುರುಡು ಕಾಂಚಾಣದ ನರ್ತನ ಮಾತ್ರ!

ದೇಶದ ವಿವಿಧ ಆರ್ಟ್ ಆಫ್ ಲೀವಿಂಗ್ ಶಾಖೆಗಳಿಂದ ಶುಲ್ಕದ ರೂಪದಲ್ಲಿ ಜಮೆಯಾಗುವ ದುಡ್ಡು, ಪುಸ್ತಕ-ಸೀಡಿಗಳ ಮಾರಾಟದಿಂದ ಬರುವ ದುಡ್ಡು, ಅನಾಥಮಕ್ಕಳೆಂದು ಯಾರ್‍ಯಾರದೋ ಫೋಟೋ ಹಾಕಿ ವಿದೇಶಗಳಿಂದ ಗೆಬರುವ ದುಡ್ಡು, ಯೋಗ ತರಬೇತಿಯ ದುಡ್ಡು, ಚಂದಾ ಎತ್ತುವ ದುಡ್ಡು -ಹೀಗೆ ಎತ್ತುವಳಿಯಾದ ದುಡ್ಡನ್ನು ಹಂಚಿಕೊಳ್ಳುವುದಕ್ಕೆಂದೇ ಹುಟ್ಟಿಕೊಂಡ ಥರೇವಾರಿ ಗ್ಯಾಂಗುಗಳು ಸದ್ಯ ರವಿಶಂಕರ್ ಆಶ್ರಮವನ್ನು ರಣರಂಗವನ್ನಾಗಿ ಪರಿವರ್ತಿಸಿಬಿಟ್ಟಿವೆ.

ಇಲ್ಲಿ ಗುಜರಾತಿಗಳದ್ದೇ ಒಂದು ಗ್ಯಾಂಗಾದರೆ ಉತ್ತರ ಪ್ರದೇಶದವರದ್ದು ಮತ್ತೊಂದು ಗ್ಯಾಂಗು. ಕೇರಳ ಕುಟ್ಟಿಗಳೇ ಪ್ರತ್ಯೇಕ ತಂಡ ರಚಿಸಿಕೊಂಡಿದ್ದಾರೆ. ಅಂಡಮಾನ್‌ನಿಂದ ಬಂದ ಭಕ್ತಾದಿಗಳದ್ದು ಮಗದೊಂದು ಕೂಟ. ಈ ಪೈಕಿ ಅತ್ಯಂತ ನಟೋರಿಯಸ್ ಹಿನ್ನೆಲೆಯವನು ಮುಂಬಯಿಯ ಪ್ರಸನ್ನ. ಈತ ರವಿಶಂಕರ್‌ನ ಅಷ್ಟೂ ಪ್ರಕಟಣೆಗಳನ್ನು ನಿಭಾಯಿಸುತ್ತಾನೆ. ರವಿಶಂಕರ್‌ನ ಅಪ್ಪ ರತ್ನಂ ಎಂಬ ಚಪಲದ ಮುದುಕನಿಗೆ ಇಡೀ ಆಶ್ರಮವನ್ನು ತಮಿಳುಮಯ ಮಾಡಬೇಕೆಂಬ ದುರ್ಬುದ್ಧಿ. ರವಿಶಂಕರ್‌ನ ತಂಗಿ ಭಾನುಮತಿ ಮತ್ತು ಆಕೆಯ ಗಂಡ ನರಸಿಂಹನ್ ಕೂಡ ತಮಿಳೀಕರಣಕ್ಕೆ ಅಪ್ಪ ರತ್ನಂ ಜೊತೆ ಕೈಜೋಡಿಸುತ್ತಾರೆ.

ಇಡೀ ಆಶ್ರಮದ ಉತ್ಪತ್ತಿ, ಸಿಕ್ಕಾಪಟ್ಟೆ ಹರಿದುಬರುವ ಫಾರಿನ್ ಫಂಡ್, ರಿಯಲ್ ಎಸ್ಟೇಟ್ ದಂಧೆ ಇತ್ಯಾದಿಗಳನ್ನೆಲ್ಲ ತಂಗಿ 'ಭಾನು'ಮತಿಯೇ ನಿಯಂತ್ರಿಸುತ್ತಾಳೆ. ಹೇಳಿಕೇಳಿ ಸುಂದರಿ. ಗಂಡ ನರಸಿಂಹನ್‌ನ ಜೊತೆಗಿದ್ದೇ ಭಾನುಮತಿ ರವೀಂದ್ರ ಪ್ರಸಾದ್ ಎಂಬ ಆಂಧ್ರದವನ ಜೊತೆ ಸ್ನೇಹ ಕುದುರಿಸಿದಳು. ಅದೇನಾಯಿತೋ ಒಂದೇ ವರ್ಷಕ್ಕೆ ಆತನಿಗೆ ಕೈಕೊಟ್ಟು ವಿನೋದ್ ಮೆನನ್ ಎಂಬ ಮಲೆಯಾಳಿಯ ಜೊತೆ ಭಾನುಮತಿ ಓಡಾಟಕ್ಕಿಳಿದಳು. ಭಾನುಮತಿಗಾಗಿ ವಿನೋದ್ ಮೆನನ್ ಮತ್ತು ರವೀಂದ್ರ ಪ್ರಸಾದ್ ಆಶ್ರಮದ ಎದುರಲ್ಲೇ ಬಡಿದಾಡಿಕೊಂಡರು.


ಕ್ರಮೇಣ ವಿನೋದ್ ಮೆನನ್‌ನ ಗತಿಯೂ ಅದೇ ಆಯ್ತು. ತೀರ್ಥಹಳ್ಳಿ ಮೂಲದ ಕೆ.ಎಸ್. ನಾಗೇಶ್ ಎಂಬ ಸ್ಫುರದ್ರೂಪಿಯೊಬ್ಬ ಭಾನುಮತಿಯ ಹೃದಯಕ್ಕೆ ಲಗ್ಗೆ ಇಟ್ಟಿದ್ದ. ರೊಚ್ಚಿಗೆದ್ದ ವಿನೋದ್ ಮೆನನ್ ನಾಗೇಶ್‌ನ ಅಪಾರ್ಟ್‌ಮೆಂಟಿಗೇ ನುಗ್ಗಿ ಹಾವಳಿಯಿಟ್ಟಿದ್ದ. ತಂಗಿ ಭಾನುಮತಿಯ ಸ್ವಭಾವವೇ ಅಂಥಾದ್ದೋ ಅಥವಾ ಫಾರಿನ್ ಫಂಡ್‌ನ ಗೌಪ್ಯತೆಗಾಗಿ ಇಂಥ ತಂತ್ರ ಬಳಸುತ್ತಾಳಾ?

ಕೆಲದಿನಗಳ ಹಿಂದೆ ಪುಟ್ಟಪರ್ತಿ ಸಾಯಿಬಾಬಾ ಅಡ್ಡೆಯಿಂದ ರವಿಶಂಕರ್ ಆಶ್ರಮಕ್ಕೆ ವಲಸೆ ಬಂದ ಶಾಲಿನಿ ಮತ್ತು ಆಕೆಯ ಪತಿ ಶ್ರೀನಿವಾಸ್ ಎಲ್ಲಿ ತನ್ನ ಆದಾಯಕ್ಕೆ ಕಲ್ಲು ಹಾಕುತ್ತಾರೋ? ಎಂದು ಪ್ರಸನ್ನ ಪ್ರಭು ಕಿರಿಕ್ ಶುರುಹಚ್ಚಿಕೊಂಡಿದ್ದ. ರವಿಶಂಕರ್ ಮೂಲಕ ಒಂದೇ ಒಂದು ಸಿಡಿ ಬಿಡುಗಡೆಯಾದರೂ ಅದು ಕೋಟ್ಯಂತರ ಡಾಲರ್‌ಗಳ ಬಾಬತ್ತಾಗುತ್ತದೆ. ಶಾಲಿನಿ ಶ್ರೀನಿವಾಸ್ ಈ ಹಿಂದೆ ಸಾಯಿಬಾಬಾ ಪಾಳಯದಲ್ಲಿ ಹೆಸರಾಂತ ಸಂಗೀತಗಾರನಾಗಿದ್ದಾತ. ಈತ ರವಿಶಂಕರ್ ಕುರಿತು ಹಾಡಿದ ಸಿಡಿಗಳ ಆದಾಯ ಪೂರ್ತಿ ತಾನೇ ನಿಭಾಯಿಸುತ್ತೇನೆಂದು ಪ್ರಸನ್ನ ಹಠಕ್ಕೆ ಬಿದ್ದ. ಇದರ ವಿರುದ್ಧ ಶ್ರೀನಿವಾಸ್ ಗುರುಗಳಿಗೇ ದೂರು ಕೊಟ್ಟ. ಭಾನುಮತಿಗೂ ಹೇಳಿಕೊಂಡಿದ್ದ. ಶ್ರೀನಿವಾಸ್ ವಿರುದ್ಧ ಪ್ರಸನ್ನ ತನ್ನ ಛೇಲಾ ರವಿ ಎಂಬಾತನನ್ನು ಎತ್ತಿಕಟ್ಟಿದ್ದ.


ಪ್ರಸನ್ನಪ್ರಭು ಮೂಲತಃ ಮುಂಬಯಿ ವ್ಯಕ್ತಿ. ಆಶ್ರಮದ ಮೂಲಗಳೇ ಹೇಳುವಂತೆ ಆತನಿಗೆ ಮುಂಬಯಿಯ ಅಂಡರ್‌ವರ್ಲ್ಡ್ ಲಿಂಕುಗಳಿವೆ. ತನ್ನ ಅವ್ಯವಹಾರವೆಲ್ಲಿ ಬಯಲಾಗುತ್ತೋ ಎಂದು ಭೀತಿಗೆ ಬಿದ್ದ ಪ್ರಸನ್ನ ಆಶ್ರಮದ ಗಮನ ಬೇರೆಡೆ ಸೆಳೆದು ರವಿಶಂಕರ್‌ಗೆ ಇನ್ನಷ್ಟು ಭೀತಿ ಹುಟ್ಟಿಸಲು ಶೂಟೌಟ್ ಸೃಷ್ಟಿಸಿದನೊ? ಅಥವಾ ಪ್ರಸನ್ನನನ್ನು ಮಟ್ಟಾಹಾಕಲು ಉತ್ತರ ಪ್ರದೇಶದ ಗ್ಯಾಂಗ್ ಹವಣಿಸಿತ್ತೆ?

ಆಶ್ರಮವನ್ನು ನಿಯಂತ್ರಿಸುವಲ್ಲಿ ಕೇರಳ, ಗುಜರಾತಿ, ಯುಪಿ, ಮುಂಬಯಿಯ ಶಿಷ್ಯಗಣಗಳ ಮಧ್ಯೆ ಜಿದ್ದಾಜಿದ್ದಿಯಿರುವುದಂತೂ ಸತ್ಯ. ಇದು ರವಿಶಂಕರ್‌ಗೂ ಗೊತ್ತಿದೆ. ಪುಟ್ಟಪರ್ತಿ ಸಾಯಿಬಾಬನ ಹಾಗೇ ಮುಂದೊಮ್ಮೆ ತನ್ನ ಶಿಷ್ಯರಿಂದಲೇ ಎಲ್ಲಿ ಅಪಾಯ ಎದುರಾದೀತೋ ಎಂಬ ಭೀತಿಯಂತೂ ರವಿಶಂಕರ್‌ಗಿದೆ. ಅದಕ್ಕೇ ಪ್ರತಿವರ್ಷ ತನಗೆ ಝಡ್ ಕ್ಯಾಟಗರಿಯ ಭದ್ರತೆ ಕಲ್ಪಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮನವಿ ಕೊಡುತ್ತಲೇ ಬಂದಿದ್ದಾನೆ. ನಂಬಿಕಸ್ಥ ಶಿಷ್ಯರು ಇದ್ದಿದ್ದೇ ಆಗಿದ್ದರೆ, ತನ್ನದೇ ಆಪ್ತರ ಬಗ್ಗೆ ಅನುಮಾನ-ಅಸಹನೆ ಇಲ್ಲದಿದ್ದರೆ ಏಕೆ 'ಝಡ್' ಕ್ಯಾಟಗರಿ ರಕ್ಷಣೆಗಾಗಿ ಪದೇಪದೇ ಮನವಿ ಕೊಡುತ್ತಿದ್ದ?

ಯಾವ ಭೀತಿ ರವಿಶಂಕರ್‌ನನ್ನು ಕಾಡುತ್ತಿದೆ? ಯಾರೂ ಶತ್ರುಗಳಿಲ್ಲದಿದ್ದರೆ ಏಕೆ ಉನ್ನತ ಮಟ್ಟದ ರಕ್ಷಣೆಗಾಗಿ ಹಾತೊರೆಯುತ್ತಿದ್ದ?



ಶೃಂಗೇರಿ ಜೀವರಾಜ್-ದಿನೇಶ್ ಸಹಭೋಜನ!



ಮಲೆನಾಡಿನ ಮಂದಿ ನಿಜಕ್ಕೂ ಭ್ರಮನಿರಸನಗೊಂಡಿದ್ದಾರೆ. ಚಂದ್ರೇಗೌಡರಂಥ ಕೈಗೆ ಸಿಗದ ನಾಯಕರಿಂದ ರೋಸುತ್ತುಹೋದ ಜನರು ಬಿಜೆಪಿಯ ಜೀವರಾಜ್‌ರನ್ನು ಗೆಲ್ಲಿಸಿ ಅಪಾರ ನಿರೀಕ್ಷೆಯಿಟ್ಟಿದ್ದರು. ಇದೀಗ ಅಂಥ ನಿರೀಕ್ಷೆಗಳೆಲ್ಲ ಜೀವರಾಜ್‌ನ ಹಲವು ಹಕೀಕತ್ತುಗಳ ನಡುವೆ ಉಸಿರುಗಟ್ಟಿ ಒದ್ದಾಡಹತ್ತಿವೆ.

ಹೀಗೆ ಜನರ ನಿರೀಕ್ಷೆಗಳನ್ನು ತಲೆಕೆಳಗು ಮಾಡುತ್ತಿರುವುದು ಶೃಂಗೇರಿ ಸುತ್ತಮುತ್ತ ನಡೆಯುತ್ತಿರುವ ಕಾಮಗಾರಿ ಅವ್ಯವಹಾರಗಳು. ಶಾಸಕ ಜೀವರಾಜ್ ತನ್ನ ಬಂಧುಬಳಗದವರನ್ನೇ ಗುತ್ತಿಗೆದಾರರನ್ನಾಗಿ ಗುಡ್ಡೆ ಹಾಕಿಕೊಂಡಿರುವುದು ಇಷ್ಟೆಲ್ಲ ಅನಾಹುತಗಳ ಮೂಲ. ಈ ವ್ಯಾಪ್ತಿಯಲ್ಲಿ ಗುತ್ತಿಗೆದಾರರಾಗಿರುವವರ ಜಾತಕ ಜಾಲಾಡಿದರೆ ಇಂಥ ಜಾತಿಬಂಧು ಗುತ್ತಿಗೆದಾರರಲ್ಲಿ ಗಡದ್ದಾಗಿ ಮೇಯ್ದು ಗಬ್ಬೆಬ್ಬಿಸುತ್ತಿರುವಾತ ಹೊಸೂರು ದಿನೇಶ್. ದೊಡ್ಡಮಟ್ಟದ ಅವ್ಯವಹಾರ ಎಲ್ಲೆಲ್ಲಿ ನಡೆದಿದೆಯೋ, ಅವುಗಳೆಲ್ಲ ಈತನ ಮಾರ್ಗದರ್ಶನದಲ್ಲೇ ನಡೆದಿರುವಂಥವುಗಳು. ಜಾತಿಬಂಧುವೆಂಬ ಕಾರಣಕ್ಕೆ ದಿನೇಶನನ್ನು ಅತಿಯಾಗಿ ಹಚ್ಚಿಕೊಂಡಿರುವ ಜೀವರಾಜ್ ದೊಡ್ಡ ಕಾಮಗಾರಿಗಳೆಲ್ಲ ಈತನಿಗೇ ದಕ್ಕುವಂತೆ ನೋಡಿಕೊಳ್ಳುತ್ತಿದ್ದಾರೆ. ತನ್ಮೂಲಕ ಕ್ಷೇತ್ರದ ಜನರಿಗೆ ಮಹಾ ಮೋಸ ಮಾಡುತ್ತಿದ್ದಾರೆ.

ಅಷ್ಟಕ್ಕೂ ದಿನೇಶನಿಗೆ ಕೋಟಿ ಮೊತ್ತದ ಕಾಮಗಾರಿಗಳನ್ನು ಸಂಭಾಳಿಸುವ ತಾಕತ್ತಿಲ್ಲ, ತೀರಾ ಇತ್ತೀಚಿನವರೆಗೆ ಚಿಕ್ಕಪುಟ್ಟ ಮೋರಿ ಕಾಮಗಾರಿಯ ಕೆಲಸ ಮಾಡುತ್ತಿದ್ದ ಈತನಿಗೆ ಬೃಹತ್ ಕಾಮಗಾರಿ ನಿರ್ವಹಿಸುವ ವೃತ್ತಿ ಜಾಣ್ಮೆಯೂ ಇಲ್ಲ, ಆದರೆ ಆಯಕಟ್ಟಿನ ಸಂದರ್ಭದಲ್ಲಿ ಹೇಗೆಲ್ಲಾ ಗೆಬರಬಹುದೆಂಬ ಕ್ರಿಮಿನಲ್ ತಲೆಯಿದೆ. ಜೀವರಾಜ್‌ಗೆ ಇಷ್ಟವಾಗಿರುವುದೇ ಅದು!

ಆ ಕಾರಣದಿಂದಲೇ ಜೀವರಾಜ್ ಕಾಮಗಾರಿ ನಿರ್ವಹಣೆಯ ಪ್ರಾಥಮಿಕ ಮೊತ್ತವನ್ನು ದಿನೇಶ್‌ನಿಗೆ ನೀಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪರೋಕ್ಷವಾಗಿ ಅವರೇ ಗುತ್ತಿಗೇದಾರ! ಆದಕಾರಣದಿಂದಲೇ ಜನರು ದಂಗೆಯೆದ್ದರೂ ತಲೆ ಸವರುತ್ತಾ ತೆಪ್ಪಗಿದ್ದಾರೆ. ದಿನೇಶ್ ಜನರ ದುಡ್ಡು ಲೂಟಿ ಹೊಡೆಯುತ್ತಾ ಮೆರೆದಾಡುತ್ತಿದ್ದಾನೆ.

ನೂತನವಾಗಿ ನಿರ್ಮಾಣವಾಗುತ್ತಿರುವ ಹೊರನಾಡು-ಶೃಂಗೇರಿ ಹೆದ್ದಾರಿ ಕಾಮಗಾರಿಯಲ್ಲಿ ನಡೆದಿರುವ ಅವ್ಯವಹಾರ ದಿನೇಶನ ಜೀರ್ಣಶಕ್ತಿಗೆ ಪಕ್ಕಾ ನಿದರ್ಶನ! ಹೊರನಾಡಿಂದ ಶೃಂಗೇರಿಗೆ ದಾರಿ ಹತ್ತಿರಾಗಿಸಿ, ಪ್ರವಾಸೋದ್ಯಮಕ್ಕೆ ಒತ್ತು ನೀಡುವ ಉದ್ದೇಶದ ಈ ಕಾಮಗಾರಿಯನ್ನು ಸ್ಥಳೀಯ ಜನತೆ ಸ್ವಾಗತಿಸಿದ್ದರು. ಅಖಂಡ ಎಂಟು ಕೋಟಿಯ ಕಾಮಗಾರಿ ದಿನೇಶನ ಉಡಿಗೆ ಬಿತ್ತು ನೋಡಿ? ಜನರ ನಂಬಿಕೆಯೆ ಉಲ್ಟಾ ಹೊಡೆಯಿತು. ಇದರ ತುಂಬಾ ಶಾಸಕ ಜೀವರಾಜ್ ಹಾಗೂ ದಿನೇಶನ ಸಹಭೋಜನ ಸಾಂಗವಾಗಿ ನೆರವೇರಿದೆ.

ಹೊರನಾಡಿಂದ ಬಲಿಗೆ, ಮೆಣಸಿನಹಾಡ್ಯ, ತಲವಾನೆ, ಮೇಗೂರು ಮಾರ್ಗವಾಗಿ ಬೈರೇದೇವರು, ಹೆಗ್ಗಾರು ಕುಡಿಗೆ ಹಾಗೂ ಗಡೀಕಲ್ಲು ಮುಂತಾದ ಊರುಗಳನ್ನು ಹಾದುಹೋಗುವ ಈ ರಸ್ತೆ ಮಳೆಗಾಲಕ್ಕೆ ಮುನ್ನವೇ ಹದಗೆಡುವ ಸ್ಥಿತಿ ತಲುಪಿದೆ. ಸಾಕ್ಷಿಗೆಂಬಂತೆ ಬಳಿದಿರುವ ಡಾಂಬರು ತೀರಾ ಬಸ್ಸು-ಕಾರುಗಳ ಭಾರಕ್ಕೇ ಕೆಲವೆಡೆ ಕುಸಿದುಕುಳಿತಿದೆ. ಇನ್ನು ಚರಂಡಿ ವ್ಯವಸ್ಥೆಯದ್ದಂತೂ ದಯನೀಯ ಸ್ಥಿತಿ.

ಮಲೆನಾಡಿನ ಮಳೆಯ ಬಿರುಸು ಗೊತ್ತಿರುವ ಸ್ಥಳೀಯ ಜನತೆ 'ಈ ರಸ್ತೆ ಒಂದು ಮಳೆಗಾಲ ತಡ್ಕೊಳ್ಳಾದೂ ಕಷ್ಟ' ಅಂತ ಬಹಿರಂಗವಾಗೇ ಮಾತನಾಡುತ್ತಿದ್ದಾರೆ. ದಿನೇಶ್-ಹಾಗೂ ಜೀವರಾಜ್ ವಿರುದ್ಧ ಸ್ಥಳೀಯರೇ ಪ್ರತಿಭಟಿಸಿದ್ದೂ ನಡೆದಿದೆ. ಆದರೆ ಕಾಮಗಾರಿಯೆಂಬುದು ಅದರ ಪಾಡಿಗದು ನಡೆಯುತ್ತಲೇ ಇದೆ.

ಈ ರೀತಿ ಒಂದು ಕಾಮಗಾರಿ ಎಕ್ಕುಟ್ಟಿಸಿದ ಗುತ್ತಿಗೆದಾರನನ್ನು ಜನಪರ ನಿಲುವಿರುವ ಯಾರೇ ಆದರೂ ಒದ್ದು ಹೊರಗಟ್ಟುತ್ತಾರೆ. ಆದರೆ ಜೀವರಾಜ್ ಕೋಟಿ ಲೆಕ್ಕದ ಕಾಮಗಾರಿಗಳನ್ನೆಲ್ಲ ಕಳ್ಳ ದಿನೇಶನ ಮಡಿಲು ತುಂಬುತ್ತಲೇ ಇದ್ದಾರೆ. ಸದ್ಯ ದಿನೇಶನ ಕೈಲಿರುವ ಹಾಗೂ ಈಗಾಗಲೇ ಹದಗೆಟ್ಟಿರುವ ಕಾಮಗಾರಿಗಳ ಪಟ್ಟಿ ಗಮನಿಸಿದರೆ ಎಂಥವರಿಗಾದರೂ ದಿಗಿಲಾಗುತ್ತದೆ.

ಕೊಪ್ಪ ಪಟ್ಟಣದಲ್ಲಿರುವ ಹಿರೇಕೆರೆಯ ಹೂಳೆತ್ತುವ ಕಾಮಗಾರಿ ಅಖಂಡ 1 ಕೋಟಿ 65 ಲಕ್ಷ ರೂ.ಗಳದ್ದು, ಜೊತೆಗೆ ಕೊಪ್ಪದಲ್ಲೇ ನಿರ್ಮಾಣಗೊಳ್ಳಲಿರುವ ಹೊಸ ಕೋರ್ಟ್ ಬಿಲ್ಡಿಂಗ್ ಹಾಗೂ ಜನರ ಸಾರ್ವತ್ರಿಕ ವಿರೋಧದ ನಡುವೆಯೇ ನಿರ್ಮಾಣಗೊಳ್ಳಲಿರುವ ಮಿನಿ ವಿಧಾನಸೌಧ-ಇಷ್ಟೆಲ್ಲ ಕಾಮಗಾರಿಗಳೂ ದಿನೇಶನ ಸುಪರ್ದಿಯಲ್ಲಿವೆ. ವಿಷಯ ಹೀಗಿರುವುದರಿಂದಲೇ ಅವೆಲ್ಲ ಎಕ್ಕುಟ್ಟುವುದು ಸಹ ನಿಚ್ಚಳವಾಗಿದೆ!

ಒಬ್ಬನೇ ಒಬ್ಬ ದಿನೇಶ್ ಇಷ್ಟೆಲ್ಲಾ ಕಮಾಯಿಸುತ್ತಿದ್ದಾನಲ್ಲಾ? ಅಂತ ಶಾಕ್ ಆಗುತ್ತಲೇ ಮತ್ತಷ್ಟು ಮಂಡೆ ಬಿಸಿ ಮಾಡುವ ವಿಚಾರಗಳೂ ಎಗರಿಬೀಳುತ್ತವೆ. ಜೀವರಾಜ್ ದಿನೇಶನಂಥ ಜಾತಿಬಂಧು ಕಂಟ್ರಾಕ್ಟರ್‌ಗಳನ್ನೇ ಊರು ತುಂಬಾ ಸಾಕಿಕೊಂಡಿದ್ದಾರೆ. ಗಡಿಗೇಶ್ವರದ ಗುರುಮೂರ್ತಿ, ಎನ್.ಆರ್. ಪುರದ ಸಂದೇಶ್ ಮುಂತಾದವರು ಸಹ ಜೀವರಾಜ್ ಸಂಬಂಧಿಗಳೆಂಬ ಕಾರಣಕ್ಕೇ ಕಮಾಯಿಗೆ ನಿಂತಿರುವ ಕಳ್ಳ ಕಂಟ್ರಾಕ್ಟರುಗಳು. ಇನ್ನು ಕಲ್ಮಕ್ಕಿ ನಾಗೇಶ್ ಎಂಬ ಗುತ್ತಿಗೆದಾರನಂತೂ ಜೀವರಾಜ್‌ನ ರಕ್ತ ಸಂಬಂಧಿ.

ಇದೆಲ್ಲವನ್ನು ನೋಡುತ್ತಿದ್ದರೆ ಜೀವರಾಜ್‌ರ ಕಾರ್ಯಕ್ಷಮತೆ, ಜನಪರತೆಗಳೆಲ್ಲ ಬಯಲಾಗುತ್ತವೆ. ಕಾಮಗಾರಿಗಳು ಸರಿಯಾಗಿಲ್ಲ ಅಂತ ಜನ ಪ್ರತಿಭಟನೆ ಮಾಡಿದಾಗ ಜೀವರಾಜ್ ಅದಕ್ಕೆ ಕಾರಣವಾದ ದಿನೇಶನಿಗೆ 'ಉತ್ತಮ ಕಂಟ್ರಾಕ್ಟರ್' ಅಂತ ಬಿರುದು ಕೊಟ್ಟು ಸನ್ಮಾನಿಸುತ್ತಾರೆ!

ಚುನಾವಣೆಯ ಸಂದರ್ಭದಲ್ಲಿ ಜನರೆದುರು ದೈನೇಸಿಯಂತೆ ನಿಂತ ಜೀವರಾಜ್ 'ಒಂದೇ ಒಂದು ಅವಕಾಶ ಕೊಡಿ' ಅಂತ ಅಂಗಲಾಚಿದ್ದು ಯಾಕೆಂಬುದು ಜನರಿಗೀಗ ಅರ್ಥವಾಗಿರಬಹುದು!

• ಸಂತೋಷ್ ಬಾಗಿಲಗದ್ದೆ

ಪಂಚಮಿಗುಡ್ಡದ ಕಲ್ಲು ಕದ್ದರು!

ಖತರ್‌ನಾಕ್ ಕಂಟ್ರಾಕ್ಟರ್ ದಿನೇಶ್, ಕಾಮಗಾರಿಗೆ ಬೇಕಾದ ಕಚ್ಚಾ ವಸ್ತುಗಳನ್ನು ಕದ್ದು ಹಣ ಉಳಿಸುವುದರಲ್ಲಿ ಬಲು ನಿಪುಣ. ಪ್ರಸ್ತುತ ಹೊರನಾಡು-ಶೃಂಗೇರಿ ಹೆದ್ದಾರಿ ಕಾಮಗಾರಿಯಲ್ಲೂ ಸಹ ಐತಿಹಾಸಿಕ ಪಂಚಮಿಗುಡ್ಡದ ಕಲ್ಲು ಕದ್ದು ಕಸುಬುದಾರಿಕೆ ಮೆರೆದಿದ್ದಾನೆ.

ಕೊಪ್ಪ ತಾಲ್ಲೂಕು ಮೇಗುಂದಾ ಹೋಬಳಿಯ ಕೊಗ್ರೆ ಹಾಗೂ ಮೇಗೂರು ನಡುವಲ್ಲಿರುವ ಪಂಚಮಿಗುಡ್ಡ ಜೈನ ಪರಂಪರೆ ಸಾರುವ ಐತಿಹಾಸಿಕ ಸ್ಥಳ. ಒಡಲ ತುಂಬಾ ಕಲ್ಲುಗಳನ್ನು ತುಂಬಿಕೊಂಡಿರುವುದರಿಂದ ಸ್ಥಳೀಯರಿಂದ ಕಲ್ಲುಗೋಪುರ ಅಂತಲೂ ಕರೆಸಿಕೊಳ್ಳುವ ಈ ಜಾಗ ಕಲ್ಲು ಕಳ್ಳರ ಕಾಕದೃಷ್ಟಿಯಿಂದ ತಪ್ಪಿಸಿಕೊಂಡೇ ಬಂದಿತ್ತು.

ಹೊರನಾಡು-ಶೃಂಗೇರಿ ಹೆದ್ದಾರಿ ಕಾಮಗಾರಿ ಇದರ ಪಕ್ಕದಲ್ಲೇ ಹಾದು ಬಂತು ನೋಡಿ? ಇತಿಹಾಸದ ಬುಡಕ್ಕೆ ಜಿಲೇಟಿನ್ ಕಡ್ಡಿಯಿಕ್ಕುವ ಕೈಂಕರ್ಯಕ್ಕೆ ಚಾಲನೆ ಸಿಕ್ಕಿತು. ಈ ಪ್ರದೇಶದ ರಸ್ತೆಗೆ ಬೇರೆಡೆಯಿಂದ ಕಲ್ಲು ತಂದರೆ ಹಣ ಖರ್ಚಾದೀತೆಂದು ದಿನೇಶ್ ಐತಿಹಾಸಿಕ ಕಲ್ಲುಗಳಿಗೆ ಕೈಹಾಕಿದ. ಪರಿಣಾಮವೆಂಬಂತೆ ಇಲ್ಲಿನ ಕಲ್ಲುಗಳು ಜಲ್ಲಿಯಾಗಿ ರೂಪಾಂತರಗೊಂಡು ರಸ್ತೆಗೆ ಮೈಯೊಡ್ಡತೊಡಗಿದವು. ತಜ್ಞರೇ ಹೇಳುವಂತೆ ಇದು ಕಳಪೆ ಜಲ್ಲಿ.

ಇಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆಯೆಂಬ ವಿಚಾರ ತಿಳಿದದ್ದೇ ಕೆಲ ಸ್ಥಳೀಯರು ಸಂಘಸಂಸ್ಥೆಗಳೊಡಗೂಡಿ ಪ್ರತಿಭಟನೆ ನಡೆಸಿದರು. ದಿನೇಶ್ 'ಲೈಸೆನ್ಸ್ ಸಿಕ್ಕಿದೆ' ಅಂತೆಲ್ಲ ತೊದಲಿದನಾದರೂ ಪ್ರತಿಭಟನೆ ತೀವ್ರಗೊಂಡಿತು. ಕೊನೆಗೂ ಮಾತುಕತೆ ನಡೆದು ಇಲ್ಲಿನ ಜಲ್ಲಿ ಕಲ್ಲನ್ನು ಈ ಪ್ರದೇಶದ ರಸ್ತೆಗೆ ಮಾತ್ರ ಹಾಕಬೇಕು, ಬೇರೆ ಕಾಮಗಾರಿಗೆ ಬಳಸಬಾರದು ಅಂತ ನಿರ್ಧಾರವಾಯಿತು.




ತರುವಾಯ ಗಣಿಗಾರಿಕೆ ನಿಂತಿತಾದರೂ ಅದಾಗಲೇ ದಿನೇಶ ಭಾರೀ ಜಲ್ಲಿ ರಾಶಿಗಳನ್ನು ಪೇರಿಸಿಟ್ಟುಕೊಂಡಿದ್ದ. ಒಂದಷ್ಟು ದಿನ ಕಳ್ಳಬೆಕ್ಕಿನಂತೆ ತೆಪ್ಪಗಿದ್ದು ಇದೀಗ ಜಲ್ಲಿ ಕಲ್ಲನ್ನು ಬೇರೆಡೆಗೆ ಸಾಗಿಸುವ ಕೆಲಸ ಎಗ್ಗಿಲ್ಲದೆ ನಡೆಯುತ್ತಿದೆ.

ಕಲ್ಲು ಒಡೆಯುವ ಕಾರ್ಯ ಎಷ್ಟು ಬಿರುಸಾಗಿ ನಡೆಯಿತೆಂದರೆ, ಬಂಡೆಗಳ ನಡುವಿರುವ ಕಲ್ಲುಗೋಪುರದ ಮೇಲ್ಭಾಗದ ಕಲ್ಲೊಂದು ಕಾಡುಪಾಲಾಗಿದೆ. ದುರಂತವೆಂದರೆ, ಅಪರೂಪದ ಜೈನಸ್ಮಾರಕವೊಂದು ಹಣದ ಹಪಾಹಪಿಗೆ ಬಲಿಯಾಗುತ್ತಿದ್ದರೂ ಜೈನ ಸಮುದಾಯದವರೂ ಸುಮ್ಮನಿದ್ದಾರೆ. ಇತಿಹಾಸದೆಡೆಗೆ ಕಾಳಜಿಯಿರುವವರ ಕೂಗು ಜೀವರಾಜ್ ದರ್ಬಾರಿನಲ್ಲಿ ಗಂಟಲಲ್ಲೇ ಉಳಿಯುವಂತಾಗಿದೆ. ಕ್ಷಣಿಕ ಲಾಭಕ್ಕಾಗಿ ಇತಿಹಾಸವನ್ನು ಮುಕ್ಕಾಗಿಸಿ ಮನುಷ್ಯರ ಬಾಯಿಮುಚ್ಚಿಸಿ ಮೆರೆದಾಡುವುದು ಯಾವ ಸೀಮೆಯ ರಾಜಕೀಯ ಜೀವರಾಜ್?


ಮೈಸೂರು: ವೇಶ್ಯಾ ಜಾಲದಲ್ಲಿ ಜಯ ಕರ್ನಾಟಕ ಲೀಡರ್

ಹೋರಾಟವೆಂಬುದು ದಂಧೆಯಾಗಿ, ದಗಲ್ಬಾಜಿಯಾಗಿ ರೂಪಾಂತರಗೊಂಡಿರುವ ಪರಿಣಾಮವೆಂಬಂತೆ ಗಲ್ಲಿಗೊಂದರಂತೆ ಸಂಘಟನೆಗಳು ಹುಟ್ಟಿಕೊಳ್ಳುತ್ತಿವೆ. ಅವುಗಳ ಉದ್ದೇಶ ಬಹುತೇಕ ಹಣ ಹೊಡೆದುಕೊಳ್ಳುವುದು, ಅನೈತಿಕತೆಗೆ ದಾರಿ ಸುಗಮಗೊಳಿಸಿಕೊಳ್ಳುವುದು ಎಂದರೆ ಅತಿಶಯೋಕ್ತಿಯಲ್ಲ. ಇತ್ತೀಚೆಗೆ ಹುಟ್ಟಿ ಹಾರಾಡುತ್ತಿರುವ ಜಯ ಕರ್ನಾಟಕ ಸಂಘಟನೆಯೂ ಇದಕ್ಕೆ ಹೊರತಾಗಿಲ್ಲವೆಂಬ ಸತ್ಯ ಮತ್ತೊಮ್ಮೆ ಜಾಹೀರಾಗಿದೆ; ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಮಹೇಶ್ ಗೌಡ ವೇಶ್ಯಾವಾಟಿಕೆ ದಂಧೆಯಲ್ಲಿ ತಗುಲಿಕೊಳ್ಳುವ ಮೂಲಕ!

ತನ್ಮೂಲಕ ಸಾಮಾಜಿಕ ನ್ಯಾಯ ಕೊಡಿಸುವ ಹರಿಕಾರನೆಂಬಂತೆ ಪೋಸು ಕೊಡುವ ಜಯ ಕರ್ನಾಟಕ ಸಂಘಟನೆಯ ಅಸಲೀ ವ್ಯವಹಾರಗಳು ಬಯಲಾಗಿವೆ. ಮೊನ್ನೆ ಮಂಗಳವಾರ ಮುಂಜಾನೆ ಮೈಸೂರಿನ ಕುವೆಂಪು ನಗರದ ಹಂಸ



ಬಡಾವಣೆಯ ತೋಟದ ಮನೆಯಲ್ಲಿ ಮಹೇಶ್ ಗೌಡ ಪೊಲೀಸರಿಗೆ ತಗುಲಿಕೊಂಡಿದ್ದಾನೆ. ತಕ್ಷಣ ಎಚ್ಚೆತ್ತುಕೊಂಡ 'ಜಯ ಕರ್ನಾಟಕ'ದ ಕೆಲ ಖತರ್‌ನಾಕ್‌ಗಳು 'ಅವನಿಗೂ ಸಂಘಟನೆಗೂ ಸಂಬಂಧವಿಲ್ಲ, 8 ತಿಂಗಳ ಹಿಂದೆಯೇ ಆತನನ್ನು ಉಚ್ಚಾಟಿಸಲಾಗಿದೆ' ಅಂತೆಲ್ಲ ಪತ್ರಿಕಾಹೇಳಿಕೆ ಎಸೆದು ಮಾನ ಉಳಿಸಿಕೊಳ್ಳಲು ಹೆಣಗಾಡಿದ್ದಾರೆ.



ಮಹೇಶ್ ಗೌಡನ ಹಿನ್ನೆಲೆ ಹಾಗೂ ದಂಧೆಗಳ ಬಗ್ಗೆ ವಿವರಿಸುವುದಕ್ಕಿಂತ ಮೊದಲು ಮೊನ್ನೆ ನಡೆದ ಘಟನೆಯ ಬಗ್ಗೆ ಹೇಳುವುದೊಳಿತು. ಮಹೇಶ್ ಎಂಬ ಶಿವಮೊಗ್ಗ ಮೂಲದ ಪಿಂಪ್ ಮೈಸೂರಿನ ಲಾಡ್ಜ್‌ಗಳಲ್ಲಿ ವ್ಯವಹಾರ ನಡೆಸುತ್ತಿದ್ದ ಕುಖ್ಯಾತ. ಈ ಹಿಂದೆ ಡಿಸಿಪಿ ರವಿಕಾಂತೇಗೌಡರ ಅವಧಿಯಲ್ಲಿ ರೇಡು ಬಿದ್ದು ಚದುರಿಸಿದ ಬಳಿಕ ಪಿಂಪ್ ಮಹೇಶ್ ಈ ತೋಟದ ಮನೆಯನ್ನು ಆರಿಸಿಕೊಂಡು ದಂಧೆ ನಡೆಸುತ್ತಿದ್ದ. ಮೈಸೂರಲ್ಲಿ ಬೀಡಾಡಿಯಂತಿದ್ದ ಮಹೇಶ್ ಗೌಡನಿಗೂ ಪಿಂಪ್ ಮಹೇಶನಿಗೂ ಬಹು ಹಿಂದಿನಿಂದಲೂ ನಂಟಿತ್ತು ಹಾಗೂ ಈ ದಂಧೆಯಲ್ಲಿ ಮಹೇಶ್ ಗೌಡನೂ ಪಾಲುದಾರಿಕೆ ಹೊಂದಿದ್ದನೆಂಬ ಬಗ್ಗೆ ಪುಕಾರುಗಳೆದ್ದಿವೆ.

ಇಂಥ ವ್ಯವಹಾರದ ನಿಮಿತ್ತ ತೋಟದ ಮನೆ ಹೊಕ್ಕಿದ್ದ ಮಹೇಶ್ ಮೊನ್ನೆ ಮುಂಜಾನೆಯ ಹೊತ್ತಿಗೆ ಪೊಲೀಸರ ಕೈಗೆ ತಗುಲಿಕೊಂಡಿದ್ದಾನೆ. ಘಟನಾ ಸ್ಥಳದಲ್ಲಿ ಸಿಕ್ಕ ಚಿನ್ನಾಭರಣಗಳು, ಕಾರು-ಎಲ್ಲಾ ಈತನವೇ. ಬೂಟನೇಟು ಬೀಳುತ್ತಲೇ 'ನಾನು ಗಿರಾಕಿಯಾಗಿ ಹೋಗಿದ್ದೆ' ಅಂತ ತೊದಲಿದ್ದಾನೆ.

ಈ ರೀತಿ ತಗುಲಿಕೊಂಡ ಮಹೇಶ್ ಗೌಡ ತಮಗೆ ಸೇರಿದವನಲ್ಲ ಅಂತ ಜಯ ಕರ್ನಾಟಕ ಸಂಘಟನಾ ಮೂಲಗಳು ಹೇಳುತ್ತಿದ್ದರೂ ವಾಸ್ತವ ಬೇರೆಯದೇ ಇದೆ. ಈ ಮಹೇಶ್ ಗೌಡನ ಜಾತಕದ ಮೂಲದಲ್ಲೇ ಹೀನ ಸುಳಿಯಿದೆ. ಮೈಸೂರು ನಗರದ ಬಜಾಜ್ ಅಲಿಯನ್ಸ್ ಫೈನಾನ್ಸ್ ಕಂಪನಿಯಲ್ಲಿ ಉದ್ಯೋಗಿಯಾಗಿರುವ ಈತ, ರಿಯಲ್ ಎಸ್ಟೇಟ್ ವ್ಯವಹಾರ, ಅಕ್ರಮ ಚೀಟಿ ದಂಧೆಯಂಥ ಅಡ್ಡ ಕಸುಬುಗಳಲ್ಲೇ ಕಾಸು ಕಾಣುತ್ತಿರುವಾತ. ಅದೂ ಅಲ್ಲದೆ ಈಗ್ಗೆ ಐದಾರು ವರ್ಷಗಳ ಹಿಂದೆ ಗುಂಡ್ಲುಪೇಟೆ ಸಮೀಪ ನಡೆದ ದರೋಡೆ ಪ್ರಯತ್ನದಲ್ಲೂ ಈತ ಸಿಕ್ಕಿಬಿದ್ದಿದ್ದ. 'ಜಯ ಕರ್ನಾಟಕ'ದ ರಾಜ್ಯ ಉಪಾಧ್ಯಕ್ಷ ರಾಮೇಗೌಡನ ಖಾಸಾ ಶಿಷ್ಯನಾದ ಈತ ಜಯ ಕರ್ನಾಟಕಕ್ಕೆ ತಗುಲಿಕೊಂಡು ಅನಾಚಾರ ಮುಂದುವರೆಸಹತ್ತಿದ.

ಇಂಥ ಹೀನ ಸುಳಿಯಿರುವಾತನನ್ನು ನಗರ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸುತ್ತಾರೆಂದರೆ, ಜಯ ಕರ್ನಾಟಕ ಸಂಘಟನೆಯ ಆದ್ಯತೆಗಳೇನೆಂಬುದು ಸ್ಪಷ್ಟವಾಗುತ್ತದೆ. ಸಂಘಟನೆಯ ತುಂಬಾ ಬರೀ ಇಂಥವರೇ ತುಂಬಿದ್ದರೂ ಸಾಮಾಜಿಕ ನ್ಯಾಯ, ಕನ್ನಡ ಪರ ಚಳವಳಿ ಅಂತೆಲ್ಲ ಒದರಾಡುತ್ತಿರುವುದು ಸಂಘಟನೆಯೊಳಗಿನ ದಗಲ್ಬಾಜಿತನಕ್ಕೆ ಸ್ಪಷ್ಟ ಸಾಕ್ಷಿ.

ಮಹೇಶ್ ಗೌಡನಂಥ ಕ್ರಿಮಿಗಳನ್ನು ಉಪಯೋಗಿಸಿಕೊಳ್ಳುವುದು, ಮಾಡಬಾರದ ಅನಾಚಾರ ಮಾಡಿದರೂ ತೆಪ್ಪಗಿರುವುದು, ಕೊನೆಗೊಮ್ಮೆ ತಗುಲಿಕೊಂಡರೆ, 'ನಮ್ಮವನಲ್ಲ' ಅಂತ ಕೈ ತೊಳೆದುಕೊಳ್ಳುವುದು-ಇವೇ ಹೋರಾಟವೊಂದರ ಲಕ್ಷಣಗಳಾ?

ನಾಡ ರಕ್ಷಣೆಯ ಹೆಸರಲ್ಲಿ ದಂಧೆ ನಡೆಸುವ ದೈನೇಸಿ ಸ್ಥಿತಿ 'ಜಯ ಕರ್ನಾಟಕ'ದ ಮಂದಿಗೆ ಬರಬಾರದಿತ್ತು.

ಗುಲ್ಬರ್ಗ ಪೌರ ಕಾರ್ಮಿಕರಿಗೆ ನ್ಯಾಯ ಕೊಡಿಸಿ

ಗುಲ್ಬರ್ಗ ಪೌರ ಆಡಳಿತ ಕಚೇರಿಯ ಮುಂದೆ ಇಂದಿಗೆ ದಿನಗಳಿಂದ ನಗರದ ಪೌರ ಕಾರ್ಮಿಕರು ಉಪವಾಸ ...ಗ್ರಹ ಹೂಡಿದ್ದಾರೆ ಯಾಕೆ? ಎರಡು ವರ್ಷಗಳಿಂದ ...ನೂನಿನ ಪ್ರಕಾರ ನೀಡಬೇಕಿದ್ದ ಯಾವ ಸವಲತ್ತುಗಳನ್ನೂ ...ರಿಗೆ ನೀಡದೆ, ದುಡಿಸಿ ಸಂಬಳವನ್ನೂ ಕೊಡದೆ, ಉಪವಾಸ ...ವಿರುವ ನಗರಸಭಾ ಆಡಳಿತದ ವಿರುದ್ಧ ಅವರು ತಮ್ಮ ...ವವನ್ನೇ ಪಣವಿಟ್ಟು ಉಪವಾಸ ಹೂಡಿದ್ದಾರೆ. ಸರಕಾರವೇ ...ವರನ್ನು ಆತ್ಮಹತ್ಯೆಗೆ ತಳ್ಳಿದೆ. ಸಂಬಂಧಪಟ್ಟ ಅಧಿಕಾರಿಗಳು, ...ಮಂತ್ರಿಗಳು, ಮುಖ್ಯಮಂತ್ರಿಗಳು ಸಹ ಆತ್ಮಹತ್ಯೆಗೆ ಪ್ರೇರಣೆ ...ತ್ತು ಒತ್ತಡ ಹೇರಿದ ಅಪರಾಧಕ್ಕೆ ಹೊಣೆಗಾರರಾಗಿದ್ದಾರೆ. ...ರ್ಹರೂ ಆಗುತ್ತಾರೆ.

ಕೇಂದ್ರ ಸರಕಾರದ ಕಾರ್ಮಿಕ ಸಚಿವರು ಗುಲ್ಬರ್ಗ ...ಲ್ಲೆಯವರೇ ಆಗಿದ್ದು ಕಾನೂನುಪ್ರಕಾರ ಮಧ್ಯ ಪ್ರವೇಶಿಸಿ ...ರ್ಮಿಕರಿಗೆ ನ್ಯಾಯ ಒದಗಿಸುವ ನಿಟ್ಟನಲ್ಲಿ ಕೂಡಲೇ ...ಮ ಕೈಗೊಳ್ಳಬೇಕು. ಉಪವಾಸ ಸತ್ಯಾಗ್ರಹದ ನಡುವೆ ...ರಣ ಹೊಂದಿರುವ ದಲಿತ ಕಾರ್ಮಿಕ ಮಹಿಳೆಯ ...ಚಾರವನ್ನು ಕೇಂದ್ರ ಸರಕಾರ ತನಿಖೆಗೆ ಒಳಪಡಿಸಿ ಅದಕ್ಕೆ ...ಣರಾಗಿರುವವರ ಅಸಡ್ಡೆ ಇನ್ನು ಮರುಕಳಿಸದಂತೆ ಕಾನೂನನ್ನು ...ಮುಗೊಳಿಸಬೇಕೆಂದು ಸಾರ್ವಜನಿಕರು ಒತ್ತಾಯಿಸುತ್ತಾರೆ.

ಕಾರ್ಮಿಕರನ್ನು ದುಡಿಸಿ ನ್ಯಾಯವಾದ ವೇತನ, ಮತ್ತಿತರ ...ಲತ್ತುಗಳನ್ನು ಕೊಡದೆ ಸಾಯಿಸುವ ಮಂದಿ ಕರ್ನಾಟಕದಲ್ಲಿ ...ಕಾರದ ಮರೆಯಲ್ಲಿ ಸಾಕಷ್ಟು ಇದ್ದಾರೆ ಎಂಬ ವಿಚಾರ ...ಯಲಾಗಿದೆ. ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ...ಬಣ್ಣ ಎಂಬ ದಲಿತ ಮಹಿಳೆ ಸತ್ಯಾಗ್ರಹದ ಮೊದಲನೆಯ ...ತಾತ್ಮರಾಗಿದ್ದಾರೆ. ಅವರನ್ನು ಬೆಂಬಲಿಸಿದ ಮತ್ತು ...ಯುಕ್ತಾಗಿ ಶಾಂತಿಯುತ ಸುಸಂಘಟಿತ ನ್ಯಾಯಬದ್ಧ

ಒಂದು ಪತ್ರ

...ೋರಾಟ ನಡೆಸಿದವರಿಗೆ ಬೆಂಬಲ ನೀಡಿದ್ದ ಮಾಜಿ ...ರ್ಮಿಕ ಸಚಿವ ಹಿರಿಯ ರಾಜಕಾರಣಿ ಎಸ್.ಕೆ. ಕಾಂತಾ ...ವರು ಮತ್ತು ಅವರ ಬೆಂಬಲಿಗರು ಬಂಧನಕ್ಕೆ ...ಗಾಗಿದ್ದಾರೆ. ಕರ್ನಾಟಕದಾದ್ಯಂತ ಎಲ್ಲ ಕಾರ್ಮಿಕ ...ಘಟನೆಗಳು, ಎಲ್ಲ ಜನಪರ ಸಂಘ ಸಂಸ್ಥೆಗಳು, ...ಕಪಂಥೀಯ ವಿಚಾರವಂತರು, ಕಾರ್ಯಕರ್ತರು ಈ ...ಗೆ ಕಾಲ ವಿಳಂಬವಿಲ್ಲದೆ ದೃಷ್ಟಿ ಹರಿಸಬೇಕೆಂದು ಕಳಕಳಿಯ ...ಂತಿ ಮಾಡಿಕೊಳ್ಳುತ್ತೇನೆ.

ಕರ್ನಾಟಕದಲ್ಲಿ ಕಾರ್ಮಿಕ ಚಳವಳಿಯ ಆರಂಭದ ...ದಲ್ಲಿಯೇ ಗುಲ್ಬರ್ಗ, ಬೆಂಗಳೂರು, ಮಂಗಳೂರು, ...ಸೂರು, ಹುಬ್ಬಳ್ಳಿ, ಧಾರವಾಡ, ಉಡುಪಿ ಹಾಗೂ ...ದ ಅನೇಕ ಕೇಂದ್ರಗಳಲ್ಲಿ ಪೌರ ಕಾರ್ಮಿಕರು ಕೆಂಬಾವುಟದ ...ಗೆ ಸಂಘಟಿತರಾಗಿ ಹೋರಾಟ ನಡೆಸಿ ಪಡೆದಿದ್ದ ...ಕ್ಕುಗಳನ್ನು ಮತ್ತು ಸವಲತ್ತುಗಳನ್ನು ಹಾಗೂ ತಲೆಯ ...ಲೆ ಮಲ ಹೊರಿಸುವ ಅಮಾನುಷ ಕ್ರಮಗಳ ...ಷೇಧವನ್ನು ಜಾರಿಗೊಳಿಸಿದ್ದು ನಮಗೆ ಇನ್ನೂ ಮರೆತಿಲ್ಲ. ...ರ್ನಾಟಕ ಸರಕಾರವು ಅಮಾನುಷವಾದ ಕಾರ್ಮಿಕ ವಿರೋಧಿ ...ಮತ್ತು ದಲಿತ ವಿರೋಧಿ ಮಾರ್ಗವನ್ನು ಕೈಬಿಟ್ಟು ...ದಿಯುವವರ ಹಕ್ಕು ಬಾಧ್ಯತೆಗಳನ್ನು ಕಾನೂನುಕ್ರಮಗಳಿಂದ ...ರಕ್ಷಿಸಬೇಕು. ಅಂಬಣ್ಣರ ಕುಟುಂಬಕ್ಕೆ ಸೂಕ್ತ ಪರಿಹಾರ ...ಡಬೇಕು, ಕರ್ನಾಟಕದ ಕಾರ್ಮಿಕ ಸಂಘಟನೆಗಳು ಈ ...ಾರದಲ್ಲಿ ರಾಜ್ಯವ್ಯಾಪಕ ಚಳವಳಿಯನ್ನು ನಡೆಸಬೇಕೆಂದು ...ಕಳಿಯಿಂದ ಕೇಳಿಕೊಳ್ಳುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿ ಸರಕಾರ ಹೂಡಿರುವ ...ಮೊಕದ್ದಮೆಗಳನ್ನು ಹಿಂದೆಗೆದುಕೊಳ್ಳಬೇಕೆಂದೂ, ...ಧನದಲ್ಲಿರಿಸಿರುವ ಎಲ್ಲರನ್ನೂ ಬಿಡುಗಡೆ ...ಡಬೇಕೆಂದೂ, ಕಾರ್ಮಿಕರಿಗೆ ಸಲ್ಲಬೇಕಾಗಿರುವ ...ನ್ನೂ ಸಲ್ಲಿಸಬೇಕೆಂದೂ ಈ ಮೂಲಕ ಒತ್ತಾಯಿಸುತ್ತೇನೆ.

- ಬಿ.ವಿ.ಕಕ್ಕಿಲ್ಲಾಯ, ಮಂಗಳೂರು.

ಮಂಗಳೂರು ವಿಮಾನ ದುರಂತ

ಹಾರುಬೂದಿ ಸ್ಥಾವರದಿಂದಾಯ್ತೆ ಮಾರಣ ಹೋಮ?

ಮಂಗಳೂರಲ್ಲಾದ ಘನಘೋರ ವಿಮಾನ ದುರಂತಕ್ಕೆ ಕಾರಣವೇನು? ಬಜ್ಪೆ ವಿಮಾನ ನಿಲ್ದಾಣದ ಪಕ್ಕದ ಕಣಿವೆಯಲ್ಲಾದ ಮಾರಣಹೋಮದ ಬಗ್ಗೆ ಒಬ್ಬೊಬ್ಬರು ಒಂದೊಂದು ವಾದ-ವಿಶ್ಲೇಷಣೆಗೆ ಇಳಿದಿದ್ದಾರೆ. ಕೆಲವರು ತಾಂತ್ರಿಕ ತೊಂದರೆಯಿಂದ ವಿಮಾನ ಪತನವಾಯಿತು ಎಂದು ಹೇಳುತ್ತಿದ್ದರೆ... ಇಲ್ಲಲ್ಲ ಈ ದುರಂತಕ್ಕೆ ಪರಿಸರ ಸಮಸ್ಯೆಯೇ ಕಾರಣವೆಂದು, ಇನ್ನೂ ಕೆಲವರು ವಾದ ಮಂಡಿಸುತ್ತಿದ್ದಾರೆ. ಪರಿಸರ ಉಪದ್ರವದಿಂದಲೇ ವಿಮಾನ ತಾಂತ್ರಿಕ ತೊಂದರೆಗೆ ಸಿಲುಕಿ ಅನ್ಯಾಯ ವಾಗಿ 158 ಮಂದಿ ನಿಷ್ಪಾಪಿಗಳು ಬೂದಿಯಾಗಿ ಹೋದರೆಂಬ ಅಳಲು ಪರಿಸರವಾದಿಗಳದು.

ವಿಮಾನಯಾನ ನಿರ್ದೇಶನಾಲಯ ನೇಮಿಸಿರುವ ತನಿಖಾ ತಂಡ ಬ್ಲ್ಯಾಕ್ ಬಾಕ್ಸ್ ಹಿಡಿದುಕೊಂಡು ದುರಂತಕ್ಕೆ ಕಾರಣವಾದ ತಾಂತ್ರಿಕ ದೋಷವನ್ನಷ್ಟೇ ಪತ್ತೆಹಚ್ಚಬಹುದು. ಆದರೆ ಈ ತನಿಖಾ ವ್ಯಾಪ್ತಿಯಿಂದ ಹೊರತಾದ ಪರಿಸರ ಸಂಬಂಧಿ ಕಾರಣದಿಂದಲೇನಾದರೂ ನತದೃಷ್ಟ ವಿಮಾನದ ಪೈಲಟ್ ನಿಯಂತ್ರಣ ಕಳೆದುಕೊಂಡು ರನ್ ವೇಯಲ್ಲಿ ನಿಗದಿತ ದೂರಕ್ಕಿಂತ ಹೆಚ್ಚು ವಿಮಾನ ಓಡಿಸಿ ಗತಿಯಿಲ್ಲದೆ ಕಣಿವೆಗೆ ನುಗ್ಗಿಸಿದನಾ ಎಂಬ ಗುಮಾನಿ ಈಗ ಮೂಡಿದೆ! ಈ ಗಂಭೀರ ಅನುಮಾನಕ್ಕೆ ಎರಡು ಬಲವಾದ ಕಾರಣಗಳಿವೆ. ಒಂದು ಬಜ್ಪೆ ವಿಮಾನ ನಿಲ್ದಾಣದ ಬಳಿಯಿರುವ ಕಲ್ಲಿದ್ದಲು, ವಿದ್ಯುತ್ ಸ್ಥಾವರದಿಂದಾಗಿರುವ ಪರಿಸರ ವೈಪರೀತ್ಯ. ಇನ್ನೊಂದು ಎರಡನೇ ರನ್‌ವೇ ಹೊಂದಿರುವ ಅಪಾಯಕಾರಿ ಟೇಬಲ್ ಟಾಪ್ ರನ್‌ವೇ.

ಬಜ್ಪೆ ವಿಮಾನ ನಿಲ್ದಾಣದಿಂದ ಬರೀ ಇಪ್ಪತ್ತೇ ಕಿ.ಮೀ. ದೂರದಲ್ಲಿರುವ ಪಡುಬಿದ್ರಿ ಕಲ್ಲಿದ್ದಲು ವಿದ್ಯುತ್ ಸ್ಥಾವರ (ಹಾರುಬೂದಿ ಸ್ಥಾವರ)ದಿಂದ ಸುತ್ತಲಿನ 30 ಕಿ.ಮೀ ವ್ಯಾಪ್ತಿಯ ಹವಾಮಾನದಲ್ಲಿ ಆಗಿರುವ ಪ್ರತಿಕೂಲ ಪರಿಣಾಮಕ್ಕೆ ದುಬೈ-ಮಂಗಳೂರು ವಿಮಾನ ಆಹುತಿ ಯಾಯ್ತೆಂಬ ಚರ್ಚೆ ಈಗ ಕರಾವಳಿಯಲ್ಲಿ ನಡೆಯುತ್ತಿದೆ. ಪಡುಬಿದ್ರಿಯ ಎಲ್ಲೂರಿನಲ್ಲಿ ಈಚೆಗಷ್ಟೇ ಶುರುವಾಗಿರುವ ಹಾರುಬೂದಿ ಸ್ಥಾವರದ ಚಿಮಣಿ ಬರೋಬ್ಬರಿ ಒಂದು ಸಾವಿರ ಮೀಟರ್ ಎತ್ತರವಿದೆ. ಅಲ್ಲಿಂದ 2,000 ಅಡಿ ಮೇಲಕ್ಕೆ ಬಿಸಿಬಿಸಿ ಹೊಗೆಯಾಡುತ್ತದೆ. ತೀರಾ ಅಪಾಯ ಕಾರಿಯಾದ ಆ ಹೊಗೆಯ ತಾಪ 120 ಡಿಗ್ರಿ ಸೆಲ್ಸಿಯಸ್ ಇರುತ್ತದೆ!!



ಬರೋಬ್ಬರಿ 66 ಬಾರಿ ಬಜ್ಪೆ ನಿಲ್ದಾಣದಲ್ಲಿ ವಿಮಾನಗಳನ್ನು ಯಶಸ್ವಿಯಾಗಿ ಲ್ಯಾಂಡ್ ಮಾಡಿದ್ದ ಅನುಭವಿ ಗ್ಲುಸಿಕಾನರನ್ನು ನಾಗಾರ್ಜುನ ಹಾರುಬೂದಿ ಸ್ಥಾವರದ ಚಿಮಣಿ ಹೊಗೆ ದಿಕ್ಕೆಡಿಸಿತೇ? ವಿಮಾನ ಟಚ್‌ಡೌನ್ ಆಗುವ ಹೊತ್ತಲ್ಲಿ ನಾಗಾರ್ಜುನ ವಿದ್ಯುತ್ ಸ್ಥಾವರ ಆಹುತಿ ಪಡೆಯಿತೇ?



ಈ ಬಿಸಿಯ ಪ್ರಕೋಪ ಚಿಮಣಿಯ ಸುತ್ತಲಿನ 30 ಕಿ.ಮೀ.ತನಕ ಹರಡಿರುತ್ತದೆ. ಇಂಥ ವಾತಾವರಣ ಕೆಡಿಸುವ, ವಿಮಾನಗಳಿಗೆ ಗಂಡಾಂತರಕಾರಿಯಾದ ಉಷ್ಣಸ್ಥಾವರ ಚಿಮಣಿಗಳಿಂದ ಕನಿಷ್ಠ 30 ಕಿ.ಮೀ. ದೂರದಲ್ಲಿ ವಿಮಾನ ನಿಲ್ದಾಣಗಳಿರಬೇಕೆಂಬ ನಿಯಮವಿದೆ. ಆದರೆ ಬಜ್ಪೆ ವಿಮಾನ ನಿಲ್ದಾಣ ಮತ್ತು ಪಡುಬಿದ್ರಿ ಹಾರುಬೂದಿ ಸ್ಥಾವರ ಕೇವಲ 20 ಕಿ.ಮೀ. ಅಂತರದಲ್ಲಿವೆ. ಇಡೀ ಅವಿಭಜಿತ ದಕ್ಷಿಣ ಕನ್ನಡವೇ ಈ ಅನಾಹುತಕಾರಿ ಹಾರುಬೂದಿ ಸ್ಥಾವರದ ವಿರುದ್ಧ ತಿರುಗಿ ಬಿದ್ದಿದ್ದರೂ ವಿಮಾನ ನಿಲ್ದಾಣ ಪ್ರಾಧಿಕಾರ ಮಾತ್ರ ನಿಸ್ಸೀಮ ನಿರ್ಲಕ್ಷ್ಯದಿಂದಿತ್ತು! ನಾಗಾರ್ಜುನ ಉಷ್ಣ ವಿದ್ಯುತ್ ಸ್ಥಾವರದ ಬಗ್ಗೆ ಏಕೆ ವಿಮಾನ ನಿಲ್ದಾಣ ಪ್ರಾಧಿಕಾರ ಉದಾಸೀನ ತಳೆದಿತ್ತೆಂಬುದು ಇವತ್ತಿಗೂ ನಿಗೂಢ. ಪರ್ಯಾವರ್ಣ ಪಂಡಿತರ ಪ್ರಮಾದಕ್ಕಾಗಿ ಅಮಾಯಕ ಜೀವಗಳು ಬಲಿಯಾದವೇ?

ಕಳೆದ ಕೆಲವು ದಿನಗಳಿಂದ ಎಲ್ಲೂರಿನ (ಪಡುಬಿದ್ರಿ) ಹಾರುಬೂದಿ ಸ್ಥಾವರದ ಚಿಮಣಿಯಲ್ಲಿ ವಿಪರೀತ ಹೊಗೆಯಾಡಲಾರಂಭಿಸಿತ್ತು! ಹೀಗಾಗಿ ಈಗೀಗ ಈ ಬಿಸಿ ಹೊಗೆಯ ಉಪಟಳಕ್ಕೆ ಬೆದರಿದ ವಿಮಾನಗಳು ವಾಯುಮಾರ್ಗವನ್ನೇ ಬದಲಿಸಿಕೊಂಡು ಬಿಟ್ಟಿದ್ದವು. ಹೀಗೆ ಮಾರ್ಗ ಬದಲಿಸಿ ಕೊಳ್ಳಲು ಸಂಬಂಧಿಸಿದ ಪ್ರಾಧಿಕಾರದ ಪರವಾನಗಿ ಇರಲಿಲ್ಲ, ಪೈಲಟ್‌ಗಳು ದಿಢೀರ್ ಎಂದು ಮಾರ್ಗ ಬದಲಿಸುವುದು ತುಂಬ ರಿಸ್ಕ್; ನೂರಾರು ಜೀವಗಳನ್ನಿಟ್ಟುಕೊಂಡು ಸಾವಿನೊಂದಿಗೆ ಪೈಲಟ್ ಆಡುವ ಸರಸವಿದು. ಇಂಥ ಸಂದರ್ಭದಲ್ಲಿ ಅನಾಹುತವಾಗುವುದೇ ಹೆಚ್ಚು, ಹಾಗೇ ಆಯ್ತಾ ಬಜ್ಪೆ ನಿಲ್ದಾಣಕ್ಕೆ ಬರುತ್ತಿದ್ದ ಪೈಲಟ್ ಗ್ಲುಸಿಕಾರ ಏರ್ ಇಂಡಿಯಾ ವಿಮಾನಕ್ಕೆ? ಬರೋಬ್ಬರಿ 66 ಬಾರಿ ಬಜ್ಪೆ ನಿಲ್ದಾಣದಲ್ಲಿ ವಿಮಾನಗಳನ್ನು ಯಶಸ್ವಿಯಾಗಿ ಲ್ಯಾಂಡ್ ಮಾಡಿದ್ದ ಅನುಭವಿ ಗ್ಲುಸಿಕಾನರನ್ನು ನಾಗಾರ್ಜುನಾ ಹಾರುಬೂದಿ ಸ್ಥಾವರದ ಚಿಮಣಿ ಹೊಗೆ ದಿಕ್ಕೆಡಿಸಿತೇ? ವಿಮಾನ ಟಚ್ ಡೌನ್ ಆಗುವ ಹೊತ್ತಲ್ಲಿ ನಾಗಾ ರ್ಜುನ ವಿದ್ಯುತ್ ಸ್ಥಾವರ ಆಹುತಿ ಪಡೆಯಿತೇ?

ಹಾಗೆ ನೋಡಿದರೆ ಮಂಗ ಳೂರಿನ ಬಜ್ಪೆ ವಿಮಾನ ನಿಲ್ದಾಣವಿದೆಯಲ್ಲ ಅದು ಇಂಟರ್‌ನ್ಯಾಷನಲ್ ಏರ್ ಪೋರ್ಟ್‌ಗೆ ಪ್ರಶಸ್ತ ಸ್ಥಳವೇ ಅಲ್ಲ, ಪೈಲಟ್ ಆಗಿದ್ದ ದಿವಂಗತ ಪ್ರಧಾನಿ ರಾಜೀವ್ ಗಾಂಧಿಯಂತ ರಾಜೀವ್ ಗಾಂಧಿಯೇ ಗುಡ್ಡ ಕಣಿವೆಗಳ ಹಸಿರಿನ ನಡುವೆ ಇರುವ ಈ ವಿಮಾನ ನಿಲ್ದಾಣ ನೋಡಿ "ತುಂಬಾ ಸುಂದರ... ಆ..ದ..ರೆ... ತುಂಬ ಅಪಾಯ ಕಾರಿ...."ಎಂದು ಉದ್ಗರಿಸಿ ದ್ದರಂತೆ. ಮಂಗಳೂರು ವಿಮಾನ ನಿಲ್ದಾಣವನ್ನು ಅಂತಾ ರಾಷ್ಟ್ರೀಯ ವಿಮಾನ ನಿಲ್ದಾಣದ ಮಟ್ಟಕ್ಕೆ ಎತ್ತರಿಸಬೇಕೆಂಬ ಬೊಬ್ಬೆ ಕೆಲ ವರ್ಷದ ಹಿಂದೆದ್ದಾಗ ಪರಿಸರ ವಾದಿಗಳು, ವಿಚಾರವಂತರು, ವಿರೋಧ ವ್ಯಕ್ತಪಡಿಸಿದ್ದರು.

ಒಂದಿಷ್ಟು ನೈಸರ್ಗಿಕ, ಭೌಗೋಳಿಕ, ತಾಂತ್ರಿಕ ಮತ್ತು ಮೂಲಭೂತ ಸೌಕರ್ಯಗಳ ಕಾರಣಕ್ಕೆ ಬಜ್ಪೆ ವಿಮಾನ ನಿಲ್ದಾಣ ಇಂಟರ್‌ನ್ಯಾಷನಲ್ ಏರ್ ಪೋರ್ಟ್ ಆಗುವಂಥ ಅರ್ಹತೆ-ಯೋಗ್ಯತೆ ಹೊಂದಿಲ್ಲವೆಂಬುದು ಎಂಥವರಿಗೂ ಗೊತ್ತಾಗುತ್ತೆ ನೋಡಿದಾ ಕ್ಷಣವೇ. ಹೀಗಾಗಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಈ ಬಜ್ಪೆಗೆ ಬದಲಾಗಿ ಬೇರ್‍ಯಾವುದಾದರೂ ವಿಸ್ತೃತ ಜಾಗವನ್ನು ಆ ಉದ್ದೇಶಕ್ಕೆ ಆಯ್ಕೆ ಮಾಡಲು ಸಲಹೆ ಬಂದಿತ್ತು, ಇದು ಸಾಕಷ್ಟು ಗಂಭೀರ ಚರ್ಚೆಗೂ ಒಳಪಟ್ಟಿತ್ತು. ಈಗ ಪಡುಬಿದ್ರಿಯಲ್ಲಿ ತಲೆಯೆತ್ತಿರುವ ನಾಗಾರ್ಜುನ ಹಾರುಬೂದಿ ವಿದ್ಯುತ್ ಸ್ಥಾವರವಿರುವ ಸಾವಿರಾರು ಎಕರೆ ಪ್ರದೇಶ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಮತ್ತು ರನ್‌ವೇ ನಿರ್ಮಾಣಕ್ಕೆ ತುಂಬಾ ಸೂಕ್ತ ಸ್ಥಳವೆಂಬ ಅಭಿಪ್ರಾಯವೂ ಸಾರ್ವತ್ರಿಕ ವಾಗಿ ರೂಪಿತವಾಗಿತ್ತು.

ಈ ಪ್ರಸ್ತಾಪಕ್ಕೆ ಸ್ಥಳೀಯರು ಮತ್ತು ಪರಿಸರ ಸಂಘಟನೆಗಳು ಒಪ್ಪಿದ್ದವು. ಪರಿಸರ ಮಾರಕ ಹಾರುಬೂದಿ ಸ್ಥಾವರಕ್ಕಿಂತ ಪರಿಸರಕ್ಕೆ ಅಂಥ ಹಾನಿಕಾರಕವಲ್ಲದ ಇಂಟರ್‌ನ್ಯಾಷನಲ್ ಏರ್‌ಪೋರ್ಟೇ ಬೆಟರ್ ಎಂಬ ತೀರ್ಮಾನ ಜನರದಾಗಿತ್ತು. ಆದರೆ ಕೆಲವು ರಾಜಕೀಯ, ಒಣಪ್ರತಿಷ್ಠೆಯ ಕಾರಣಕ್ಕಾಗಿ ಅಧಿಕಾರಸ್ಥ ಮಂತ್ರಿ-ಎಂಪಿ- ಎಮ್ಮೆಲ್ಲೆಗಳೇ ಈ ಟೇಬಲ್ ಟಾಪ್ ರನ್‌ವೇಯ ಬಜ್ಪೆ ಏರ್‌ಪೋರ್ಟನ್ನೇ ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಿಸುವ ಹಠಕ್ಕೆ ಬಿದ್ದು ಸಾಧಿಸಿದರು. ಈ ಟೇಬಲ್ ಟಾಪ್ ರನ್‌ವೇ ಅದೆಷ್ಟು ಅನಾಹುತಕಾರಿ ಎಂದು ಗೊತ್ತಿದ್ದೂ ಯೋಜನಾ ಪ್ರಭೃತಿಗಳು, ಆಳುವ ಖಳರೆಲ್ಲ ಒಂದಾಗಿ ಬಜ್ಪೆಯಲ್ಲಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಆರಂಭಿಸಿಯೇ ಬಿಟ್ಟರು. ಅದರ ಪರಿಣಾಮ ತುಂಬಾ ಬರ್ಬರ-ಭಯಾನಕವಾಗಿ ಮೊನ್ನೆ ಆಯ್ತಷ್ಟೇ!!



ಅನುಕೂಲತೆಯ ದೃಷ್ಟಿಯಿಂದಲೂ ಪಡುಬಿದ್ರಿಯೇ ಬಜ್ಪೆಗಿಂತ ಸೂಕ್ತ ಸ್ಥಳವಾಗಿತ್ತು, ರಾಷ್ಟ್ರೀಯ ಹೆದ್ದಾರಿ 17ಕ್ಕೆ ಹೊಂದಿಕೊಂಡಿರುವ ಪಡುಬಿದ್ರಿ ಕರಾವಳಿಯ ಮೂರು ಜಿಲ್ಲೆ ಮತ್ತು ಒಳನಾಡಿನ ಜಿಲ್ಲೆಗಳಿಗೆ ಸುಲಭ ಸಂಪರ್ಕ ಒದಗಿಸುತ್ತಿತ್ತು, ತದ್ವಿರುದ್ಧವಾಗಿ ಬಜ್ಪೆ ಏರ್ ಪೋರ್ಟ್ ರಸ್ತೆ ಅನಾನುಕೂಲಕರ ಅಷ್ಟೇ ಅಪಾಯಕರವೂ ಹೌದು! ಈಗೀಗಂತೂ ಬಜ್ಪೆ ವಿಮಾನ ನಿಲ್ದಾಣದ ಸುತ್ತ ನಾಯಿಕೊಡೆಗಳಂತೆ ತಲೆಯೆತ್ತುತ್ತಿರುವ ಗಗನಚುಂಬಿ ಕಟ್ಟಡಗಳಿಂದ ನಾಗರಿಕ ವಿಮಾನಗಳು ಗಂಡಾಂತರಕ್ಕೆ ಸಿಲುಕುವಂತಾಗಿದೆ! ಈ ಬೃಹತ್ ಬಿಲ್ಡಿಂಗ್‌ಗಳಿಗೆ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ನಿರಾಕ್ಷೇಪಣಾ ಪತ್ರಗಳಲ್ಲಿ ವಿಮಾನ ನಿಲ್ದಾಣ 20 ಕಿ.ಮೀ ಸರಹದ್ದಿನಲ್ಲಿ ಕಟ್ಟಡ ಕಟ್ಟುವುದಿದ್ದರೆ ವಾಯುಸಾರಿಗೆ ನಿಯಂತ್ರಣ (ಎಟಿಸಿ) ಅಧಿಕಾರಿಗಳಿಂದ ಎನ್‌ಓಸಿ ಪಡೆಯಬೇಕೆಂಬ ಕಟ್ಟುನಿಟ್ಟಿನ ರೂಲ್ಸ್ ಇದೆ.

ಲೋಕಾಯುಕ್ತ ವರದಿಯೇ ಹೇಳುವಂತೆ ಮಂಗಳೂರಲ್ಲಿ ಕನಿಷ್ಠ 60 ಗಗನಚುಂಬಿ ಕಟ್ಟಡಗಳಿಗೆ ಕಾರ್ಪೋರೇಷನ್ ಪರವಾನಗಿ ಇಲ್ಲ! ನಿಯಮ ಉಲ್ಲಂಘಿಸಿ ನಿರ್ಮಾಣ ಆಗಿರುವ ಈ ಕಟ್ಟಡಗಳಿಗೆ ಎಟಿಸಿ ಎನ್‌ಓಸಿ ಮೊದಲೇ ಇಲ್ಲ!! ವಾಯುಮಾರ್ಗದಲ್ಲಿ ಎತ್ತರದ ಕಟ್ಟಡಗಳಿದ್ದರೆ ವಿಮಾನ ಟೇಕಾಫ್ ಹಾಗೂ ಲ್ಯಾಂಡಿಂಗ್ ಆಗುವಾಗ ಪೈಲಟ್‌ಗಳ ದಿಕ್ಕು ತಪ್ಪಿಸುತ್ತವೆ. ಹತ್ತಿರದಲ್ಲಿ ಜನ ವಸತಿಯಿದ್ದರೆ ಹಕ್ಕಿ-ಪಕ್ಷಿಗಳೂ ಹಾರಾಡುತ್ತಿರುತ್ತವೆ. ಇದರಿಂದ ವಿಮಾನ ಅನಾಹುತಕ್ಕೆ ಸಿಲುಕುವ ಸಾಧ್ಯತೆಯಿರುತ್ತವೆ.

ಎರಡನೇ ರನ್‌ವೇ ನಿರ್ಮಾಣದ ವಿರುದ್ಧ ಲಿಯೋ ಸಲ್ದಾನಾ ನೇತೃತ್ವದ ಪರಿಸರ ಬೆಂಬಲ ಬಳಗ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿದೆ. ಈ ಪಿಐಎಲ್ ಮತ್ತು ಈಗಾಗಿ ರುವ ದೊಡ್ಡ ಅನಾಹುತ ಮತ್ತು ಬಜ್ಪೆ ವಿಮಾನ ನಿಲ್ದಾಣದ ಡಿಮೆರಿಟ್ಸ್‌ಗಳನ್ನೆಲ್ಲ ಇನ್ನಾದರೂ ನಾಗರಿಕ ವಿಮಾನಯಾನ ನಿರ್ದೇಶನಾಲಯ ಗಂಭೀರವಾಗಿ ಪರಿಗಣಿಸಬೇಕಿದೆ. ನಾಗರಿಕರ ಜೀವದ ಪ್ರಶ್ನೆ ಇದಾಗಿರುವುದರಿಂದ ಬಜ್ಪೆ ವಿಮಾನ ನಿಲ್ದಾಣವನ್ನೇ ಶಿಫ್ಟ್ ಮಾಡದೇ ಗತ್ಯಂತರವೇ ಇಲ್ಲ.

ಸ್ಥಳಾಂತರ ದುಬಾರಿಯೆಂದು ಕಡೆಗಣಿಸಿದರೆ ಅದಕ್ಕಿಂತಲೂ ಅಮೂಲ್ಯ ಜೀವಹಾನಿ ಆಗುವುದು ಖಂಡಿತ!! ಪುಢಾರಿಗಳು ಇನ್ನಾದರೂ ಒಣ ಪ್ರತಿಷ್ಠೆ ಬಿಟ್ಟು ಬಜ್ಪೆಯಿಂದ ವಿಮಾನ ನಿಲ್ದಾಣ ಎತ್ತಂಗಡಿ ಮಾಡಲು ಮನಸ್ಸು ಮಾಡುವರಾ?

• ನಹುಶ

ಇರಾನಿನ ಸ್ವರ್ಗದ ಮಕ್ಕಳು ಇಂಡಿಯಾದ ನರಕ ಕಂಡ ಕತೆ...



ನೀವು ಟೈಟಾನಿಕ್, ಜುರಾಸಿಕ್ ಪಾರ್ಕ್, ಲಾಸ್ಟ್ ವರ್ಲ್ಡ್, ಗಾಡ್ಜಿಲ್ಲಾ, ಅವತಾರ್‌ನಂತಹ ಸಿನಿಮಾಗಳನ್ನು ನೋಡಿರುತ್ತೀರಿ. ದೊಡ್ಡ ಪರದೆಯ ಮೇಲೆ ಈ ಚಿತ್ರಗಳು ಬೆರಗು ಹುಟ್ಟಿಸುವುದು ನಿಜ. ಈ ತರಹದ ದೊಡ್ಡ ಚಿತ್ರಗಳನ್ನು ನೋಡಿಯಾದ ಮೇಲೆ, ಅಷ್ಟೇ ದೊಡ್ಡ ಪ್ರಮಾಣದಲ್ಲಿ ಈ ಚಿತ್ರಗಳ ತಯಾರಿಕೆಗೆ ಸುರಿಯಲಾದ ದುಡ್ಡಿನ ಬಗ್ಗೆಯೂ ಚರ್ಚೆಗಳು ನಡೆಯುತ್ತವೆ. ಮಿಲಿಯನ್, ಟ್ರಿಲಿಯನ್ ಡಾಲರ್, ಪೌಂಡ್‌ಗಳನ್ನು ಇಂಡಿಯಾದ ರೂಪಾಯಿಗಳಲ್ಲಿ, ಪೈಸೆಗಳಲ್ಲಿ ಲೆಕ್ಕಹಾಕಿ ನಂತರ ಬರುವ ಹತ್ತುಹದಿನೈದು ಸೆಂಟಿಮೀಟರಿನಷ್ಟು ಉದ್ದದ ಅಂಕಿಗಳನ್ನು ನೋಡಿ ನಾವೇ ಬೆಕ್ಕಸಬೆರಗಾಗುತ್ತೇವೆ.

ಇಂತಹ ಪರಿಸ್ಥಿತಿಯಲ್ಲಿ ಇವತ್ತು ಮುಕ್ಕಾಲು ಕೋಟಿ ರೂಪಾಯಿ ದುಡ್ಡಿನಲ್ಲಿ ಚಿತ್ರವೊಂದನ್ನು ಹೆಣೆದು ಆಸ್ಕರ್ ಕದ ಬಡಿಯಬಹುದೇ ಎಂದು ಬಾಲಿವುಡ್‌ನ ಧೀರರನ್ನು ಯಾರಾದರೂ ಕೇಳಿದರೆ, ಅಂತಹವರನ್ನು ಮುಲಾಜಿಲ್ಲದೆ ಬಾಲಿವುಡ್‌ನ ಬಣ್ಣದ ಜನ ಮಾನಸಿಕ ರೋಗಿಗಳ ಆಸ್ಪತ್ರೆಗೆ ಸೇರಿಸಿಬಿಡಬಹುದು. ಇವತ್ತು ಬಾಲಿವುಡ್‌ನ ಚಿತ್ರವೊಂದರ ಮುಹೂರ್ತ, ಪತ್ರಕರ್ತರಿಗೆ ಕೊಡಿಸುವ ಪಾರ್ಟಿ, ಚಿತ್ರದ ಬಿಡುಗಡೆಗೂ ಮುನ್ನ ಇಟ್ಟುಕೊಳ್ಳುವ ಪ್ರೀಮಿಯರ್ ಷೋ, ಚಿತ್ರದ ವಾಲ್‌ಪೋಸ್ಟರಿಗೆಂದು ಸುರಿ ಯುವ ದುಡ್ಡು ಹಲವು ಕೋಟಿಗಳಲ್ಲಿ ಖರ್ಚಿನ ಲೆಕ್ಕಕ್ಕೆ ಜಮೆಯಾಗುತ್ತವೆ. ಆದರೆ 1,80,000 ಅಮೆರಿಕನ್ ಡಾಲರ್‌ನಲ್ಲಿ ತಯಾರಾದ ಚಿತ್ರವೊಂದು ಈ ಸಿನಿಮಾ ಜಗತ್ತು ಯಾವತ್ತೂ ಕೇಳಿರದ ಮಜೀದ್


ಇರಾನಿ ಚಿತ್ರದ ದೃಶ್ಯ

ಮಜೀದಿ ಎಂಬ ಹೆಸರಿನ ಇರಾನ್ ದೇಶದ ನಿರ್ದೇಶಕನೊಬ್ಬನನ್ನು ಹಾಲಿವುಡ್‌ನ ಸ್ಟೀವನ್ ಸ್ಪಿಲ್‌ಬರ್ಗ್, ಜೇಮ್ಸ್ ಕ್ಯಾಮೆರೋನ್‌ರಂತಹ ದಿಗ್ಗಜರ ಅಕ್ಕಪಕ್ಕವೇ ಬಂದು ನಿಲ್ಲುವಂತೆ ಮಾಡುತ್ತದೆ. 1997ರಲ್ಲಿ ಮಜೀದಿ ನಿರ್ದೇಶಿಸಿದ **Children of Heaven (Bacheha ye Aseman)** ಎಂಬ ಹೆಸರಿನ ಚಿತ್ರ ಅವನನ್ನು ಆಸ್ಕರ್‌ವರೆಗೂ ತಂದು ಮುಟ್ಟಿಸುತ್ತದೆ. ಈ ಚಿತ್ರ ತಂದುಕೊಟ್ಟ ಲಾಭ 9,30,000 ಅಮೆರಿಕನ್ ಡಾಲರ್, ಬಾಲಿವುಡ್‌ನ ದುಡ್ಡಿನ ಜನಕ್ಕೆ ಇದು ಅಂತಹ ದೊಡ್ಡ ದುಡ್ಡೇನಲ್ಲ. ಆದರೆ ಈ ಚಿತ್ರ ಇವತ್ತು ಮಜೀದಿಯನ್ನು ಅರ್ಧ ಗ್ಲೋಬಿಗೆ ಪರಿಚಯ ಮಾಡಿಕೊಟ್ಟಿದೆ. 1998ರ ಆಸ್ಕರ್‌ನ ವಿದೇಶಿ ಭಾಷಾ ಪ್ರಶಸ್ತಿಯ ವಿಭಾಗಕ್ಕೆ ನಾಮ ಕರಣಗೊಳ್ಳುವ **Children of Heaven**ಗೆ ಕೂದ ಲೆಳೆಯ ಅಂತರದಲ್ಲಿ ಆಸ್ಕರ್ ತಪ್ಪಿಹೋಗುತ್ತದೆ. **Children of Heaven**ಗೆ ಆಸ್ಕರ್ ಸಿಗಲಿ ಎಂದು ಪ್ರಾರ್ಥಿಸಿದವರು, ಅದು ಸಿಗದಿದ್ದಾಗ ತಮ್ಮೊಳಗೆ ದುಃಖವನ್ನು ಅದುಮಿಟ್ಟುಕೊಂಡು ನಂತರ ಆ ಚಿತ್ರದ ಜೊತೆ ಪೈಪೋಟಿಗಿಳಿದು ಆಸ್ಕರ್ ಗಿಟ್ಟಿಸಿಕೊಂಡ **Life is beautiful** ನೋಡಿ ಹಗುರಾದದ್ದು ನಿಜ.

ಇರಾನ್ ಎಂದರೆ ತೈಲ, ದುಡ್ಡಿನ ಥೈಲಿ, ಲಷ್ಕರಿ ಬೂಟು ಬಂದೂಕುಗಳ ಸದ್ದು, ಲೋಹದ ಹಕ್ಕಿಗಳು ಉದುರಿಬೀಳುವ ಕದನ ಭೂಮಿ, ಇರಾಕ್ ಜೊತೆ ಜಿದ್ದಿಗೆ ಬಿದ್ದು ತಾನೇ ಸೃಷ್ಟಿಸಿಕೊಂಡಿರುವ ಅಮೆರಿಕಾದ ತೊಡೆ ಸಂದಿಯ ತುರಿಕೆಗೆ ಉಪ್ಪು ಸವರುತ್ತಿರುವ ದೇಶ, ಸರ್ವಾಧಿಕಾರಿಗಳ ಅಟ್ಟಹಾಸದ ರುದ್ರಭೂಮಿಯೆಂದೆಲ್ಲ ತಿಳಿದಿದ್ದ ಜಗತ್ತಿಗೆ ಮಜೀದಿಯ **Children of Heaven** ಇರಾನ್ ದೇಶದ ಬೇರೊಂದು ಮಗ್ಗುಲನ್ನೆ ಪರಿಚಯಿಸಿತು. ಅದು ಇರಾನಿನ ಟೆಹ್ರಾನ್ ಇರಬಹುದು ಇಂಡಿಯಾದ ಮುಂಬೈನ ಕೊಳಗೇರಿ ಇರಬಹುದು, ಬಾಲ್ಯದ ಅಸಹಾಯಕತೆ ಮತ್ತು ಅಪಮಾನದ ತಲ್ಲಣಗಳು ಮಾತ್ರ ಎಲ್ಲ ದೇಶದ ಎಲ್ಲ ಮಗ್ಗಿನಲ್ಲೂ ಕಾಲ, ದೇಶವನ್ನು ಮೀರಿ ಒಂದೇ ಬಗೆಯಲ್ಲಿರುತ್ತವೆ ಎಂಬುದನ್ನು ಈ ಚಿತ್ರದ ಇಬ್ಬರು ಪುಟ್ಟ ಮಕ್ಕಳು ನಿರೂಪಿಸುತ್ತಾರೆ.

ಸ್ವರ್ಗದ ಮಕ್ಕಳ ಕೋಮಲ ಜಗತ್ತಿನ ಕತೆ...

ತನ್ನ ತಂಗಿ ಝೂರಾಳ ಹರಿದ ಶೂ ಹೊಲಿಸಿಕೊಂಡು ಮನೆಗೆ ತರಕಾರಿ ತೆಗೆದುಕೊಳ್ಳಲೆಂದು ಸಣ್ಣ ತರಕಾರಿ ಅಂಗಡಿಯೊಂದಕ್ಕೆ ಹೋಗುವ ಅಲಿ, ಪೇಪರಿನಲ್ಲಿ ಸುತ್ತಿಟ್ಟ ಶೂ ಅನ್ನು ಅಲ್ಲೇ ತರಕಾರಿ ಪೆಟ್ಟಿಗೆಗಳ ಸಂದಿಯಲ್ಲಿಟ್ಟು ಮನೆಗೆ ಬೇಕಾದ ತರಕಾರಿ ತೆಗೆದುಕೊಳ್ಳುತ್ತಿರುತ್ತಾನೆ. ಅದೇ ಹೊತ್ತಿಗೆ ಬೀದಿ ಕಸ ಎತ್ತುವ ಜಾಡಮಾಲಿಯೊಬ್ಬ ತರಕಾರಿ ಪೆಟ್ಟಿಗೆಗಳ ಸಂದಿಯಲ್ಲಿ ಪೇಪರಿನಲ್ಲಿ ಸುತ್ತಿಟ್ಟಿದ್ದ ಶೂ ಅನ್ನು ಅಂಗಡಿಯವನು ತೆಗೆದಿರಿಸಿರುವ ಕಸದ ಪೊಟ್ಟಣವೆಂದು ತಿಳಿದು ತನ್ನ ತಳ್ಳುಗಾಡಿಯೊಳಗೆ ಕಸದ ಜೊತೆ ತುಂಬಿಕೊಂಡು ಹೊರಟುಬಿಡುತ್ತಾನೆ. ತರಕಾರಿ ಕೊಂಡ ಅಲಿ ಪೆಟ್ಟಿಗೆಗಳ ಸಂದಿಯಲ್ಲಿ ಇಟ್ಟಿದ್ದ ತನ್ನ ತಂಗಿಯ ಶೂ ಕಾಣದೆ ದಿಕ್ಕೆಡುತ್ತಾನೆ; ಒತ್ತರಿಸಿಕೊಂಡು ಬರುವ ಅಳುವನ್ನು ತಡೆದು ಶೂ ಹುಡುಕುತ್ತ ಅಲ್ಲಿದ್ದ ತರಕಾರಿ ಪೆಟ್ಟಿಗೆ, ಚೀಲಗಳನ್ನೆಲ್ಲ ಬೀಳಿಸಿ ಅಂಗಡಿ ಮಾಲಿಕನಿಂದ ಬೈಸಿಕೊಂಡು ಹತಾಶನಾಗಿ ಮನೆ ಸೇರುತ್ತಾನೆ. ಮನೆಗೆ ತಲುಪಿದ ಮೇಲೆ ತನ್ನ ಶೂ ಎಲ್ಲಿ ಎನ್ನುವ ತಂಗಿಗೆ ಮುಖಕೊಟ್ಟು ಮಾತನಾಡಲಾಗದೆ ಬಿಕ್ಕತೊಡಗುತ್ತಾನೆ. ತರಕಾರಿ ಅಂಗಡಿಯಲ್ಲಿಟ್ಟ ಶೂ ಅದು ಹೇಗೋ ಏನೋ ಕಳೆದುಹೋಗಿದೆ ಎನ್ನುವ ಅಲಿ ಮತ್ತೆ ಆ ಅಂಗಡಿಯತ್ತ ಹೋಗಿ ಹುಡುಕಿಕೊಂಡು ಬರುವುದಾಗಿ ಹೇಳುತ್ತಾನೆ. ಶೂ ಇಲ್ಲದೆ ನಾಳೆ ಶಾಲೆಗೆ ಹೇಗೆ ಹೋಗಲಿ? ಎನ್ನುವ ಝೂರಾಳ ಪ್ರಶ್ನೆ ಅಲಿಯನ್ನು ಇನ್ನಿಲ್ಲದಂತೆ ಇರಿಯತೊಡಗುತ್ತದೆ. ಮತ್ತದೇ ತರಕಾರಿ ಅಂಗಡಿ ಬಳಿ ಬರುವ ಅಲಿ ತನ್ನ ಯಾತನೆಯೊಂದಿಗೆ ಮತ್ತೆ ಅಲ್ಲಿ ಶೂ ಹುಡುಕಲು ಯತ್ನಿಸಿ ಅಂಗಡಿ ಮಾಲಿಕನ ಕಣ್ಣಿಗೆಬಿದ್ದು ಬೈಸಿಕೊಂಡು ಬೇರೆ ದಾರಿ ಕಾಣದೆ ಹೊರಡುತ್ತಾನೆ.

ಅಸಹಾಯಕತೆ ಮತ್ತು ಹತಾಶೆಗೆ ಸಿಕ್ಕಿ ತತ್ತರಿಸಿಹೋಗುವ ಅಲಿ ತನ್ನ ನಿಜವಾದ ಬದುಕಿನ ಸಹಜ ಜಗತ್ತಿನಿಂದ ದೂರವಾಗತೊಡಗುತ್ತಾನೆ. ಮನೆ ತಲುಪುವ ಅಲಿ ಶೂ ಕಳೆದು ಹೋಯಿತೆಂದು ಅಪ್ಪನಿಗೆ ಹೇಳಬೇಡ, ಅವರು ಕಷ್ಟದಲ್ಲಿದ್ದಾರೆ, ಶೂ ಕೊಡಿಸುವಷ್ಟು ದುಡ್ಡು ಅವರ ಬಳಿ ಇಲ್ಲ, ಹೀಗಾಗಿ ಬೆಳಗಿನ ಶಾಲೆಗೆ ತನ್ನ ಶೂ ಹಾಕಿಕೊಂಡು ಹೋಗುವಂತೆ ನಂತರ ಮಧ್ಯಾಹ್ನ ಹಾದಿ ಮಧ್ಯೆ ಅದೇ ಶೂ ಅನ್ನು ತಾನು ತೊಟ್ಟು ಶಾಲೆಗೆ ಹೋಗುವುದಾಗಿ ಹೇಳಿ ತನ್ನ ತಂಗಿ ಝೂರಾಳನ್ನು ಒಪ್ಪಿಸುತ್ತಾನೆ. ಮುಂಜಾನೆ ಶಾಲೆಗೆ ಅಲಿಯ ದೊಡ್ಡ ಸೈಜಿನ ಶೂ ತೊಟ್ಟು ಹೋಗುವ ಝೂರಾ, ಶಾಲೆಬಿಟ್ಟ ಕೂಡಲೇ ಓಣಿಯೊಂದರಲ್ಲಿ ತನಗಾಗಿ ಕಾದಿರುವ ತನ್ನ ಅಣ್ಣ ಅಲಿಗೆ ಶೂ ಕೊಡಲೆಂದು ಓಡೋಡಿ ಬರುತ್ತಾಳೆ. ಹೀಗೆ ಶೂ ವಿನಿಮಯ ಮಾಡಿಕೊಂಡು ಶಾಲೆಗೆ ಹೋಗಿಬರುವುದು ಇಬ್ಬರಿಗೂ ರೂಢಿಯಾಗುತ್ತದೆ.

ಶಾಲೆಗೆ ರಜೆ ಬಂದಾಗ ಅಲಿ ಗೆಳೆಯರೊಂದಿಗೆ ಆಟವಾಡುವುದನ್ನು ಬಿಟ್ಟು ತನ್ನ ತಂದೆಯೊಂದಿಗೆ ಟೆಹ್ರಾನಿನ ಶ್ರೀಮಂತರ ಬಡಾವಣೆಗಳಲ್ಲಿ ಅವರ ಮನೆಯ ಅಂಗಳದ ಹೂ ತೋಟಕ್ಕೆ ಔಷಧಿ ಸಿಂಪಡಿಸಿ ಸ್ವಚ್ಛಮಾಡುವ ಕೆಲಸಕ್ಕೆ ಹೋಗುತ್ತಾನೆ. ಹೆಚ್ಚು ದುಡ್ಡು ಸಂಪಾದಿಸಿದ ದಿನ ಖುಷಿಯಲ್ಲಿ ನಿನಗೇನು ಬೇಕು ಎಂದು ಅಲಿಯನ್ನು ಅವನ ತಂದೆ ಕೇಳುತ್ತಾನೆ. ನನಗೇನು ಬೇಡ, ಝೂರಾಳ ಶೂ ಬಹಳ ಹಳತಾಗಿ ಹರಿದುಹೋಗಿದೆ, ಅವಳಿಗೊಂದು ಹೊಸ ಶೂ ಕೊಡಿಸಿ ಎಂದು ಕೇಳಿಕೊಳ್ಳುತ್ತಾನೆ. ಆಗಲಿ, ಎಂದು ಹೇಳುವ ಅವನ ತಂದೆ ಅಲಿಯನ್ನು ಕೂರಿಸಿಕೊಂಡು


ನಿರ್ದೇಶಕ ಮಜೀದ್

ಸೈಕಲ್‌ನಲ್ಲಿ ಹೋಗುವಾಗ ಸಣ್ಣ ಅಪಘಾತವಾಗಿ ಝೂರಾಳಿಗೆ ಶೂ ಖರೀದಿಸುವ ಆಸೆ ಅಲ್ಲೆ ಕಮರಿಹೋಗಿ ಗಾಯಗೊಂಡು ಅವರಿಬ್ಬರು ಮನೆ ಸೇರುತ್ತಾರೆ.

ಮರುದಿನ ಅಲಿ ಶಾಲೆಗೆ ಹೋದಾಗ ನಾಲ್ಕು ಕಿಲೋಮೀಟರ್ ಓಟದ ಸ್ಪರ್ಧೆಯ ವಿವರಗಳ ಜೊತೆಗೆ ಮೊದಲ ಎರಡು ಸ್ಥಾನಗಳನ್ನು ಪಡೆದವರಿಗೆ ಎರಡು ವಾರಗಳ ಸಮ್ಮರ್ ಕ್ಯಾಂಪಿಗೆ ಪ್ರವಾಸ ಮತ್ತು ಮೂರನೇ ಸ್ಥಾನ ಪಡೆದವರಿಗೆ ಒಂದು ಜೊತೆ ಶೂ ಬಹುಮಾನವಾಗಿ ನೀಡಲಾಗುವ ವಿವರಗಳನ್ನು ನೋಟಿಸ್ ಬೋರ್ಡಿನಲ್ಲಿ ಬರೆಯಲಾಗಿರುತ್ತದೆ. ಮೂರನೇ ಬಹುಮಾನ ಶೂ ಎಂದು ನೋಡುವ ಅಲಿ ಆ ಓಟದ ಸ್ಪರ್ಧೆಗೆ ತನ್ನನ್ನು ಪರಿಗಣಿಸು ವಂತೆ ಶಾಲೆಯ ಆವರಣದಲ್ಲಿಯೇ ಓಡಿ ತೋರಿಸಿ ತಾನು ಗೆದ್ದೆಗೆಲ್ಲುವೆನೆಂದು ಹೇಳಿ ಕಾಡಿಬೇಡಿ ಆ ಸ್ಪರ್ಧೆಗೆ ತನ್ನ ಹೆಸರು ಬರೆಸುತ್ತಾನೆ.

ಓಟದ ಸ್ಪರ್ಧೆ ಪ್ರಾರಂಭವಾದಾಗ ಅಲಿ ಆದಷ್ಟು ಮೂರನೆಯವನಾಗಿ ಓಡುತ್ತಾ ಆ ಸ್ಥಾನವನ್ನು ಬಹುದೂರ ಕಾಯ್ದುಕೊಂಡು ಒಂದೇ ವೇಗದಲ್ಲಿ ಓಡುತ್ತಿರುತ್ತಾನೆ. ಹಾಗೆ ಅವನು ಬೇರೇನೂ ಕಾಣದವನಂತೆ ಓಡುತ್ತಿರುವಾಗಲೇ 'ನನಗೆ ನನ್ನ ಶೂ ಬೇಕು' ಎಂಧು ಹೇಳುವ ಝೂರಾಳ ದನಿ ಕಿವಿಗೆ ನಾಟುತ್ತಿರುತ್ತದೆ. ಓಡುವ ಧಾವಂತದಲ್ಲಿರುವ ಅಲಿಗೆ ತನ್ನ ಕಣ್ಣೆದುರೇ ಮೂರನೇ ಸ್ಥಾನಕ್ಕಾಗಿ ಪೈಪೋಟಿ ನೀಡಲು ಒಂದಿಬ್ಬರು ಬರುವುದು ದಿಗಿಲು ಹುಟ್ಟಿಸುತ್ತದೆ. ಮೂರನೇ ಸ್ಥಾನ ತಪ್ಪಿಹೋದರೆ...

ಅಲಿ ಕಣ್ಣುಮುಚ್ಚಿಕೊಂಡು ಓಡಲು ಶುರುಮಾಡುತ್ತಾನೆ. ಹಾಗೆ ಓಡುತ್ತಲೇ ಮೂರನೇ ಸ್ಥಾನಕ್ಕೆ ಪೈಪೋಟಿ ಹೆಚ್ಚಾಗಿ ಆ ಸ್ಪರ್ಧೆಯ ಮೊದಲಿಗನಾಗಿ ಗುರಿಮುಟ್ಟುತ್ತಾನೆ. ಸಂಭ್ರಮದಿಂದ ಬೆನ್ನುತಟ್ಟಲು ಬರುವ ತನ್ನ ಮೇಷ್ಟರುಗಳಿಗೆ 'ನಾನು ಮೂರನೆಯವನ, ನಂದು ಥರ್ಡ್ ಪ್ರೈಜಾ' ಎಂದು ಕೇಳುತ್ತಾನೆ, ಅದಕ್ಕವರು ಥರ್ಡಾ? ನೀನೇ ಫಸ್ಟು ಅನ್ನುತ್ತಾರೆ. ಅಲಿ ಸೋತವನಂತೆ ಮುಖಮಾಡಿಕೊಳ್ಳುತ್ತಾನೆ. ಆ ಸೋತ ಮುಖದಲ್ಲೇ ಮನೆಗೆ ಬರುತ್ತಾನೆ, ಇವನು ಬರಿಗೈಲಿ ಬಂದದ್ದನ್ನು ಕಂಡು ಝೂರಾ ಎಲ್ಲ ಅರ್ಥವಾದವಳಂತೆ ಅವನ ಹರಿದು ಕಿತ್ತುಹೋಗಿರುವ ಶೂ ನೋಡುತ್ತ ಮನೆಯೊಳಕ್ಕೆ ಹೊರಟುಬಿಡುತ್ತಾಳೆ.

ಅಲಿ ತನ್ನ ಶೂ ಬಿಸಾಡಿ ಮನೆಯ ಮುಂದಿನ ಸಣ್ಣ ಕಾರಂಜಿಯಂತಹ ತೊಟ್ಟಿಯೊಳಗೆ ಗಾಯಗೊಂಡ ಕಾಲುಗಳನ್ನು ಇಳಿಬಿಟ್ಟು ದಣಿವಾರಿಸಿಕೊಳ್ಳುವವನಂತೆ ಕೂರುತ್ತಾನೆ. ಆ ತೊಟ್ಟಿಯೊಳಗಿದ್ದ ಕೆಂಪುಬಣ್ಣದ ಮೀನುಗಳು ಇವನ ಗಾಯಗೊಂಡ ಕಾಲುಗಳನ್ನು ಅಪ್ಪಿಕೊಂಡು ಸಂತೈಸುವಂತೆ ಕಾಲಿನ ಸುತ್ತಲೂ ಮುತ್ತಿಕೊಳ್ಳುತ್ತವೆ.


*****

ಆ ಪುಟ್ಟಮಕ್ಕಳ ಕೋಮಲ ಜಗತ್ತಿನ ಪ್ರತಿಕ್ಷಣದ ತಲ್ಲಣಗಳು **Children of Heaven** ಚಿತ್ರವನ್ನು ಜಗತ್ತಿನ ಶ್ರೇಷ್ಠ ಚಿತ್ರಗಳ ಸಾಲಿನಲ್ಲಿ ನಿಲ್ಲುವಂತೆ ಮಾಡಿಬಿಟ್ಟಿದೆ. ಈಗ ಈ ಚಿತ್ರ ಬಾಲಿವುಡ್‌ನವರ ಕೈಗೆ ಸಿಕ್ಕಿ ಚಿತ್ರಾನ್ನವಾಗಿದೆ. ಕಳೆದ ಎರಡು ವರ್ಷಗಳಿಂದಲೂ **Children of Heaven** ಚಿತ್ರದ ರಿಮೇಕ್ ಮಾಡುವುದಾಗಿ ಹೇಳಿ ಹೆದರಿಸುತ್ತಿದ್ದ ನಿರ್ದೇಶಕ ಪ್ರಿಯದರ್ಶನ್ ಕಡೆಗೂ ಈ ಚಿತ್ರವನ್ನು



ಪೇಲವವಾಗಿ ಹೆಣೆದು ಚಿಂದಿ ಮಾಡಿದ್ದಾರೆ. 88 ನಿಮಿಷಗಳಲ್ಲಿದ್ದ ಮೂಲ ಚಿತ್ರವನ್ನು ಪ್ರಿಯದರ್ಶನ್ 109 ನಿಮಿಷಗಳಿಗೆ ಹಿಗ್ಗಿಸಿದ್ದಾರೆ. ಹೆಚ್ಚಿಗೆ ತೆಗೆದುಕೊಂಡಿರುವ 21 ನಿಮಿಷಗಳಲ್ಲಿ ಏನು ಹಿಂಜಿದ್ದಾರೆಂದು ನೋಡಲು ಹೊರಟರೆ ಕಾಣುವುದು ಭಯೋತ್ಪಾದನೆ ಎಂಬ ಧಂ ಧಮಾರ್!

ತಾರೆ ಜಮೀನ್ ಪರ್ ಚಿತ್ರದಲ್ಲಿ ಗಂಭೀರವಾಗಿ ನಟಿಸಿದ್ದ ದರ್ಶಿಲ್ ಸಫಾರಿ ಎಂಬ ಹುಡುಗನನ್ನು ಅಲಿ ಪಾತ್ರದಲ್ಲಿಯೂ ಮತ್ತು ಆ ಚಿತ್ರದ ಬಮ್ ಬಮ್ ಬೋಲೇ ಎಂಬ ಜನಪ್ರಿಯ ಹಾಡಿನ ಸಾಲನ್ನು ತನ್ನ ಚಿತ್ರದ ಟೈಟಲ್ ಕಾರ್ಡಾಗಿಯೂ ಮಾಡಿಕೊಂಡರೂ ಪ್ರಿಯ ದರ್ಶನ್ ಹಾಳುಬಾವಿಗೆ ಯಾವುದೇ ಅಡೆತಡೆ ಇಲ್ಲದೆ ಸಲೀಸಾಗಿ ಈ ಚಿತ್ರವನ್ನು ತಳ್ಳಿದ್ದಾರೆ. ಸಿನಿಮಾ ಪ್ರಕಾರದಲ್ಲಿ ಅಂತರರಾಷ್ಟ್ರೀಯ ಶ್ರೇಷ್ಠತೆಗೆ ಬಂದರೆ ನಮ್ಮಲ್ಲಿ ತಯಾರಾಗುವ ಬಹುಪಾಲು ಚಿತ್ರಗಳು ಮೂರನೇ ದರ್ಜೆಯವು. ದುಷ್ಟರನ್ನು, ಕೇಡಿಗಳನ್ನು ಇಟ್ಟುಕೊಳ್ಳದೆ ಹೀರೋಗಳನ್ನು ತೋರಿಸಲು ಮತ್ತವರನ್ನು ಮೆರೆಸಲು ಸಾಧ್ಯವೇ ಇಲ್ಲ ಅನ್ನುವ ಸ್ಥಿತಿಗೆ ಇಲ್ಲಿನ ಸಿನಿಮಾಗಳು ಬಂದುಮುಟ್ಟಿವೆ. ಬದುಕಿನ ವಾಸ್ತವವನ್ನು ಅದು ಇದ್ದ ಹಾಗೆ ಸ್ವೀಕರಿಸುವುದನ್ನು ಮಕ್ಕಳಿಂದಲೂ ಕಲಿಯಲು ನಿರಾಕರಿಸುವ ಇಲ್ಲಿನ ಖಾಲಿತಲೆಗಳ ಸಿನಿಮಾ ತರ್ಕಗಳು ಹೇಗಿರುತ್ತವೆಂದರೆ: ಚಿತ್ರದುದ್ದಕ್ಕೂ ಕ್ರೌರ್ಯ, ದಬ್ಬಾಳಿಕೆ, ದೌರ್ಜನ್ಯಗಳ ಪರಾಕಾಷ್ಠೆ ಕಂಡರೂ ಅಂತ್ಯಮಾತ್ರ 'ಶುಭಂ' ಆಗಲೇಬೇಕು. ಎಳೆಯ ಮಕ್ಕಳ ಅಮಾಯಕ ಜಗತ್ತಿನ ಪುಟ್ಟ ಬದುಕನ್ನು ತೋರಿಸುವಾಗಲು ಇಲ್ಲಿನ ಸಿನಿಮಾ ತಲೆಗಳಿಗೆ ಖಳರು ಅನಿವಾರ್ಯ ಎನ್ನುವ ಸ್ಥಿತಿ ತಂದಿರುವುದನ್ನು ನೋಡಿದರೆ ಈ ರೋಗ ಅಷ್ಟು ಸುಲಭವಾಗಿ ವಾಸಿಯಾಗಲಾರದು ಅನ್ನಿಸುತ್ತದೆ.



ಆಕಸ್ಮಾತ್ **Children of Heaven** ನೋಡಿರುವವರು ಬಮ್ ಬಮ್ ಬೋಲೇ ನೋಡಿದರೆ ಪ್ರಿಯದರ್ಶನ್‌ಗೆ ಹಿಡಿಶಾಪ ಹಾಕುವುದು ಖಚಿತ. ಈ ಚಿತ್ರದ ರಿಮೇಕ್ ಹಕ್ಕುಗಳನ್ನು ಪ್ರಿಯದರ್ಶನ್‌ಗೆ ಕೊಟ್ಟಿರುವ ಮಜೀದ್ ಮಜೀದಿ ಈಗ ಬಮ್ ಬಮ್ ಬೋಲೇ ನೋಡಿ ಹೌಹಾರಿರಬಹುದು. ಸಿನಿಮಾ ಜಗತ್ತಿನ ದೊಡ್ಡ ಮಾರ್ಕೆಟ್ ಹೊಂದಿರುವ ದೊಡ್ಡ ದೇಶ ಇಂಡಿಯಾದಲ್ಲೂ ಈ ಪರಿ ಕಳಪೆ ಚಿತ್ರ ನೇಯುವುದನ್ನು ಕಂಡು ಮಜೀದ್ ಇನ್ನೆಂದೂ ಇತ್ತ ತಲೆಹಾಕಲಾರ ಅನ್ನಿಸುತ್ತೆ.


ಬಮ್ ಬಮ್ ಬೋಲೇಯಲ್ಲಿ ಪ್ರಿಯದರ್ಶನ್ ಹೊಸ ಸ್ವೆಟರ್ ತಂದು ಹರಿದು ಆ ಪುಟ್ಟ ಮಕ್ಕಳಿಗೆ ತೊಡಿಸಿ ನಂತರ ಬಡವರಂತೆ ನಟಿಸಬೇಕೆನ್ನುವ ಸೂಚನೆಗಳನ್ನು ಕೊಟ್ಟಂತೆ ಕಾಣುತ್ತದೆ. ಆ ಮಕ್ಕಳ ಮುಖದಲ್ಲಿ ಬಡತನದ ನೋವಿನ ಗೆರೆಗಳಾಗಲಿ, ನಟನೆಯ ಅಂಶಗಳಾಗಲೀ ಕಾಣದೆ ಇಡೀ ಚಿತ್ರ ಕುಂಟು ಕುದುರೆಯಂತೆ ಸವಕಲಾಗಿ ತೆವಳುತ್ತದೆ. ಇರಾನಿನ ಸ್ವರ್ಗದಲ್ಲಿ ಓಡಿದ ಅಲಿ ಇಂಡಿಯಾದ ನರಕ ಕಂಡು ಬೆಚ್ಚುತ್ತಾನೆ. ಹೆಣ್ಣಿನ ಮೇಲೆರಗುವ ಅತ್ಯಾಚಾರ, ಮುಗ್ಧಮಕ್ಕಳ ಕೈಯಲ್ಲಿ ಬಾಂಬ್ ಕೊಟ್ಟು ನಂತರ ಅದನ್ನು ಮರೆಯಲ್ಲಿ ನಿಂತು ಸಿಡಿಸುವುದು, ಪೊಲೀಸರ ವಿಚಾರಣೆ ಹೆಸರಿನ ಕ್ರೌರ್ಯ, ಮೂಲ ಚಿತ್ರದ ನೆರಳು ಸೋಕದ ಚೀಪದ ದೃಶ್ಯಗಳು, ಅನವಶ್ಯಕವಾಗಿ ತುರುಕಿದ ಮಕ್ಕಳ ಕತೆಗೆ ಹೊಂದದ ಘಟನೆಗಳು, ಅತಿ ಕೆಟ್ಟ ಸಂಗೀತ, ಸ್ಟುಡಿಯೋವೊಂದರ ಆವರಣದಲ್ಲಿ ತಾತ್ಕಾಲಿಕ ಸೆಟ್ ನಿರ್ಮಿಸಿ ಚಿತ್ರೀಕರಿಸಿರುವಂತೆ ಕಾಣುವ ಜೀವಂತಿಕೆಯಿಲ್ಲದೆ ಸೊರಗಿರುವ ದೃಶ್ಯಗಳು... ಇವೆಲ್ಲವೂ ಬಮ್ ಬಮ್ ಬೋಲೇಯನ್ನು ಯಾವ ಕಾರಣಕ್ಕೂ ಒಂದು ಸಹನೀಯ ಚಿತ್ರದ ಹೆಸರಿನಲ್ಲಿ ನೋಡಲಾಗದಂತೆ ಮಾಡಿಬಿಡುತ್ತವೆ.

* * * * *

Children of Heaven ಚಿತ್ರದ ಒರಿಜಿನಲ್ ಡಿವಿಡಿ ಸಿಕ್ಕ ಮೇಲೆ, ಮೂಲಪ್ರತಿ ಇಟ್ಟುಕೊಂಡು ಅದನ್ನು ಹತ್ತಾರು ಖಾಲಿ ಡಿವಿಡಿಗಳಲ್ಲಿ ಕಾಪಿಮಾಡಿ ತುಂಬಿಸಿ ಕಳೆದ ನಾಲ್ಕೈದು ವರ್ಷಗಳಲ್ಲಿ ನನ್ನನ್ನು ಇಷ್ಟಪಡುವ, ನಾನು ಇಷ್ಟಪಡುವ ಅನೇಕ ಗೆಳೆಯರಿಗೆ, ಜಗತ್ತಿನ ಶ್ರೇಷ್ಠ ಸಿನಿಮಾಗಳ ಕಡು ವ್ಯಾಮೋಹಿಗಳಿಗೆ ಕೊಟ್ಟು ಖುಷಿಪಟ್ಟಿದ್ದೇನೆ. ಈಚೆಗೆ ಸಿನಿಮಾದ ಕಡು ದ್ವೇಷಿಯಾದ ನನ್ನ ಆಪ್ತರೊಬ್ಬರು ಯಾವ್ಯಾವುದೋ ದೇಶದ ಸಿನಿಮಾಗಳನ್ನು ನೋಡಿ ಕೆಟ್ಟು ಇಂಡಿಯನ್ ಸಿನಿಮಾದ ಮೇಲೆ ಎಂತೆಂಥವೋ ಪ್ರಶ್ನೆಗಳನ್ನು, ತಕರಾರುಗಳನ್ನು ತೆಗೆಯುತ್ತಿದ್ದೇನೆಂದು ನನ್ನ ಮೇಲೆ ಗಂಭೀರ ಆರೋಪ ಹೊರಿಸಿದ್ದರು. ಇದೇ **Children of Heaven** ಚಿತ್ರದ ಡಿವಿಡಿಯೊಂದನ್ನು ಅವರು ನೋಡಲಿ ಎಂಬ ಸಣ್ಣ ಆಸೆಯಿಂದ ಕಳಿಸಿಕೊಟ್ಟಿದ್ದೆ. ಅವರ ಮನೆಮಂದಿಯೆಲ್ಲ ಈ ಚಿತ್ರವನ್ನು ನೋಡುತ್ತಾ ಚಿತ್ರ ಮುಗಿಯುವ ಹೊತ್ತಿಗೆ ಅವರೆಲ್ಲರ ದುಃಖದ ಕಟ್ಟೆ ಒಡೆದು ನನ್ನ ಮಿತ್ರರ ತಂದೆ 'ಓಡಿಹೋಗಿ ಆ ಹುಡುಗನಿಗೆ ಒಂದು ಜೊತೆ ಶೂ ಕೊಡಿಸಿ ಬರಬೇಕು ಅನ್ನಿಸುತ್ತಿದೆ' ಅಂದರಂತೆ. ಬಹುಶಃ ಮಜೀದ್ ಮಜೀದಿಗೆ ಇದಕ್ಕಿಂತ ದೊಡ್ಡ ಮೆಚ್ಚುಗೆ ದೊರೆತಿರಲಾರದು.

• ಕೆ.ಎಲ್. ಚಂದ್ರಶೇಖರ್ ಐಜೂರ್
chandrashekharaijoor@gmail.com

ಮದುವೆಯಾಗದೆ ವಿಧವೆಯಾದವಳ ಕೈಹಿಡಿದ ಸಮಾಜವಾದಿ



ಈ ಕಳಸಪ್ಪ ಗೌಡರು ಅದೆಷ್ಟು ಮುಗ್ಧ ಹಾಗೂ ನಿರಾಡಂಬರದ ವ್ಯಕ್ತಿಯೆಂದರೆ ಒಡಹುಟ್ಟಿದ ಅಣ್ಣನೇ ಆಸ್ತಿಯಲ್ಲಿ ವಂಚಿಸಿದಾಗ ಪ್ರಶ್ನಿಸಿರಲಿಲ್ಲ. ತನ್ನ ನಿಲುವು, ಬದುಕುಗಳು ಉನ್ನತ ಆದರ್ಶವೆಂಬಂತೆ ಎಲ್ಲೂ ಹೇಳಿಕೊಳ್ಳಲಿಲ್ಲ. ಮಲೆನಾಡಿಗರ ಸಹಜ ಸ್ವಭಾವವೆಂಬಂತೆ ತಣ್ಣಗೆ ಬದುಕಿ ಬಾಳಿದವರು ಅವರು.

ಸುಮಾರು ಐವತ್ತು ವರ್ಷಗಳ ಹಿಂದಿನ ಘಟನೆ ...ದು. ಈಗ ಯಾಕೆ ಹೇಳಬೇಕಾಯಿತೆಂಬುದನ್ನು ನಂತರ ...ಳುತ್ತೇನೆ.

ಮೂಡುಬಾಗಿಲು ಕಳಸಪ್ಪ ಗೌಡ ಹಾಗೂ ಮೂಡು...ಗಿಲು ರಾಮಪ್ಪ ಗೌಡ ಇಬ್ಬರೂ ಸೋದರರು. ...ಲೆನಾಡಿನ ಪ್ರಖ್ಯಾತ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ...ಕಪ್ಪ ಗೌಡರ ಮಕ್ಕಳು. ಆಗಿನ ತೀರ್ಥಹಳ್ಳಿ ತಾಲ್ಲೂಕೆಂದರೆ ...ತಂತ್ರ ಚಳವಳಿ, ಆ ನಂತರ ಗೋಪಾಲಗೌಡರ ...ಮಾಜವಾದಿ ಚಳವಳಿ, ಮೇಗರವಳ್ಳಿ ಅಪ್ಪಣ್ಣ ಹೆಗಡೆಯವರ ...ಮ್ಯುನಿಸ್ಟ್ ಚಳವಳಿ, ಕಾಗೋಡು ಹೋರಾಟ... ಹೀಗೆ ...ನೇಕ ಬಿರುಸಾದ ಚಟುವಟಿಕೆಗಳಿಂದ ತುಂಬಿತ್ತು. ಇಂಥಲ್ಲಿ ...ಟ್ಟಿ ಬೆಳೆದ ಮುಡುಬಾಗಿಲು ಕಳಸಪ್ಪ ಗೌಡರು ಒಂದು ...ನಿರೀಕ್ಷಿತ ಸಂದರ್ಭದಲ್ಲಿ ನಿಗದಿಯಾಗಿದ್ದ ಮದುವೆಯೇ ...ಡೆಯದೆ ವಿಧವೆಯಾದ ಒಬ್ಬರನ್ನು ಸ್ವಯಂಪ್ರೇರಣೆಯಿಂದ ...ದುವೆಯಾದರು.

1960 ರಲ್ಲೇ ಬಿಎಸ್ಸಿ ಪದವಿ ಪಡೆದಿದ್ದ ಕಳಸಪ್ಪ ...ಡರು ಬೇಕಿದ್ದರೆ ಸರ್ಕಾರಿ ಕೆಲಸಕ್ಕೆ ಸೇರಿ ಆಫೀಸರ್ ...ಗಬಹುದಿತ್ತು. ಆದರೆ ಅವರದ್ದು ಸ್ವತಂತ್ರರಾಗಿರಬೇಕೆಂಬ ...ಬಲ. ಹಾಗಾಗಿ ಯಾವುದೇ ಸರ್ಕಾರಿ ಕೆಲಸಕ್ಕೆ ಸೇರದೆ ...ವು ಮುಗಿದನಂತರ ಹಳ್ಳಿಗೆ ಮರಳಿ ಎರಡು ಬಾರಿ ...ಚಾಯತಿ ಚೇರ್‌ಮೆನ್ ಆಗಿ ಅನೇಕ ಅಭಿವೃದ್ಧಿ ...ಸಗಳನ್ನು ಮಾಡಿಸಿದರು.

ಕಳಸಪ್ಪ ಗೌಡರು ಹುಟ್ಟಿದಾಗ ಅವರ ತಂದೆಯನ್ನು ...ಟಿಷರು ಬೆಳಗಾಂ ಜೈಲಿನಲ್ಲಿ ಇಟ್ಟಿದ್ದರು. ಅವರ ಅಣ್ಣ ...ಂತವೇರಿ ಗೋಪಾಲಗೌಡರ ನಿಕಟವರ್ತಿ. ತೀರ್ಥಹಳ್ಳಿ ...ಬ್ಲೂಕು ಬೋರ್ಡ್‌ಗೂ ಸದಸ್ಯರಾಗಿದ್ದವರು. ಆಗಿನ ...ಮಾಜವಾದಿಗಳ ಚುನಾವಣಾ ಹೋರಾಟ ಹೇಗಿರು...ತ್ತೆಂದರೆ ಗೋಪಾಲಗೌಡ ಸ್ಪರ್ಧಿಸಿದ್ದ ಎರಡು ...ಚುನಾವಣೆಗಳನ್ನು ಮತದಾರರ ಖರ್ಚಿನಲ್ಲೇ ನಡೆಸಿದ್ದರು. ...ಯಾಯ ಗ್ರಾಮಕ್ಕೆ ಬೇಕಾದ ಕರಪತ್ರ, ಪೋಸ್ಟರ್‌ಗಳ ...ರ್ಚು ಲೆಕ್ಕ ಹಾಕಿ ಆಯಾ ಗ್ರಾಮದವರೇ ಹಣ ...ಗ್ರಹಿಸಿ ಪಾವತಿಸಿ ಕೊಂಡೊಯ್ಯುತ್ತಿದ್ದರು. ಅಷ್ಟೇ ಅಲ್ಲ, ...ಸ್ಪರ್ಧಿ ಗೋಪಾಲಗೌಡರು ಪ್ರಚಾರಕ್ಕೆಂದು ಬಂದು ...ಹೋದರೆ ಅದರ ಪ್ರಯಾಣದ ಖರ್ಚನ್ನೂ ಜನರಿಂದ ಸಂಗ್ರಹಿಸಿ ದೇಣಿಗೆ ರೀತಿ ಕೊಡುತ್ತಿದ್ದರು. ಕಳೆದ ತಿಂಗಳು ನಡೆದ ಗ್ರಾಮ ಪಂಚಾಯತಿ ಎಲೆಕ್ಷನ್‌ನಲ್ಲಿ ಹರಿದ ಹಣ ಪ್ರವಾಹ, ಅಭ್ಯರ್ಥಿಗಳ ಅಬ್ಬರ ನೋಡಿದರೆ ಹಿಂದಿನ ವಿದ್ಯಮಾನಗಳನ್ನು ಹೋಲಿಸಲೂ ಕಷ್ಟ ಬಿಡಿ.

ಈ ಕಳಸಪ್ಪ ಗೌಡರು ಹೊನ್ನತಾಳು ಪಂಚಾಯತಿ ಚೇರ್‌ಮೆನ್ ಆಗಿದ್ದಾಗ ಪಂಚಾಯತಿ ಆಫೀಸಿಗೆ ಒಂದು ಪ್ರಜಾವಾಣಿ ಪ್ರತಿ ತರಿಸುತ್ತಿದ್ದರು. ಒಂದು ದಿನ ಪತ್ರಿಕೆಯಲ್ಲಿ ಒಂದು ಆಘಾತಕಾರಿ ಸುದ್ದಿ ಪ್ರಕಟವಾಗಿತ್ತು. 'ಹಸೆಮಣೆ ಏರಬೇಕಿದ್ದ ವರ ಮಸಣಕ್ಕೆ' ಎಂಬ ಹೆಡ್ಡಿಂಗ್‌ನ ಸುದ್ದಿ ಅದು. ಪಕ್ಕದ ಶೃಂಗೇರಿ ತಾಲ್ಲೂಕಿನಲ್ಲಿ ನಡೆದಿದ್ದ ಘಟನೆ ಅದಾಗಿತ್ತು. ಆ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ಮದುವೆ ಮಾಡುವುದು ಎನ್ನುವುದೇ ಬಹಳ ಕಷ್ಟದ ಸಂಗತಿಯಾಗಿತ್ತು. ಸಹಜ ಸಾಮಾನ್ಯವಾಗಿರುವ ಹೆಣ್ಣುಮಕ್ಕಳಿಗೇ ಈ ಕಷ್ಟವಿದ್ದಾಗ ಇನ್ನು ಏನಾದರೂ ಲೋಪ, ಊನ ಅಥವಾ ಅಸಹಾಯಕ ಸಂದರ್ಭಗಳಿಂದಾದ ಸಮಸ್ಯೆಗಳಿರುವ ಹೆಣ್ಣುಗಳ ಮದುವೆ ಎನ್ನುವುದು ಘನಘೋರ ಕಷ್ಟವಾಗಿದ್ದಿರಬೇಕು ಆಗ.

ಆ ಪತ್ರಿಕಾ ವರದಿಯಲ್ಲಿ ಪ್ರಸ್ತಾಪವಾಗಿದ್ದ ಹುಡುಗಿಗೆ ದೂರದ ಸಂಬಂಧಿಯೊಂದಿಗೆ ಮದುವೆ ನಿಶ್ಚಯವಾಗಿತ್ತು. ಶೃಂಗೇರಿ ಮಠದ ಆಸ್ಥಾನ ಜ್ಯೋತಿಷಿಯೇ ಖುದ್ದು ಜಾತಕ ನೋಡಿ ಬಹಳ ಚೆನ್ನಾಗಿ ಕೂಡಿ ಬರುತ್ತೆ ಅಂತ ಹೇಳಿ ಎಲ್ಲರನ್ನೂ ಸಂತೋಷಪಡಿಸಿ ಭರ್ಜರಿ ಕಾಣಿಕೆ ಪಡೆದು ಹೋಗಿದ್ದ. ಅದರಂತೆ ದಿನಾಂಕ ಫಿಕ್ಸ್ ಮಾಡಿ, ಮದುವೆ ಪತ್ರಿಕೆ ಪ್ರಿಂಟು ಮಾಡಿ ಹಂಚಿಯೂ ಆಗಿತ್ತು. ಜೂನ್ 6 ಕ್ಕೆ ಮದುವೆ ನಿಗದಿಯಾಗಿದೆ. ಆದರೆ ಮಳೆಗಾಲವಾದ ಕಾರಣ ಮನೆಯಲ್ಲಿ ಮದುವೆ ವ್ಯವಸ್ಥೆ ಕಷ್ಟ ಎಂದು ಆಗುಂಬೆ ದೇವಸ್ಥಾನದಲ್ಲಿ ಮದುವೆಗೆ ಏರ್ಪಾಡಾಗಿದೆ. ತಯಾರಿಗಳು ನಡೆಯುತ್ತಿವೆ. ಅದೇ ಮುಹೂರ್ತದಲ್ಲೇ ಹುಡುಗಿಯ ದೊಡ್ಡಪ್ಪನ ಮಗಳ ಮದುವೆಯೂ ನಡೆಯುವಂತೆ ವ್ಯವಸ್ಥೆಯಾಗಿದೆ. ಮಧುಮಗಳನ್ನು ನೆಂಟರಿಷ್ಟರ ಮನೆಗೆಲ್ಲಾ ಕರೆದುಕೊಂಡು ಹೋಗಿ ಬಟ್ಟೆಬರೆಯ ಉಡುಗೊರೆ ನೀಡಿ ಹರಸಿ, 'ಕೊರೂಟ' ಹಾಕುತ್ತಿದ್ದಾರೆ. ಹೀಗೆ ದಿನಕ್ಕೊಂದು ಮನೆಯ ಉಪಚಾರ, ಸತ್ಕಾರದಲ್ಲಿ ಮಧುಮಗಳು ಸಂಭ್ರಮದಲ್ಲಿದ್ದಾಳೆ. ಮದುವೆಗೆ 12 ದಿನವಷ್ಟೆ ಬಾಕಿ ಉಳಿದಿದೆ. ನೆಂಟರಿಶ್ವರ ಮನೆಗೆ ಹೋಗಿ ಬಂದ ಮಧುಮಗಳ ಬ್ಯಾಗ್‌ಅನ್ನು ತೆರೆದು ಅಕ್ಕತಮ್ಮಂದಿರೆಲ್ಲಾ ಯಾರ್‍ಯಾರು ಏನೇನು ಉಡುಗೊರೆ ಕೊಟ್ಟಿದ್ದಾರೆಂದು ಚೆಕ್ ಮಾಡಿ ನೋಡುತ್ತಾ ಉಲ್ಲಾಸದಿಂದಿದ್ದಾರೆ. ಅದುವರೆಗೂ ಲಂಗದಾವಣಿ ಹಾಕುತ್ತಿದ್ದ ಹುಡುಗಿಗೆ ಬಹುತೇಕರು ಸೀರೆ ಕುಪ್ಪಸ ಉಡುಗೊರೆ ಕೊಟ್ಟಿದ್ದಾರೆ.

ಆಗಲೇ ಸುದ್ದಿಯೊಂದು ಸಿಡಿಲಿನಂತೆ ಬಂದು ಮನೆಗೆ ಅಪ್ಪಳಿಸಿತು. ಹುಡುಗಿಯ ದೊಡ್ಡಪ್ಪನ ಮಗ ಅಪ್ಪಯ್ಯ ಹೊರಗಿನಿಂದ ಮನೆಗೆ ಬಂದವನೇ ಹುಡುಗಿಯ ಭುಜ ಹಿಡಿದು 'ಆಗಬಾರದ್ದು ಆಗಿಹೋಯಿತು. ಹಿರಿಯಣ್ಣ (ಮಧುಮಗ) ಹೋಗಿಬಿಟ್ಟ. ನೀ ಹೆದರಬ್ಯಾಡ' ಎಂತೆಲ್ಲಾ ಒಂದೇ ಉಸಿರಿನಲ್ಲಿ ಹೇಳಿ ಕುಸಿದು ಕುಳಿತುಬಿಟ್ಟ. ಮದುವೆ ಸಿದ್ಧತೆಯಲ್ಲಿದ್ದ ಮನೆಯವರಿಗೆಲ್ಲಾ ದಿಗ್ಭ್ರಾಂತಿ!

ಮದುವೆ ನಿಶ್ಚಯವಾಗಿದ್ದ ಗಂಡು ಹೊಸಕೊಪ್ಪದ ಹಿರಿಯಣ್ಣ, ಫಾಲಿಡಾಲ್ ಕುಡಿದು ತೋಟದಲ್ಲಿ ಹೋಗಿ ಮಲಗಿ ಅಲ್ಲೇ ಪ್ರಾಣ ನೀಗಿಕೊಂಡಿದ್ದ. ಭವಿಷ್ಯದ ಕನಸು ಕಾಣುತ್ತ ಸಂತೋಷದಿಂದಿದ್ದ ಹುಡುಗಿ ಈ ಆಘಾತಕಾರಿ ಸುದ್ದಿ ಕೇಳಿ ಕುಸಿದುಬಿದ್ದಳು. ಅನ್ನ ನೀರು ಬಿಟ್ಟಳು. ಮಾತು ನಿಲ್ಲಿಸಿದಳು. ಮದುವೆ ಕೆಲಸದಲ್ಲಿದ್ದ ಎಲ್ಲರು ಆಯಾ ಕೆಲಸಗಳನ್ನು ಅಲ್ಲೇ ನಿಲ್ಲಿಸಿಬಿಟ್ಟರು.

ಮಧುಮಗಳು ಮದುವೆಯೇ ನಡೆಯದೆ ವಿಧವೆಯಾಗಿದ್ದಳು.

ಜನ ತಲೆಗೊಬ್ಬರಂತೆ ಮಾತಾಡಲು ಶುರು ಮಾಡಿದರು. ಜಾತಕ ನೋಡಿದ್ದೇ ಸರಿಯಿಲ್ಲ, ಇವಳಿಗೆ ಕಂಟಕ ಇತ್ತಂತೆ. ಶೃಂಗೇರಿಗೆ ಪ್ರಸಿದ್ಧವಾದ ಶ್ರೀಮಠದ ಆಸ್ಥಾನ ಜ್ಯೋತಿಷಿಯಾಗಿದ್ದ ವಿದ್ವಾನ್ ಶಂಕರನಾರಾಯಣ ಜೋಯಿಸನೇ ಖುದ್ದು ಜಾತಕ ನೋಡಿದ್ದ. ಚೂರೂ ಅನುಮಾನವಿಲ್ಲದೆ ಜಾತಕ ಚೆನ್ನಾಗಿ ಕೂಡಿಬರುತ್ತದೆಂದು ಹೇಳಿದ್ದ ಆತ. ಆದರೆ ಸ್ವತಃ ಅವನ ಐದು ಮಕ್ಕಳ ಸಂಸಾರಗಳೇ ನೆಟ್ಟಗಿರಲಿಲ್ಲ. ಮೂವರು ಹೆಣ್ಣುಮಕ್ಕಳು ಗಂಡನನ್ನು ಕಳೆದುಕೊಂಡು ವಿಧವೆಯರಾಗಿದ್ದರು. 'ಅಂತವನು ಹೇಳಿದ ಜಾತಕ ಅದು ಹೇಗೆ ಸರಿಯಾಗಬೇಕು' ಅಂತ ಮಲೆನಾಡಿನ ತುಂಬ ಜನ ಮಾತಾಡಿಕೊಂಡರು.

ನಡೆದಿದ್ದ ಸಂಗತಿ ಏನೆಂದರೆ ಮಧುಮಗ ಹಿರಿಯಣ್ಣನಿಗೆ ಕುರುಮನೆ ಗೋಪಾಲನೆಂಬ ಅಣ್ಣನಿದ್ದ. ಬೇಜವಾಬ್ದಾರಿ ಉಂಡಾಡಿಗುಂಡ ಅವನು. ಯಾರ ಮಾತೂ ಕೇಳಿದವನಲ್ಲ, ಹಾಗಾಗಿ ಅವನನ್ನು ಮನೆಯಿಂದ ಹೊರಹಾಕಿ ಕುರುಮನೆ ಎಂಬಲ್ಲಿ ಜಮೀನು-ಮನೆ ನೀಡಿ ಇರಿಸಿದ್ದರು. ಈ ಕುರುಮನೆ ಗೋಪಾಲ ಮಹಾನ್ ಶೋಕಿಲಾಲಾ. ಕೈಲಿ ಸದಾ ಟ್ರಾನ್ಸಿಸ್ಟರ್ ರೇಡಿಯೋ ಹಾಡುತ್ತಿರಬೇಕು, ಕನ್ನಡ ಚಿಲ್ರೆಯು ಶೆಟ್ರು ಮಕ್ಕಳ ತರ ಬಲ ಕೈಗೆ ವಾಚು, ಎದೆ ಮೇಲಿನ ಶರ್ಟಿನ ಗುಂಡಿ ತೆರೆದುಕೊಂಡಿರುವುದು. ಎಲ್ಲಾ ಬೆರಳಿಗೆ ಉಂಗುರ ಹಾಕಿ ಗೂಳಿಯ ತರ ಓಡಾಡಿಕೊಂಡಿರುತ್ತಿದ್ದ, ವಯಸ್ಸಿಗೆ ಬಂದ ಹೆಣ್ಣು ಮಕ್ಕಳಿರುವ ಮನೆಗಳ ಬಳಿ ಜಾಸ್ತಿ ಹೋಗಿಬರುವ ಚಾಳಿ ಅವನಿಗಿತ್ತು, ರೇಡಿಯೋ-ಗ್ರಾಮಾಫೋನು ರಿಪೇರಿಯನ್ನು ಕಲಿತಿದ್ದ. ಆದರೂ ಜನ ಅವನನ್ನು ನಂಬುತ್ತಿರಲಿಲ್ಲ, ಬೆಲೆ ಕೊಡುತ್ತಿರಲಿಲ್ಲ ಹೀಗಿದ್ದ ಕುರುಮನೆ ಗೋಪಾಲ ತನ್ನ ತಮ್ಮ ಹಿರಿಯಣ್ಣನಿಗೆ ಮದುವೆ ಗೊತ್ತಾದ ಸುದ್ದಿ ಕೇಳಿ ಕೆರಳಿ ನಿಂತ. ಅವನಿಗೆ ತಾನೇ ಆ ಹುಡುಗಿಯನ್ನು ಮದುವೆಯಾಗುವ ಮನಸ್ಸಿತ್ತೋ ಏನೊ ತಮ್ಮನ ಜೊತೆ ಸಿಡಿಮಿಡಿ ಶುರು ಮಾಡಿದ. ಅವನು ಕೇಳಿದ್ದರೂ ಅಂತಾ ಅಯೋಗ್ಯನಿಗೆ ಯಾರೂ ಹೆಣ್ಣು ಕೊಡುತ್ತಿರಲಿಲ್ಲ ಬಿಡಿ. ಆದರೆ ಹಿರಿಯಣ್ಣ ಹೆದರಿಹೋದ. ಬೇರೇನೂ ತೋಚದೆ ಒಂದು ದಿನ ಫಾಲಿಡಾಲ್ ಕುಡಿದು ಜೀವ ತೊರೆದ.

ಇದೆಲ್ಲಾ ಸುದ್ದಿ ಹಿರಿಯಣ್ಣ ಸತ್ತ ನಾಲ್ಕಾರು ದಿನಗಳ ನಂತರ ಗೊತ್ತಾಗಿತ್ತು.

ಅದೇ ಮಲೆನಾಡಿನಲ್ಲಿ ಕುಪ್ಪೇಮನೆ ರಾಮೇಗೌಡರೆಂಬ ದೊಡ್ಡ ಜಮೀನುದಾರರಿದ್ದರು. ಮಲೆನಾಡಿನಲ್ಲಿ ಮದುವೆ ಸೀಜನ್ ಬಂತೆಂದರೆ ರಾಮೇಗೌಡರು ಬಹಳ ಬ್ಯುಸಿಯಾಗಿಬಿಡುತ್ತಿದ್ದರು. ಯಾವ ಹುಡುಗಿಗೆ ಯಾವ ವರ ಸೂಕ್ತ ಎಂದೆಲ್ಲ ತಾವೇ ಓಡಾಡಿ ನೂರಾರು ಮದುವೆ ಮಾಡಿಸುತ್ತಿದ್ದರು. ತಮ್ಮ ಕಾರಿನಲ್ಲೇ, ತಮ್ಮ ಖರ್ಚಿನಲ್ಲೇ ಹತ್ತಾರು ಕಡೆ ಓಡಾಡಿ ಬರುತ್ತಿದ್ದರು. ಅವರಿಗೆ ಅದೊಂದು ಸಂತೋಷ ಮತ್ತು ತೃಪ್ತಿ ಕೊಡುವ ಕೆಲಸವಾಗಿತ್ತು. ಇಂತಹ ರಾಮೇಗೌಡರಿಗೆ ಈ ಹಿರಿಯಣ್ಣನ ಸಾವಿನ ಸಂಗತಿ ಹಾಗೂ ಮದುವೆಗೆ ಮೊದಲೇ ವಿಧವೆಯಾದ ಹುಡುಗಿಯ ಸಂಗತಿ ತಿಳಿಯಿತು. ರಾಮೇಗೌಡರು ಇದನ್ನು ತಮ್ಮದೇ ಮನೆಯ ಸಮಸ್ಯೆ ಎಂಬಂತೆ ಸವಾಲಾಗಿ ಸ್ವೀಕರಿಸಿಬಿಟ್ಟರು. ನಿಗದಿಯಾಗಿದ್ದ ಮುಹೂರ್ತದಲ್ಲೇ ಆ ಹುಡುಗಿಗೆ ಮದುವೆ ಮಾಡಿಸಿದರೆ ಹೇಗೆಂದು ಯೋಚಿಸಿದರು. ಈ ರೀತಿಯ ಮದುವೆ ನಡೆಯಬೇಕೆಂದರೆ ಬದುಕಿನಲ್ಲಿ ಕೆಲವು ಆದರ್ಶಗಳಿರುವ ಹುಡುಗನೇ ಆಗಬೇಕಲ್ಲ ಎಂದು ತರ್ಕಿಸಿ ತೀರ್ಥಹಳ್ಳಿ ಪ್ರಾಂತ್ಯದಲ್ಲಿ ಚಟುವಟಿಕೆಯಿಂದಿದ್ದ ಸಮಾಜವಾದಿ ಯುವಕರ ಬಗ್ಗೆ ವಿಚಾರಿಸಿದರು.

ಕಳಸಪ್ಪ ಗೌಡರು ಸಿಕ್ಕರು. ಮಾತುಕತೆ ಆಯಿತು. ಎಲ್ಲಾ ವಿವರ ಕೇಳಿದ ಕಳಸಪ್ಪ ಗೌಡರು ಅದೆಂತಾ ಪ್ರಬುದ್ಧ ವ್ಯಕ್ತಿಯಾಗಿದ್ದರೆಂದರೆ ಈ ಮದುವೆಗೆ ಒಪ್ಪಿಕೊಂಡರು. ನಿಗದಿಯಾಗಿದ್ದ ದಿನದಂದೇ ಮದುವೆ ನಡೆದೇಹೋಯಿತು. ಇದೆಲ್ಲಾ ಆಗಿ ಈಗ ಐದು ದಶಕಗಳೇ ಆಗಿ ಹೋಗಿವೆ. ಮಲೆನಾಡಿನ ಸಮಾಜವಾದಿಗಳ ಪರಂಪರೆಯಲ್ಲಿ ಗೋಪಾಲ ಗೌಡರದ್ದು ಬಹುದೊಡ್ಡ ಹೋರಾಟದ, ತ್ಯಾಗದ ಕತೆಯಾದರೆ ಕಳಸಪ್ಪ ಗೌಡರಂತಹ ಸರಳ, ಮಾನವೀಯ ವ್ಯಕ್ತಿಗಳ ಬದುಕಿನ ಕತೆಗಳೂ ಇವೆ.

ಈ ಕಳಸಪ್ಪ ಗೌಡರು ಅದೆಷ್ಟು ಮುಗ್ಧ ಹಾಗೂ ನಿರಾಡಂಬರದ ವ್ಯಕ್ತಿಯೆಂದರೆ ಒಡಹುಟ್ಟಿದ ಅಣ್ಣನೇ ಆಸ್ತಿಯಲ್ಲಿ ವಂಚಿಸಿದಾಗ ಪ್ರಶ್ನಿಸಿರಲಿಲ್ಲ, ತನ್ನ ನಿಲುವು, ಬದುಕುಗಳು ಉನ್ನತ ಆದರ್ಶವೆಂಬಂತೆ ಎಲ್ಲೂ ಹೇಳಿಕೊಳ್ಳಲಿಲ್ಲ. ಮಲೆನಾಡಿಗರ ಸಹಜ ಸ್ವಭಾವವೆಂಬಂತೆ ತಣ್ಣಗೆ ಬದುಕಿ ಬಾಳಿದವರು ಅವರು.

ಮೊನ್ನೆ ಮೇ 20ರಂದು ತಮ್ಮ ಅರವತ್ತೆಂಟರ ವಯಸ್ಸಿನಲ್ಲಿ ಕಳಸಪ್ಪ ಗೌಡ ತೀರಿಕೊಂಡರು. ಅವರು ಅವತ್ತು ಮದುವೆಯಾದ ಹುಡುಗಿ ನನ್ನ ಸೋದರಿ.

ಅವರ ನೆನಪಿನಲ್ಲಿ ಇಲ್ಲಿ ಕೆಲವು ಮಾತು ದಾಖಲಿಸಿದ್ದೇನೆ.

• ಕಲ್ಕುಳಿ ವಿಠಲ ಹೆಗಡೆ

ವಿವಾಹಗಳ ಇತಿ ಮತ್ತು ಮಿತಿ

➤ 2

...ನಾಗಿಲ್ಲ, ತಾನು ಮಾತ್ರ ಹೇಗಾದರೂ ಬದುಕಬೇಕೆಂಬ, ...ಷಿಯಲ್ ಡಾರ್ವಿನಿಸಂ ಚಾಲ್ತಿಯಲ್ಲಿರುವ ...ದರ್ಭದಲ್ಲಿ, ಸಮಾಜದಲ್ಲಿ ಶ್ರೇಣೀಕರಣವು ಸಹಜವೆಂಬ ...ಹ್ಮಣವಾದಿ ಹಿಂದೂತ್ವವು ಮರುಹುಟ್ಟು ...ಯುತ್ತಿರುವ ಸಂದರ್ಭದಲ್ಲಿ,

ಹೀಗಾಗಿ ಈ ಅಂತರ್ಜಾತಿ ವಿವಾಹಿತರ ಕ್ರಾಂತಿ...ಗಿಯಾದ ನೆಲೆಯಲ್ಲೇ ಉಳಿದು ಸಾಮಾಜಿಕ ನೆಲೆಗೆ ...ನಿಸುವುದು ದುಸ್ತರ. ಏಕೆಂದರೆ ಖಾಸಗಿ ನೆಲೆಯಲ್ಲಿ ...ೕಸಹಜ ಪ್ರೇಮವಷ್ಟೇ ಜೀವನ ಪರ್ಯಂತದ ...ಜೀವನಕ್ಕೆ ಸಾಲುವುದಿಲ್ಲ, ವಿಭಿನ್ನ ಸಾಂಸ್ಕೃತಿಕ ...ಲೆಯುಳ್ಳವರು ಸಹಜೀವನ ನಡೆಸುವಾಗ ಮತ್ತೊಬ್ಬರ ...ತಿಯನ್ನು ಕೇವಲ "ಸಹಿಸಿಕೊಳ್ಳುವುದರಿಂದ" ಅಂಥಾ ...ದುವೆಗಳು ಯಶಸ್ವಿಯಾಗುವುದಿಲ್ಲ, ಮತ್ತೊಬ್ಬರ ...ತಿಯ ಬಗ್ಗೆ ಗೌರವವೂ ಇದ್ದರೆ ಮಾತ್ರ ಅಂಥಾ ...ಂಧಗಳು ಉಳಿದುಕೊಳ್ಳುತ್ತವೆ. ಆದರೆ ಶ್ರೇಣೀಕರಣವನ್ನೇ ... ಕಾಲ ಬೋಧಿಸುವ ಈ ವ್ಯವಸ್ಥೆಯಲ್ಲಿ ಕೇವಲ ...-ಪ್ರೇಮವೊಂದೇ ಅಂಥ ಗೌರವ ಭಾವನೆಗಳನ್ನು ಹುಟ್ಟಿಹಾಕುವುದಿಲ್ಲ. ಅಂತರ್ಜಾತಿ ಪ್ರೇಮ ಉಳಿಯಲು ಶ್ರೇಣೀಕರಣದ ಸಾಮಾಜಿಕ ಸಿದ್ಧಾಂತವನ್ನು ದ್ವೇಷಿಸುವ ತಿಳಿವಳಿಕೆ ಅಗತ್ಯವಿರುತ್ತದೆ. ಆದರೆ ಅದು ಎಷ್ಟರಮಟ್ಟಿಗೆ ಈ ಆಧುನಿಕ ಅಂತರ್ಜಾತಿ ವಿವಾಹಿತರಲ್ಲಿ ಅಂತರ್ಗತವಾಗಿರುತ್ತದೆ ಎಂಬುದು ಕೂಡಾ ಪ್ರಶ್ನಾರ್ಹವೇ. ಅಷ್ಟು ಮಾತ್ರವಲ್ಲ. ಬಹಳಷ್ಟು ಸಾರಿ ಮೀಸಲಾತಿಯ ಪ್ರಲೋಭನೆ ಈ ಎಲ್ಲಾ ಆದರ್ಶಗಳನ್ನು ಬಲಿಹಾಕಿ ಅಂತರ್ಜಾತಿಯ ಮದುವೆಯ ಫಲಿತಾಂಶವಾಗಿ ಹುಟ್ಟಿದ ಭಾವಿ ಜನಾಂಗ ಜಾತಿರಹಿತರಾಗುವುದಕ್ಕಿಂತ ಮೀಸಲಾತಿ ಹಿತ ಜಾತಿ ಸೇರುವ ಸಂದರ್ಭವೂ ಉಂಟಾಗುತ್ತಿದೆ. ಈ ಸನ್ನಿವೇಶದಲ್ಲಿ ಅಂತರ್ಜಾತಿ ವಿವಾಹಗಳೂ ಸಹ ಜಾತಿಯನ್ನು ಮುರಿಯದಿರುವುದಕ್ಕೇ ಇದೇ ಕಾರಣ.


ಜಾಗತೀಕರಣ ಮತ್ತು ವಿಕೃತ ಬಂಡವಾಳಶಾಹಿ ಆರ್ಥಿಕತೆ ಹುಟ್ಟುಹಾಕುತ್ತಿರುವ "ಮೇಲ್ಮನೆಯುಳ್ಳ ಮಧ್ಯಮ ವರ್ಗ", ಈ ಹಿಂದೆ ಇತಿಹಾಸ ಕಂಡ ಮಧ್ಯಮ ವರ್ಗದ ರೀತಿಯೋ ಅಥವಾ ಈಗ ಚಲನೆಯಿಲ್ಲದೆ ಸ್ಥಗಿತಗೊಂಡಿರುವ ಅಥವಾ ಕ್ರಮೇಣವಾಗಿ ಬಡ ಮಧ್ಯಮ ವರ್ಗವಾಗುತ್ತಿರುವ ಮಧ್ಯಮ ವರ್ಗದಂತಲ್ಲ, ಇದು ಪ್ರಗತಿಪರ ಮೌಲ್ಯ ಮತ್ತು ಸಮಾಜ ಪರಿವರ್ತನೆಯ ಆಶಯಗಳುಳ್ಳ ವರ್ಗವಲ್ಲ, ಇದು ವ್ಯವಸ್ಥೆಯ ಫಲಾನುಭವಿಯಾಗಿದ್ದು ಅದಕ್ಕೆ ಋಣಿಯಾಗಿರುವ ವರ್ಗ. ಹೀಗಾಗಿ ಅದರಲ್ಲಿ ಬಂಡಾಯದ ಗುಣವೇ ಇರುವುದಿಲ್ಲ, ಇತ್ತೀಚೆಗೆ ಬರುತ್ತಿರುವ ಎಲ್ಲಾ ಸಾಂಸಾರಿಕ ಬಾಲಿವುಡ್ ಚಿತ್ರಗಳ ಹೀರೋಗಳಂತೆ! (ಈ ಎಲ್ಲಾ ಪ್ರತಿಪಾದನೆಗಳಿಗೂ ಕೆಲವು ವೈಯಕ್ತಿಕ ಅಪವಾದಗಳು ಇದ್ದೇ ಇರುತ್ತವೆ. ಆದರೆ ಅದು ಅಪರೂಪ ಮತ್ತು ಅಪವಾದ). ಸಮುದಾಯದ ಇತರ ಎಲ್ಲರನ್ನೂ ದಾರಿದ್ರ್ಯದಲ್ಲೇ ಮುಳುಗಿಸಿದ ವ್ಯವಸ್ಥೆಯೇ ಇಂಥದೊಂದು ಅತ್ಯಂತ ಸಣ್ಣ ವರ್ಗವನ್ನು ಕೋ ಆಪ್ಟ್ ಮಾಡಿಕೊಳ್ಳುವುದರಿಂದ ಒಂದು ಸಮುದಾಯ ದ್ವೇಷೀ ಪರಾವಲಂಬಿ ಗುಣ ಈ ಮಧ್ಯಮ ವರ್ಗದ ಪ್ರಮುಖ ಗುಣಲಕ್ಷಣವೇ ಆಗಿಬಿಟ್ಟಿರುತ್ತದೆ. ಅಲ್ಲದೆ ತನ್ನ ಈ ಸ್ವಕೇಂದ್ರಿತ ಸಮಾಜ ವಿಮುಖ ಚಲನೆಯನ್ನು ಸಮರ್ಥಿಸಿಕೊಳ್ಳಲು ಅದು ಬ್ರಾಹ್ಮಣವಾದವನ್ನೂ ಆಶ್ರಯಿಸುತ್ತದೆ. ಹೀಗಾಗಿ ಪ್ರೀತಿ-ಪ್ರೇಮವನ್ನು ಎತ್ತಿಹಿಡಿಯಬೇಕಾದ ಸಮಾಜ ಮತ್ತು ಯುವಜನಾಂಗ ಯಾವುದನ್ನು ದ್ವೇಷಿಸಬೇಕೋ, ಯಾವುದನ್ನು ತಿರಸ್ಕರಿಸಬೇಕೋ ಅದನ್ನೇ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಅಪ್ಪಿಕೊಳ್ಳುತ್ತಿದೆ. ಆದ್ದರಿಂದಲೇ ಈ ಆಧುನಿಕ ಯುವಜನಾಂಗ ಅಂತರ್ಜಾತಿ ಮತ್ತು ಅಂತರ್ ಧರ್ಮೀಯ ವಿವಾಹಗಳಿಗೆ ಮುಂದಾಗುತ್ತಿಲ್ಲ, ಒಂದು ವೇಳೆ ಅಂತರ್ಜಾತಿ ವಿವಾಹಗಳಾದರೂ ಅದು ಸಾಮಾಜಿಕ ಪರಿಣಾಮವನ್ನೂ ಅಥವಾ ಜಾತಿ ವಿನಾಶಕ್ಕೆ ದಾರಿ ಮಾಡಿಕೊಡುವ ಉದಾಹರಣೆಯಾಗಿ ಕಾಣುತ್ತಿಲ್ಲ.

ಏಕೆಂದರೆ ಈ "ಮೇಲ್ಮನೆಯುಳ್ಳ ಮಧ್ಯಮವರ್ಗಕ್ಕೆ" ಸೇರಿದ ಯುವಜನಾಂಗಕ್ಕೆ ಶುದ್ಧ ಪ್ರೀತಿ ಪ್ರೇಮಕ್ಕೆ ಶತ್ರುವಾದ ಜಾತಿ-ವರ್ಗವೆಂಬ ಸರ್ಪದ ಬಾಲದ ಜೊತೆ ದ್ವೇಷವೇ ಹೊರತು ಹೆಡೆಯ ಜೊತೆಯಲ್ಲಲ್ಲ, ಇದೆಲ್ಲದರ ಅರ್ಥ ಅಂತರ್ಜಾತಿ ಮತ್ತು ಅಂತರ್ಧರ್ಮೀಯ ಮದುವೆಗಳಿಗೆ ಏನೇನೂ ಅರ್ಥವಿಲ್ಲವೆಂತಲೋ, ಬೇಕಿಲ್ಲವೆಂತಲೋ ಅಲ್ಲ, ಅಂತರ್ಜಾತಿ ವಿವಾಹಗಳು ನಿಜವಾದ ಅರ್ಥದಲ್ಲಿ ಜಾತಿ ವಿನಾಶ ಮಾಡುವ ಅಂತಸತ್ವವನ್ನು ಪಡೆದುಕೊಳ್ಳಬೇಕು. ಅವುಗಳ ಸಂಖ್ಯೆ ಜಾಸ್ತಿ ಆಗಬೇಕು. ಅದಾಗಬೇಕೆಂದರೆ ಪ್ರೀತಿ ಪ್ರೇಮದಷ್ಟೆ ಜಾತಿ ಮತ್ತು ಸ್ವಾರ್ಥವನ್ನು ಬಿತ್ತುವ ಬ್ರಾಹ್ಮಣವಾದ ಮತ್ತು ಜಾಗತೀಕರಣದ ಶಕ್ತಿಗಳ ವಿರುದ್ಧ ದ್ವೇಷವೂ ಹೆಚ್ಚಬೇಕು.

ಆದರೆ ಕವಿ ಪಾಬ್ಲೊ ನೆರೂದ ಹೇಳಿದಂತೆ:

"ದ್ವೇಷಿಸಬೇಕಾದ್ದನ್ನು ದ್ವೇಷಿಸಬೇಕಾದಷ್ಟು ದ್ವೇಷಿಸದಿದ್ದರೆ ಪ್ರೀತಿಸಬೇಕಾದ್ದನ್ನು, ಪ್ರೀತಿಸಬೇಕಾದಷ್ಟು, ಪ್ರೀತಿಸಲು ಸಾಧ್ಯವಿಲ್ಲ."

ಮುತ್ತು



ಒಂದು ಚಳಿಗಾಲದ ರಾತ್ರಿ ತನ್ನ ಕೊಠಡಿಯಲ್ಲಿ ತನ್ನ ಪ್ರಿಯತಮೆಗೆ ಕಾಯುತ್ತಿರುವ ಪ್ರಿಯಕರನ ಬಗ್ಗೆ ಹೇಳುವ ಕವಿ, ಪ್ರಿಯಕರನ ತಳಮಳ, ತಾಳಲಾಗದಂತಹ ಕಾತರ, ಆಕೆಯನ್ನು ಮತ್ತೆ ನೋಡುವುದಿಲ್ಲವೇನೋ ಎಂಬ ಆತಂಕವನ್ನೆಲ್ಲ ವಿವರಿಸಿ, ಕೊನೆಗೂ ತಣ್ಣಗಿನ ಗಾಳಿಯೊಂದಿಗೆ ಎದುಸಿರು ಬಿಡುತ್ತಾ ಪ್ರಿಯತಮೆ ಆಗಮಿಸಿದಳೆಂದು ಹೇಳುವ ಕವಿ: "ಓ! ಆಕೆಯ ಮುಖ ಮುಸುಕಿನ ಮೂಲಕ ಕಸಿದುಕೊಂಡ ಆ ಪ್ರಥಮ ಚುಂಬನಗಳ ರುಚಿಯೋ!"

ಕತೆ

ಮೂಲ: ಗೈ ದ ಮೊಪಾ
ಭಾವಾನುವಾದ: ಸಾವಂತ್ರಿ

ನನ್ನ ಮುದ್ದು ಮರಿ,

ನಿನ್ನ ಪತ್ರದಲ್ಲಿ ನೀನು ಬೆಳಗ್ಗೆಯಿಂದ ರಾತ್ರಿಯ ತನಕ, ರಾತ್ರಿಯಿಂದ ಬೆಳಗ್ಗೆಯ ತನಕ ಕಣ್ಣೀರಿಡುತ್ತಿದ್ದೀಯ ಎಂದಿರುವೆ. ನಿನ್ನ ಗಂಡ ನಿನ್ನನ್ನು ಬಿಟ್ಟು ಹೊರಗೆ ಹೋಗುವುದರಿಂದ ನಿನಗೆ ದುಃಖವಾಗುತ್ತಿದೆ ಎಂದಿದ್ದೀಯ. ಇದರ ಬಗ್ಗೆ ಏನು ಮಾಡಬೇಕೆಂದು ಗೊತ್ತಾಗದೆ ನಿನ್ನ ಈ ಮುದಿ ದೊಡ್ಡಮ್ಮನ ಸಲಹೆಗಳನ್ನು ಕೋರಿದ್ದೀಯ. ಈ ವಿಚಾರದಲ್ಲಿ ನಾನು ಬಹಳ ಜ್ಞಾನಿ ಎಂದು ನೀನು ತರ್ಕಿಸಿರುವಂತಿದೆ. ನೀನು ತರ್ಕಿಸಿರುವ ಮಟ್ಟಕ್ಕೆ ನಾನು ಜ್ಞಾನಿ ಅಲ್ಲದಿದ್ದರೂ ಪ್ರೇಮದ ಕಲೆಯಲ್ಲಿ ನಾನು ಅಷ್ಟೇನು ಅಜ್ಞಾನಿಯಲ್ಲ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಅವರು ನಮ್ಮನ್ನು ಪ್ರೀತಿಸುವಂತೆ ಏನು ಮಾಡಬೇಕೆಂಬುದರ ಬಗ್ಗೆ ನಿನಗಿಂತ ಹೆಚ್ಚೇ ನನಗೆ ಗೊತ್ತು. ಈ ವಯಸ್ಸಿನಲ್ಲಿ ಈ ಕುರಿತು ಮುಚ್ಚುಮರೆ ಮಾಡದೇ ನಾನು ಒಪ್ಪಿಕೊಳ್ಳುತ್ತೇನೆ.

ಆತನಿಗೆ ಓಲೈಕೆಯಲ್ಲಾಗಲಿ, ಪ್ರೀತಿಯಲ್ಲಾಗಲಿ, ಮುತ್ತುಗಳಲ್ಲಾಗಲಿ, ಸ್ಪರ್ಶದಲ್ಲಾಗಲಿ ನೀನು ಯಾವ ಕೊರತೆಯನ್ನು ಮಾಡಿಲ್ಲ ಎಂದು ಹೇಳಿದ್ದೀ. ಅದೇ ಸಮಸ್ಯೆಯ ಮೂಲ ಅನ್ನಿಸುತ್ತದೆ. ನೀನು ಆತನಿಗೆ ತುಂಬಾ ಮುತ್ತಿಡುತ್ತಿ.

ಮುದ್ದು ಮರಿ, ನಾವು 'ನಮ್ಮ ಕೈಗಳಲ್ಲಿ ಈ ಜಗತ್ತಿನ ಅತಿ ಭೀಕರ ಅಸ್ತ್ರವನ್ನು ಹೊಂದಿದ್ದೇವೆ. 'ಪ್ರೇಮ' ಎಂಬುದೇ ಆ ಅಸ್ತ್ರ.

ಪುರುಷನಿಗೆ ದೈಹಿಕಶಕ್ತಿಯನ್ನು ನೀಡಲಾಗಿರುವುದರಿಂದ ಆತ ಅದನ್ನು ಪ್ರಯೋಗಿಸುತ್ತಾನೆ. ಆದರೆ ಮಹಿಳೆಗೆ ಮೋಹಕ ಗುಣ ಪ್ರಾಪ್ತಿಯಾಗಿದ್ದು ಆಕೆ ತನ್ನ ಸ್ಪರ್ಶದ ಮೂಲಕವೇ ಆತನನ್ನು ತನ್ನ ಅಧೀನದಲ್ಲಿ ಇಟ್ಟುಕೊಳ್ಳುತ್ತಾಳೆ. ಇದೇ ನಮ್ಮ ಅಸಾಧಾರಣ ಮತ್ತು ಅಜೇಯ ಅಸ್ತ್ರ. ಆದರೆ ಅದನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ಅರಿವು ನಮಗಿರಬೇಕು.

ನಿನಗೆ ಗೊತ್ತಿರಲಿ, ಈ ಜಗತ್ತಿನ ಒಡತಿಯರು ನಾವು! ಪ್ರೇಮದ ಇತಿಹಾಸವನ್ನು ಹೇಳುವುದಾದರೆ ಮನುಷ್ಯನ ಇತಿಹಾಸದಿಂದಲೇ ಅದನ್ನು ಪ್ರಾರಂಭಿಸಬೇಕು. ಪ್ರತಿಯೊಂದು-ಕಲೆ, ಪ್ರಮುಖ ಘಟನೆಗಳು, ಸಂಪ್ರದಾಯ, ಯುದ್ಧ, ಸಾಮ್ರಾಜ್ಯಗಳ ಪಲ್ಲಟ- ಎಲ್ಲವೂ ಜನ್ಮ ಹೊಂದಿರುವುದು ಈ 'ಪ್ರೇಮ' ಎಂಬುದರಲ್ಲೇ.

ಬೈಬಲ್‌ನಲ್ಲಿ ನನಗೆ ಡೆಲಿಲಾ ಮತ್ತು ಜೂಡಿತ್ ಸಿಗುತ್ತಾರೆ; ಪುರಾಣ ಕತೆಗಳಲ್ಲಿ ಓಮ್‌ಫಾಲೆ ಮತ್ತು ಹೆಲೆನ್ ಸಿಗುತ್ತಾರೆ; ಇತಿಹಾಸದಲ್ಲಿ ಸಬೀನಾಗಳು ಮತ್ತು ಕ್ಲಿಯೋಪಾತ್ರಗಳು ಸಿಗುತ್ತಾರೆ.

ಆದ್ದರಿಂದ ನಾವು ಸರ್ವಶಕ್ತ ರಾಣಿಯರಾಗಿದ್ದೇವೆ. ಆದರೆ, ರಾಜರಂತೆ ನಾವೂ ಕೂಡ ವ್ಯವಹಾರ ಕೌಶಲಗಳ ಸೂಕ್ಷ್ಮತೆಗಳನ್ನು ಅಳವಡಿಸಿಕೊಳ್ಳಬೇಕು.

ಮುದ್ದು ಮರಿ, ಪ್ರೇಮ ಎಂಬುದು ಅತಿಸೂಕ್ಷ್ಮ ಅನುಭವಗಳ ಮೊತ್ತ. ಈ ಪ್ರೇಮ ಎಂಬುದು ಸಾವಿನಷ್ಟೇ ಕಠಿಣ ಮತ್ತು ಗಾಜಿನಷ್ಟೇ ಸೂಕ್ಷ್ಮ ಎಂಬುದು ನಮಗೆ ಗೊತ್ತು. ಚಿಕ್ಕ ಏಟು ಕೂಡ ಇದನ್ನು ಧ್ವಂಸಗೊಳಿಸಿ, ನಮ್ಮ ಎಲ್ಲ ಶಕ್ತಿಯನ್ನು ಪುಡಿಪುಡಿಯಾಗಿಸಿ ನಾವೆಂದೂ ಮತ್ತೆ ಎದ್ದು ನಿಲ್ಲದಂತೆ ಮಾಡುತ್ತದೆ.

ನಮ್ಮನ್ನು ಪ್ರೇಮಿಸುವಂತೆ ಮಾಡುವ ಅಸ್ತ್ರ ನಮ್ಮಲ್ಲಿದ್ದರೂ, ನಮ್ಮಲ್ಲಿ ಒಂದು ನ್ಯೂನತೆ ಇದೆ. ಅದು ವಿವಿಧ ರೀತಿಯ ಸ್ಪರ್ಶಗಳನ್ನು ಅರ್ಥಮಾಡಿಕೊಳ್ಳದೇ ಇರುವುದು. ಅವನನ್ನು ನಮ್ಮ ತೆಕ್ಕೆಯಲ್ಲಿ ತೆಗೆದುಕೊಳ್ಳುವ ಭರದಲ್ಲಿ ನಾವು ನಾಜೂಕತೆಯನ್ನು ಕಡೆಗಣಿಸುತ್ತೇವೆ. ಆ ಕಾರಣಕ್ಕೆ ನಾವು ಯಾವ ಪುರುಷನ ಮೇಲೆ ಅಧಿಪತ್ಯವನ್ನು ಸಾಧಿಸಲು ಯತ್ನಿಸುತ್ತೇವೆಯೋ ಆತ ಅದಕ್ಕೆ ಅಧೀನನಾಗದೆ ಉಳಿಯುತ್ತಾನೆ. ಮಾತ್ರವಲ್ಲ, ಕೆಲವು ಪದಗಳ ಅವಿವೇಕತನವನ್ನು ಅರಿತವನಾಗಿರುತ್ತಾನೆ. ನನ್ನ ಮುದ್ದು ಮರಿ, ಹುಷಾರಾಗಿರು. ಏಕೆಂದರೆ ಇದೇ ನಮ್ಮ ಕವಚದಲ್ಲಿರುವ ದೋಷ. ಇದೇ ನಮ್ಮ ಅಕಿಲಸ್ ಹಿಮ್ಮಡಿ, ನಮ್ಮ ದುರ್ಬಲ ಸ್ಥಾನ.

ನಮ್ಮ ನಿಜವಾದ ಶಕ್ತಿ ಎಲ್ಲಿಂದ ಉದ್ಭವವಾಗುತ್ತದೆಂದು ನಿನಗೆ ಗೊತ್ತಾ? ಮುತ್ತು ಮುತ್ತು ಮುತ್ತಿನಿಂದಲೇ! ನಮ್ಮ ತುಟಿಗಳನ್ನು ಯಾವಾಗ ಕೊಡಬಾರದು, ಯಾವಾಗ ಕೊಡಬೇಕು ಎಂದು ಅರಿತಾಗಲೇ ನಾವು ರಾಣಿಯರಾಗುವುದು!

ಮುತ್ತು ಒಂದು ಮುನ್ನುಡಿ, ಆದರೆ ಅದೊಂದು ಮೋಹಕ ಮುನ್ನುಡಿ. ಸಾಕ್ಷಾತ್ಕಾರಕ್ಕಿಂತ ಮೋಹಕವಾದ ಮುನ್ನುಡಿ. ಒಂದು ಪುಸ್ತಕವನ್ನು ಇಡಿಯಾಗಿ ಮತ್ತೆ ಮತ್ತೆ ಓದದೇ ಇದ್ದರೂ ಮುನ್ನುಡಿಯನ್ನು ಮತ್ತೆ ಮತ್ತೆ ಓದಬಹುದು.

ಹೌದು, ತುಟಿಗಳ ಈ ಮಿಲನ ಇದೆಯಲ್ಲ ಅದು ಮನುಷ್ಯರಿಗೆ ಸಿಕ್ಕಿರುವ ಅತಿ ಸಂಪೂರ್ಣ, ಅತಿ ಶ್ರೇಷ್ಠವಾದ, ಸುಖದ ಪರಮಾವಧಿಯ ಅನುಭವ. ಮುತ್ತು ಎಂಬುದೇ ಎರಡು ಆತ್ಮಗಳ ಮಿಲನದ ಪ್ರಥಮ ಹೆಜ್ಜೆ. ಈ ಹೆಜ್ಜೆಯನ್ನು ದಾಟಿದ ನಂತರವೇ ಹೃದಯಗಳ ಮಿಲನಕ್ಕೆ ನಾವು ಸೆಣಸಾಡುವುದು.

ಸುಲ್ಲಿ-ಪ್ರುಧೋಮ್ಮೆ ಅವರ ಸಾಲುಗಳು ನಿನಗೆ ನೆನಪಿವೆಯೇ?:

"ಆನಂದದ ಕಾತರಗಳೇ ಮುತ್ತುಗಳು, ಒಂದು ಚುಂಬನದ ಮೂಲಕ ಎರಡು ಆತ್ಮಗಳನ್ನು ಒಂದಾಗಿಸಲು ಪ್ರೇಮ ನಡೆಸುವ ದುರಹಂಕಾರಿ ಯತ್ನಗಳು.'

ಒಂದು ಸ್ಪರ್ಶ ಮಾತ್ರ ಎರಡು ಜೀವಗಳನ್ನು ಆಳವಾಗಿ ಬೆಸೆಯುವ ಶಕ್ತಿ ಹೊಂದಿದೆ-ಅದು ಮುತ್ತು. ಯಾವ ಪ್ರಚಂಡ ಕಂಪನಕ್ಕೂ ಇಲ್ಲದ ರೋಮಾಂಚನ ಈ ಮುತ್ತಿಗೆ ಇದೆ. ಸಮೀಪಿಸುತ್ತಿರುವ ತುಟಿಗಳು, ಪ್ರಥಮ ಬಾರಿ ಸೋಕುವ ಹಸಿಯಾದ ತುಟಿಗಳು, ಅನಂತರದ ದೀರ್ಘವಾದ, ಸಾವಕಾಶವಾದ, ನಿಶ್ಚಲ ಭಾವಭಗ್ನತೆ ಯಾರನ್ನಾದರೂ ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಳ್ಳುತ್ತದೆ.

ಆದ್ದರಿಂದ, ನನ್ನ ಮುದ್ದು ಮರಿ ಮುತ್ತು ನಮ್ಮ ಪ್ರಬಲ ಅಸ್ತ್ರ ಎಂಬ ಅರಿವೂ, ಅದೆಂದೂ ಮಂಕಾಗದಂತೆ ನೋಡಿಕೊಳ್ಳುವ ಎಚ್ಚರಿಕೆಯೂ ನಮ್ಮದಾಗಬೇಕು. ಆದರೆ ಈ ಮುತ್ತಿನ ಮೌಲ್ಯ ಸಾಪೇಕ್ಷವೂ ಹೌದು, ಕೇವಲ ಸಾಂಪ್ರದಾಯಿಕವೂ ಹೌದು ಎಂಬುದನ್ನು ಮರೆಯಬೇಡ. ಸಂದರ್ಭಕ್ಕೆ, ನಿರೀಕ್ಷೆಗಳಿಗೆ ಮತ್ತು ಮನಸ್ಸಿನ ಆಶೆಗಳಿಗೆ ಅನುಸಾರವಾಗಿ ಇದರ ಮೌಲ್ಯ ಬದಲಾಗುತ್ತಿರುತ್ತದೆ. ಇದಕ್ಕೆ ಒಂದು ಉದಾಹರಣೆಯತ್ತ ನಿನ್ನ ಗಮನವನ್ನು ಸೆಳೆಯುತ್ತೇನೆ.

ಫ್ರಾನ್‌ಜುವಾ ಕೊಪ್ಪೀ ಎಂಬ ಮತ್ತೋರ್ವ ಕವಿ ಬರೆದಿರುವ ಒಂದು ಸಾಲು ನಮಗೆಲ್ಲ ಚೆನ್ನಾಗಿ ಗೊತ್ತು. ನಮ್ಮ ಹೃದಯಗಳನ್ನು ತಾಗುವ ಆನಂದಕಲ ಸಾಲು ಅದು.

ಒಂದು ಚಳಿಗಾಲದ ರಾತ್ರಿ ತನ್ನ ಕೊಠಡಿಯಲ್ಲಿ ತನ್ನ ಪ್ರಿಯತಮೆಗೆ ಕಾಯುತ್ತಿರುವ ಪ್ರಿಯಕರನ ಬಗ್ಗೆ ಹೇಳುವ ಕವಿ, ಪ್ರಿಯಕರನ ತಳಮಳ, ತಾಳಲಾಗದಂತಹ ಕಾತರ, ಆಕೆಯನ್ನು ಮತ್ತೆ ನೋಡುವುದಿಲ್ಲವೇನೋ ಎಂಬ ಆತಂಕವನ್ನೆಲ್ಲ ವಿವರಿಸಿ, ಕೊನೆಗೂ ತಣ್ಣಗಿನ ಗಾಳಿಯೊಂದಿಗೆ ಎದುಸಿರು ಬಿಡುತ್ತಾ ಪ್ರಿಯತಮೆ ಆಗಮಿಸಿದಳೆಂದು ಹೇಳುವ ಕವಿ:

"ಓ! ಆಕೆಯ ಮುಖ ಮುಸುಕಿನ ಮೂಲಕ ಕಸಿದುಕೊಂಡ ಆ ಪ್ರಥಮ ಚುಂಬನಗಳ ರುಚಿಯೋ!"

ಎಂದು ಉದ್ಗಾರವೆತ್ತುತ್ತಾನೆ.

ಆ ಸಾಲಿನಲ್ಲಿ ಅದೆಷ್ಟು ಆಹ್ಲಾದಕರ ಭಾವನೆ, ಸೂಕ್ಷ್ಮ ಮತ್ತು ಮನಮೋಹಕ ತಲ್ಲಣ ಹಾಗೂ ಪರಿಪೂರ್ಣ ಸತ್ಯ ಇದೆಯಲ್ಲವೆ? ತಮ್ಮ ಪ್ರಿಯಕರನನ್ನು ಗುಟ್ಟಾಗಿ ಭೇಟಿ ಆಗಿರುವ ಎಲ್ಲರಿಗೂ ಮುಖ ಮುಸುಕುಗಳ ನಡುವೆಯೇ ಪಡೆದ ಈ ಮೊದಲ ಚುಂಬನಗಳ ಆಹ್ಲಾದಕರ ರುಚಿ ಗೊತ್ತು. ಅದನ್ನು ನೆನಪಿಸಿಕೊಂಡಾಗಲೆಲ್ಲ ಅವರು ಕಂಪಿಸುತ್ತಾರೆ. ಆದರೆ ಆ ಮುತ್ತುಗಳ ಸೊಬಗು ಇರುವುದೇ ಅಂದಿನ ಸಂದರ್ಭದಲ್ಲಿ, ಕಾಯುತ್ತಿರುವ ಆತಂಕದಲ್ಲಿ, ತಡವಾಗಿ ಆಗಮಿಸಿದ ತಲ್ಲಣದಲ್ಲಿ.

ಅಂದಹಾಗೆ ಬಹಳಷ್ಟು ಮಹಿಳೆಯರು ಮುತ್ತು ಎಂಬ ಅಸ್ತ್ರದ ಮೌಲ್ಯವನ್ನು ಅರಿಯದೆ ಅದನ್ನು ದುರುಪಯೋಗ ಮಾಡುತ್ತಾರೆ. ಅದರಿಂದ ನೀನೂ ಹೊರತಾಗಿಲ್ಲ. ಗಂಡ ಅಥವಾ ಪ್ರಿಯತಮ ದಣಿದಿರುವುದನ್ನು, ಆತನ ಹೃದಯ ಮತ್ತು ದೇಹಕ್ಕೆ ವಿಶ್ರಾಂತಿ ಬೇಕಿರುವುದನ್ನು ಅರಿತುಕೊಳ್ಳದ ಹೆಂಗಸರು ಕಾರಣ ಹೂರಣವಿಲ್ಲದೆ, ಅಕಾಲಿಕ ಸ್ಪರ್ಶಗಳನ್ನು ಬೇಡಿಕೆಯ ತುಟಿಗಳನ್ನು ಒಡ್ಡಿ ಪೀಡಿಸುತ್ತಾರೆ.

ನನ್ನ ಅನುಭವದಿಂದ ನಿನಗೊಂದು ಸಲಹೆ ನೀಡುತ್ತೇನೆ, ಆಲಿಸು: ಅನ್ಯೋನ್ಯತೆಯ ಸಂದರ್ಭದಲ್ಲೂ ಮುತ್ತುಗಳನ್ನು ವ್ಯರ್ಥ ಮಾಡಬೇಡ.

ಈ ಸಲಹೆಯನ್ನು ಹಗುರವಾಗಿ ತೆಗೆದುಕೊಳ್ಳಬೇಡ. ನನ್ನ ಮುದ್ದು ಮರಿ, ಪ್ರೇಮ ಎಂಬುದು ಅತಿ ಸೂಕ್ಷ್ಮ ವಿಷಯ. ಚಿಕ್ಕಪುಟ್ಟದ್ದರಿಂದಲೂ ಅದಕ್ಕೆ ಜಿಗುಪ್ಸೆ ಉಂಟಾಗುತ್ತದೆ. ಆದ್ದರಿಂದ ನಿನ್ನ ಪ್ರತಿಯೊಂದು ಸ್ಪರ್ಶವನ್ನೇ ಪ್ರೇಮ ಅವಲಂಬಿಸಿದೆ ಎಂಬುದನ್ನು ನೆನಪಿಟ್ಟುಕೋ. ವಿವೇಚನೆ ಇಲ್ಲದೆ ನೀಡಿದ ಮುತ್ತು ಹಾನಿ ಉಂಟು ಮಾಡುತ್ತದೆ.

ನನ್ನ ಸಲಹೆಯನ್ನು ಅನುಸರಿಸಲು ಪ್ರಯತ್ನಿಸು,
ನಿನ್ನ ದೊಡ್ಡಮ್ಮ
ಕೊಲೆಟ್

ಬೂದಿಯ ಮಹಾಪ್ರತಿಮೆ

ಕಣ್ಣಿಗೆ ಕಾಣದ ಹಸಿವು
ಮಕ್ಕಳು-ಮರಿಗಳ ಒಡಲು
ಸುಡುತಿರಲು
ಡಮ ಡಮ ಡಮರುಗ ಬಾರಿಸುತ
ಗೊರವಯ್ಯ ನುಡಿದ
'ಬರುತ್ಯತೋ..... ಬರುತ್ಯತೆ
ಕಪ್ಪಿರುವ ಹಗಲು
ಆಳದಿರುವ ಮುಗಿಲು
ಬರುತ್ಯತೋ.... ಬರುತ್ಯತೆ.'

ದೊಡ್ಡವರು-ಚಿಕ್ಕವರೆನ್ನದೆ
ಕೈಗೆ ಸಿಕ್ಕ ಕಲ್ಲು-ಹಲ್ಲು
ಕೋಲು-ಬಾರುಕೋಲು
ಚಾಕು ಚೂರಿಗಳ ಹಿಡಿದು
ಹುಡುಕಿದರೂ ಸಿಗದೆ
ಹಸಿವ ಕೊಲ್ಲಲಾಗದೆ
ಹೆಂಗಸರು-ಗಂಡಸರೆನ್ನದೆ
ಸಲಿಕೆ-ಗುದ್ದಲಿಗಳನ್ನಿಡಿದು
ಹಸಿವು ಸುಟ್ಟು ಬೆಂದ-
ಕಾಳೂರಿಗೆ ಹೊಂಟವರ
ಬಸ್ಸಿಗೆ
ಯಾರು ಬಳಿದರೋ ಅಣ್ಣ
ಕೆಂಪು ಬಣ್ಣ.....?

2

ಒಡಲ ಹಸಿವ
ಹೆಂಗಾರ ಮಾಡಿ ತಡೆದಾರು
ಅವಿತು ಕುಳಿತ
ಅವನ ತಡೆಯುವರಾರು?
ನಮ್ಮೂರ್‍ನಾಗೆ ಸತ್ತಿದ್ರೆ
ನಮ್ಮಪ್ಪ-ನಮ್ಮವ್ವಗ್
ಹೊಲ್ದಾಗಿನ ಹುಂಚೇಮರದ
ನೆರಳಾದ್ರು ಸಿಕ್ತಿತ್ತು
ಎನ್ನುತ್ತ ಕುಳಿತ ಕಂದನ
ಸಾಲ ತೀರಿಸಲೆಂದೇ
ಜೀತಕ್ಕುಳಿಸಿದನೆ
ಶಿಲಾದಿ ....?

3

ಬಸ್ಸು-ಲಾರಿ-ಟಂಟಂ
ಟ್ರ್ಯಾಕ್ಟರಗಾಡಿಗಳೇ
ನಿಮಗೊಂದು ಮನವಿಯಿದೆ.
ಇನ್ನು ಮುಂದೆ
ಗುಳೇ ಹೊಂಟಾಗ
ಯಾರಿಗೂ ಹೇಳದಿರಿ.....
ಅವರು
ಹಸಿವ ಬಗೆಯಲು
ಹೊಂಟವರೆಂದು ಹೇಳದಿರಿ....
ಸದ್ದಿಲ್ಲದೇ
ಹೊಂಚು ಹಾಕಿ ಕುಳಿತು ಬಿಟ್ಟಾನು.

4

ಉರಿವ ಬೆಂಕಿಯ ಧಗೆ
ತಾಗದಿರಲೆಂದು
ಬತ್ತಿದ ಮೊಲೆಯ
ಒಡಲ ಕಂದನ ಬಾಯಿಗ್ಗಿಕ್ಕಿ
ಸತ್ತೆನೆಂದರೂ ಬಿಡೆವೆಂದು
ಬಾಚಿ ತಬ್ಬಿದ
ಅವ್ವನ-ಕೂಸುಗಳ
ಯಾರೂ
ಮುಟ್ಟದಿರಿ
ನಮಗೆ ಅರ್ಹತೆಯಿಲ್ಲ
ಅಲುಗಾಡಿಸದಿರಿ
ಬಿದ್ದು ಹೋದೀತು
ಬೀದಿಯ
ಬೂದಿಯ ಮಹಾಪ್ರತಿಮೆ

5

ಸಾರುತಿರಲಿ ಬೀದಿಗೆ
ನಿಷ್ಕಾರಣ ಮರಣಕೆ
ನಿಷ್ಕರುಣ ಜಗಕೆ
ಸಾರುತಿರಲಿ ಬಿಡು
ನಮ್ಮ ಷಂಢತನವ.

(ದಿನಾಂಕ 29.05.10 ರಂದು ಬದುಕಸರುಸಿ ಗುಳೇ ಹೊರಟು ಬಸ್ಸಿನಲ್ಲೇ ಬೆಂದುಹೋದವರ ಕುರಿತು)

• ಬಿ. ಶ್ರೀನಿವಾಸ



...ಬಿಜೆಪಿಲಿರೋ ಲೀಡ್ರು ನೋಡಿದ್ರೆ ಇವ್ರುನೆ ವಾಸಿ ಕಂಡ್ರೆ!

...ಅವರೆಲ್ಲಾ ಎಡೂರಪ್ಪನ ಎರಡು ವರ್ಷದ ಸಾಧನೆ ಮಾತನಾಡುತ್ತ ಕುಳಿತಿರಬೇಕಾದರೆ ಹಟಾತ್ತನೆ ನುಗ್ಗಿದ ...ತಿಸ್ಸೆ.

ಯ ಲು ಸೀ ಮೆ ...ಕಟ್ಟೆಪುರಾಣ

▶ಬಿ. ಚಂದ್ರೇಗೌಡ

"ದ್ವಡಪ್ಪ ನಿನ್ನ ಡೇಟಾಬರ್‌ತೇಳು" ಎಂದ.

"ಯಂತೆದ್ಲ?"

"ಅದೆ ನೀನು ಹುಟ್ಟಿದ ತಾರೀಕೇಳಳು ದ್ವಡಪ್ಪಾ."

"ಯಾವನಿಗ್ಗೊತ್ಲ."

"ಹೋಗ್ಲಿ, ವಯಸ್‌ನಾರ ಹೇಳು ದ್ವಡಪ್ಪ."

"ವಯಸ್ಸೂ, ವಯಿಸೇಟಾಯ್ತು ಅಂದ್ರೇ....."

"ಯಪ್ಪತ್ತೊಂಬತ್ತಾಯ್ತುಲವೆ?"

"ಅದ್ಯಂಗೇಳ್ತಿಲಾ?" ಎಂದಳು ಜುಮ್ಮಿ.

"ದ್ಯಾವೇಗೌಡ್ರಿಗೆ ಅಪ್ಪಾದ ವ್ಯಾಲೆ ನಮ್ಮ ...ದ್ವಡಪ್ಪನಿಗೂ ಅಷ್ಟೆ ಆಲವಕ್ಕ?"

"ಓಹೊ ಅಂಗೆ ಅನ್ನು."

"ಊ ಮತ್ತೆ. ದೇವೀರಮ್ಮ ಅಲ್ಲಿ ದೇವೇಗೌಡ್ರ ...ಗ, ಇಲ್ಲಿ ಹೊಂಬಾಳಮ್ಮ ನಮ್ಮ ಕಾಳ ದ್ವಡಪ್ಪನಿಗೆ ಕೊಟ್ಟಿರಬೇಕು. ಆದ್ರಿಂದ ನಮ್ಮ ದೊಡ್ಡಪ್ಪನಿಗೂ ...ತ್ತೊಂಬತ್ತು ವರ್ಷಾಗಿರಬೇಕು."

"ಅದ ಕಟಿಗಂಡೇನ್ಲ ಈಗ?"

"ಈಗ ಯಲ್ಲಾರು ಹುಟ್ಟಿದಬ್ಬ ಮಾಡಿಕತ್ತಾ ಅವ್ರುರೆ ... ದ್ಯಾವೇಗೌಡ, ಅಂಬರೀಸ, ರವಿಚಂದ್ರ ಯಲ್ಲಾರು ...ದಬ್ಬ ಮಾಡಿಕಂಡು ಸ್ವೀಟ್ ತಿಂತಾಯಿರುವಾಗ, ... ನಮ್ಮ ದ್ವಡಪ್ಪನ ಬರ್ತಡೇ ಮಾಡಿ ಪಾಯಸ ...ಯುನ ಅಂದ್ರೆ, ದ್ವಡಪ್ಪನ ಡೇಟಾಪೇ ಗೊತ್ತಿಲ್ಲವಲ್ಲ ...ಾ."

"...ನನಿಗಂತೂ ಒಂದೇ ಏಟಿಗೆ ಜೀವ ನಡಿಗೋಯ್ತಪ್ಪ" ... ಉಗ್ರಿ.

"ಆದ್ಯಾಕ್ಲ?"

"...ವತ್ತರೆ ಎದ್ದು ಟೀವಿ ಹಾಕ್ತಿನಿ, ಯಾವಳೋ ...ಮೋಳು, ಅಂಬುರೀಸನ ಪೋಟಕೆ ಆರತಿ ಬೆಳಗ್ತ ...ಳೇ. ಏನನ್ನಕಬೇಕೇಳು."

"ಅದು ನಮ್ಮ ಜನ ಭಕ್ತಿ ತೋರಸೊ ರೀತಿ ಕಣೊ ... ದ್ಯಾವೇಗೌಡ್ರ ಬರ್ತಡೇಗೆ ಯಾವನೊ ...ಯರಿಸಿಗಂಡ ಅನ್ನು, ಬೈಯ್ಯಕ್ಯಾಯ್ತದ. ದ್ಯಾವೇಗೌಡ್ರಿಗೆ ...ವ ರೂಪದಲ್ಲಿ ಗೌರವ ಕೊಡಬೇಕೇಳು?"

"...ದ್ಯಾವೇಗೌಡ್ರು ಹುಟ್ಟತನೆ ಅಂಗುಟಿದ್ರೊ, ಅಥವ ...ದಲ್ಲಿ ತಲೆ ಕೂದ್ಲು ಹೋಗವೋ?"

"ಇದೇನೋ ಉಗ್ರಿ ಹಿಂಗ ಕೇಳ್ತಿ. ಗೌಡ್ರೆ ಒಂದು ಸತಿ ತಲೆ ನೋಡಿಕತಿದ್ದ ಕಾರ್ಯಕರ್ತನಿಗೆ 'ಮಿಸ್ಟರ್ ಶ್ರೀಕಾಂತ್, ನನ್ನ ಹರೆವ್ಯುದಲ್ಲಿ ಒಂದಲ್ಲ ಅಂತ ಯರಡು ಬಾಚಣಿಗೆ ಮುಡಿಕಂಡಿದ್ದೆ. ಮೊದಲು ದೊಡ್ಡಹಲ್ಲಲಿ ಬಾಚಗತಿದ್ದೆ. ನಂತರ ಸಣ್ಣಹಲ್ಲಲಿ ಬಾಚತಿದ್ದೆ. ಇವತ್ತು ಪರಿಸ್ಥಿತಿ ಏನಾಗಿದೆ ನೋಡು' ಅಂತ ತಲೆ ಸವುರಿದ್ದ ನಾನೇ ನೋಡಿದೆ" ಎಂದ ವಾಟಿಸ್ಸೆ.

"ಅದ್ಯಾವ ಘನವಾದ ಸುದ್ದಿ ಅಂತ ಮಾತಾಡ್ತಿರ್ಲ."

"ಘನವಾದ ಸುದ್ದಿ ಅಂದ್ರೆ ಯಾವುದು ದ್ವಡಪ್ಪ? ಈಗ ಬರ್ತಡೇ ಮಾಡಿಕಂಡ್ರಲ್ಲ ಅವ್ರುರ ಸಾಧನೆ ಮಾತಾಡಬೇಕ? ಆಯ್ತು ದೇವೇಗೌಡ್ರು ಕರ್ನಾಟಕಕ್ಕೆ ಏನು ಮಾಡಿದ್ರು ಹೇಳು?"

"ಮಾಡೋವ್ರೋಟು ಮಾಡ್ಯವುನೆ ಬುಡು."

"ಕರಟ್ಟಾಗೇಳಿದೆ ನೋಡು. ಮಾಡಬಾರದ್ದನ್ನೆ ಮಾಡೋವಷ್ಟು ಮಾಡ್ಯವುನೆ. ಅದಕ್ಕೆ ಇವತ್ತು ಇಂತ ಪರಿಸ್ಥಿತಿ ಬಂದಿರದು. ಅಂಗೇ ನೋಡಿದ್ರೆ ಅವ್ರುನು ಇನ್ನ ಮಾಡಬೇಕಾದ ಕೆಲಸ ಏನೂಯಿಲ್ಲ. ಅದ್ಕೆ ಸುಮ್ಮನಿದ್ರೆ ಸಾಕು. ಅಲವೇನೊ ಉಗ್ರಿ?"

"ಮುಂದೆ ಸರಕಾರ ರಚನೆಯಾಗಬೇಕಾದ್ರೆ, ಯಾವನಾರ ಮುಖ್ಯಮಂತ್ರಿಯಾಗಬೇಕಾದ್ರೆ ಅವ್ರುನಿಲ್ದೆ ಆಗದಿಲ್ಲ ಕಣೊ."

"ಅಂಗಾದ್ರೆ ಶನಿಕಾಟ ತಪ್ಪಲಿಲ್ಲ ಅಂದಂಗಾಯ್ತು. ಇನ್ನ ಅಂಬರೀಸನಿಗೆ ಆಗ್ಲೆ ಐವ್ವತ್ತೊಂಬತ್ತು ವರ್ಸಾಯ್ತಂತೆ. ಅವ್ರುನೇನು ಮಾಡಿದ್ದನು ಹೇಳಕ್ಕ?"

"ಬೇಕಾದೋಟು ಜನಕೆ ಸಾಯ ಮಾಡ್ಯವುನೆ ಕಂಡ್ರ. ಕಾವೇರಿ ನೀರಿಗಾಗಿ ಮಂತ್ರಿ ಕ್ಯಲಸನೇ ಬುಡ್ಲಿಲವ್ವೆ?"

"ಅದು ಬೇಜವಾಬ್ದಾರಿಯಿಂದ ಅಂಗೆ ಮಾಡಿದ ಕಣಕ್ಕ. ಮಂತ್ರಿಯಾಗಿದ್ದುಕಂಡು ಹೋರಾಡಬೇಕಾಗಿತ್ತು. ಈಗ ತಿರಗ ಮಂತ್ರಿಯಾಗೋನು. ಅವ್ರುನಿಗೆ ಸಿಕ್ಕಿದ್ದ ಖಾತೆ ಇಂದ್ರಾಗಾಂಧಿಗೆ ಸಿಕ್ಕಿತ್ತು ಗೊತ್ತೆ, ಅವ್ರುಳು ಅದ್ರಿಂದ್ಲೆ ಮೇಕೆ ಬಂದ್ಲು, ಇವ್ರುನು ಮ್ಯಾಕ್ಕೆ ಬರದು ಬುಟ್ಟು ಕ್ಯಳಿಕ್ಕೆ ಬಂದ. ಇದಕೇನೇಳಿಯ."

"ಅವ್ರುನು ಕ್ಯಳಿಕೂ ತಲೆ ಕೆಡಿಸಿಗಳದಿಲ್ಲ, ಮ್ಯಾಕ್ಕು ತಲೆ ಕೆಡಿಸಿಗಳದಿಲ್ಲ, ಅವ್ರುನು ಬಗ್ಗೆ ನೀವು ತಲೆ ಕೆಡಿಸಿಗಂಡು ಕುಂತಿದ್ದಿರಿ" ಎಂದ ಉಗ್ರಿ.

"ಆ ರವಿಚಂದ್ರನಿಗೂ ಆಗ್ಲೆ ಐವತ್ತಾಯ್ತಂತೆ."

"ಅವ್ರುನಿಗೆ ಐವತ್ತಲ್ಲ ನೂರಾದ್ರು, ಅಂಗೇ ಇರತನವ್ರುನು."

"ಆದ್ಯಾಕ್ಲ ಅಂಗಂತಿ?"

"ನನ್ನ ದುಡ್ಡು ನನ್ನ ಕಾಸು, ನಾನು ಯಂಗಾರ ಸಿನುಮ ತಗಿತಿನಿ, ಬೇಕಾದ್ರೆ ನೋಡಿ, ಇಲ್ಲ ಅಂದ್ರೆ ಬುಡಿ ಅಂತ ಬೇಕಾದೋಟು ಸಿನುಮ ತಗದ. ನಟನೆಗೆ ಪ್ರತಿಭೆ ಅನ್ನದು ಬೇಕಾಗಿಲ್ಲ ಅನ್ನದ್ನು ತೋರಿದ. ಅವ್ರುನ ಅವ್ರುತಾರ್ಯಲ್ಲ ಮುಗಿತು ಅನ್ನಂಗೆ ಕಾಣತದೆ."

"ಅವ್ರುರಿವ್ರುರ ಮ್ಯಾಲೆ ಹಗುರವಾಗಿ ಮಾತಾಡ್ತಿಯಲ್ಲ, ನೀನೇನು ಸಾಧನೆ ಮಾಡಿದ್ದಿ ಹೇಳ್ಳ."

"ನಾನೊಬ್ಬ ಕಾಮನ್ ಮ್ಯಾನು ಕಣಕ್ಕ. ನಾನು ಬದುಕಿರೋದೆ ಒಂದು ಸಾಧನೆ. ನನ್ನ ಸಾಧನೆಯ ಬದುಕಿನ ಕಡೇಲಿ ಆಳಿಬೇಕು. ಅದು ಬುಟ್ಟು ಯಡವಟ್ ಎಡೂರಪ್ಪನಂಗೆ ಯರಡೇ ವರ್ಸಕ್ಕೆ ಸಾಧನೆ ನೋಡದಲ್ಲಾ."

"ಅಂಗರೆ ಎಡೂರಪ್ಪ ಸಾಧನೆ ಮಾಡ್ತಯಿದ್ದನೆ?"

"ಸಾಧನೆ ಮಾಡಿದ್ರೆ ಮೆಚ್ಚಬವುದಿತ್ತು. ಆದ್ರೆ ಎರಡೊರ್ಸದಲ್ಲಿ ಅದೇನೇನೊ ಮಾಡಿದ್ದಿನಿ ಅಂತ ಕೂಗತ ಅವ್ರುನೆ. ಪೇಪರ್ ಮುಂಡೆಮಕ್ಕಳು ಪರವಾಗಿಲ್ಲ ಅಂತ ಬರಿತ ಕುಂತವರೆ, ಇದಕೇನೇಳ್ತಿ."



"ಅಂಗೆ ನೋಡಿದ್ರೆ ಎಡೂರಪ್ಪುದೂ ಒಂಥರ ಸಾಧನೆಗೆ ಕಣೊ."

"ಇದೇನೊ ಉಗ್ರಿ ನೀನೂ ಅಂಗೆ ಅಂತೀ?"

"ನೋಡೊ, ತಿಳಿಹಸುರು ಶಾಲಾಯ್ಕಂಡು ಪ್ರಮಾಣ ಮಾಡಿ, ರೈತರ ಮ್ಯಾಲೆ ಒಂದಲ್ಲ ಅಂತ ಯರಡು ಸತಿ ಗುಂಡಾಕಿದ. ಇದಂತು ಗುಂಡೂರಾಯನ ಸಾಧನೆ ತರನೆ ಅದೆ."

"ಒಪ್ಪಿಗಬವುದು."

"ಇನ್ನ ಸಾರ್ವಜನಿಕರ ಸರಕಾರದ ಹಣನ ಮಠಗಳಿಗೆ ದಾನ ಮಾಡಿದ. ಇದೂ ಒಂದು ಸಾಧನೆ. ಇನ್ನ ಕುರ್ಚಿ ಉಳಿಸಿಗಳಕ್ಕೆ ಅಂತ ಪಾಪ ಪ್ರೀತಿಪಾತ್ರ ಶೋಬನ್ನ ಕೈಬುಟ್ಟ. ಒಳ್ಳೆ ಅಧಿಕಾರಿ ಬಳಿಗಾರನ್ನ ವರ್ಗಾ ಮಾಡಿದ. ರೆಡ್ಡಿಗಳಿಗೆ ಹೆದ್ರಿಕಂಡು ಅದಿರುಮ್ಯಾಲೆ ಹಾಕಿದ್ದ ಟ್ಯಾಕ್ಸ್ ವಾಪಸ್ ತಗಂಡ. ಅಮ್ಯಾಲೆ ಅವ್ರುರೇಳಿದಂಗೆ ಕೇಳಿಕಂಡು ಅವ್ರುರನೆ ಹೊಗಳಿಕಂಡು ಕಾಲ ಹಾಕ್ತ ಅವ್ರುನೆ. ಇದು ಸಾಧನೆ ವ್ಯಾಪ್ತಿಗೆ ಬತ್ತದೊ ಗುಲಾಮಗಿರಿ ವ್ಯಾಪ್ತಿಗೆ ಬತ್ತದೊ ನೀವೆ ಹೇಳಬೇಕು."

"ನೀನು ಹೇಳಿದ್ಕೆ ಇನ್ನು ಸೇರಸವ್ರು ಅವೆ ಕಣೊ. ಅವ್ರುನ್ಯಾರೊ ಜುಜುಬಿ ರೇಣುಕಾಚಾರಿಗೆ ಹೆದ್ರಿಸಂಡು ಅವ್ರುನ್ನ ಮಂತ್ರಿ ಮಾಡಿದ್ದು, ಪ್ರವಾಹ ಬಂದು ಮನೆಕಳಕಂಡೋರ ಕಡಿಕೆ ತಿರುಗಿ ನೋಡದಾಗಿರದು...."

"ಎಡೂರಪ್ಪ ನ್ಯಟ್ಟಗಿದ್ರೆ ಅಲ್ಲಿಗೋಗಬೇಕಾಗಿತ್ತು ಕಣ್ಲ" ಎಂದ ಕಾಳಮಾವ.

"ಎಲ್ಲಿಗೆ ದ್ವಡಪ್ಪ?"

"ಅದೆ ಮಳ್ಳೂರು ಕೊಚಗಂಡೋದರಲ್ಲಾ ಅಲ್ಲಿಗೆ."

"ಅಲ್ಲಿಗೋದ್ರೆ ಲೈಪ ಎಂಜಾಯ್ ಮಾಡಕ್ಯಾಗದಿಲ್ಲ ದೊಡಪ್ಪ. ಏನೊ ಅವರವ್ರುರ ಕರ್ಮ ಅನ್ನಕಂಡ್ರೆ ಮಠ, ದೇವ್ರುಸ್ಥಾನ, ಗುರುಗಳ ಸನ್ನಿಧಿಲಿ ಹಾರ ಹಾಕಿಸಿಗಂಡು, ಹೈಲು ದೊರೆ ತರ ಮ್ಯರಿಬವ್ರುದು."

"ಇವ್ರುರಾಟ ನೋಡಿದ್ರೆ ಅಂಗೆ ಕಾಣ್ತಾದಪ್ಪ."

"ಕಾಣದೇನು ದೊಡಪ್ಪ ಬಿಜೆಪಿಗಳು ಯಾವ ಕಾಲ್ದಲ್ಲೂ ಬಡವರ ಬಗ್ಗೆ ಯೋಚನೆ ಮಾಡಿದೋರಲ್ಲ. ಅವ್ರುರಿಗೆ ಬಡತನನೂ ಗೊತ್ತಿಲ್ಲ, ನಿರ್ಗತಿಕತನನೂ ಗೊತ್ತಿಲ್ಲ. ಅದ್ಕೆ ಪ್ರವಾಹ ಬಂದೊರ ಸಮಸ್ಯೆ ಅವ್ರುರ ಕಾಡಸಲಿಲ್ಲ."

"ಎಡೂರಪ್ಪ ಏನು ಮಾಡದೂ ಬೇಕಾಗಿರಲಿಲ್ಲ. ಪಾಪ ಹೊಳೆಗೆ ಸಿಕ್ಕಿ ಬೀದಿಗೆ ಬಿದ್ದೋರಿಗೆ ಸೂರು ಕಟ್ಟಿಕೊಟ್ಟಿದ್ರೆ ಅದೇ ಒಂದು ಸಾಧನೆ ಆಗಿರದು."

"ಆಗೊಂದು ಸತಿ ಬಂಗಾರಪ್ಪನೂ ಹಿಂಗೆ ಮಾಡಿದ್ದ ದ್ವಡಪ್ಪ, ಯರಡೊರ್ಸ ಹ್ಯೈಲುಪೈಲಿನಂಗೆ ಅಧಿಕಾರ ಮಾಡಿ, ಅದ್ಕೆ ಸಾಧನೆ ಸಮಾವೇಶ ಅಂತ ಮಾಡಿಕಂಡಿದ್ದ. ಏನು ಕರ್ನಾಟಕದ ಮೂಲಿಮೂಲಿಂದ ಬಸಲ್ಲಿ ಜನ ತರಿಸಿ ಸುರಕಂಡು, ಅಕ್ಷಯ, ಆರಾಧನ, ಯೋಜನ, ವಿಶ್ವ, ಶುಶ್ರೂಷೆ, ಆಶ್ರಯದ ಕಾರ್ಯಕ್ರಮದಿಂದ ಇಡೀ ಕರ್ನಾಟಕ ಸುಭಿಕ್ಷವಾಗಿದೆ ಅಂತ ಭಾಷಣ ಬಗಿದಿದ್ದ. ಅದ ನೋಡಿ ನರಸಿಂಗರಾಯ ಡೆಲ್ಲಿಗೆ ಕರಿಸಿಗಂಡು ನಿನ್ನ ಸಾಧನೆ ಸಾಕು ಮದ್ಲು ರಾಜೀನಾಮೆ ಕೊಡಪ್ಪ ಅಂತ ಕೇಳಿದ್ದ."

"ಈ ಎಡೂರಪ್ಪನಿಗೆ ಅಂಗ್ಯಾರು ಕೇಳೊರಿಲ್ಲವಲ್ಲ ಹೇಳು."

"ಬಿಜೆಪಿಲಿರೊ ಲೀಡ್ರು ನೋಡಿದ್ರೆ, ಎಡೂರಪ್ಪನೆ ವಾಸಿ ಅನ್ನಿಸಿರಬೇಕು."

"ಇರಬವ್ರುದು ಬುಡು." ●

...ಾರು ಇರುವ ಊರಲ್ಲ

...ಆರು ವರ್ಷದ ಪುಟ್ಟಿ ವೃತ್ತಪತ್ರಿಕೆಯ ಮೇಲೆ ಕಣ್ಣಾಡಿಸುತ್ತಾ ಕೂತಿದ್ದಳು. ನಾನು ಕಣ್ಣಂಚಿನಲ್ಲಿ ಆಕೆಯನ್ನು ...ಡುತ್ತಾ ಕತೆ ಓದುತ್ತಿದ್ದೆ. ಗೊಂಬೆಗಳಿಲ್ಲದ ಹಾಳೆಗಳನ್ನು ತಿರುವಿದ ಪುಟ್ಟಿ ದೊಡ್ಡ ದೊಡ್ಡ ಚಿತ್ರಗಳಿದ್ದ ...ಗೆ ಬಂದಳು. ಅಲ್ಲಿ ಮಹಾರಾಷ್ಟ್ರದ ಭೂಕಂಪದ ಚಿತ್ರಗಳಿದ್ದವು.

'...ಇದು ಏನಣ್ಣ?' ಅಂದಳು.

'...ಮೊನ್ನೆ ಭೂಕಂಪವಾಗಿ ತುಂಬ ಜನ ಸತ್ರು. ಅವೆಲ್ಲ ಭೂಕಂಪದ ಚಿತ್ರಗಳು' ಅಂದೆ. ಪುಟ್ಟಿಯ ಕಣ್ಣು ...ದ ಕದಲಲಿಲ್ಲ.

'...ಇದು ಅಜ್ಜಿ ಊರಲ್ಲ ಅಲ್ವ?'

'...ಅಲ್ಲ, ಮೈಸೂರಲ್ಲ'

'...ಅಣ್ಣ!'

'...ಏನೋ?'

'...ಹಾರು ಇರೋ ಊರ್‍ಯಾವುದು?'

...ಹಾರು, ಅವಳು ತುಂಬ ಇಷ್ಟಪಡುವ ಅತ್ತೆಗೆ ಸಂಧ್ಯಾಶ್ರೀ ಮಗಳು. ಇಬ್ಬರೂ ಸ್ನೇಹಿತರು. ಆಕೆ ರಜಾಕ್ಕೆ ...ಕೇರಿಗೆ ಹೋಗಿದ್ದಳು.

'...ಅಲ್ಲ, ಕಣೋ. ಮಡಿಕೇರಿಯಲ್ಲ'

'...ಮಡಿಕೇರಿ ಥರಾ ಕಾಣುತ್ತೆ ಅಲ್ವ?'

'...ಹೌದು.'

'...ಹಾರು ಅಲ್ಲಿ ಭೂಕಂಪ ಇಲ್ಲ ಅಂತ ಹೇಳಿದ್ಯಾ?'

...ಅವಳನ್ನು ನೋಡಿ ನಕ್ಕೆ, ಹತ್ತಿರ ಕರೆದು ಚಿತ್ರಗಳನ್ನು ವಿವರಿಸುತ್ತಾ ಮಹಾರಾಷ್ಟ್ರದ ಕಿಲಾರಿ, ಲಾತೂರು ಮುಂತಾದ್ದರ ಬಗ್ಗೆ ಹೇಳಿ ಅವಳ ಹಾರು ಇದ್ದ ಊರು ಸುರಕ್ಷಿತ ಎಂದು ಮನವರಿಕೆ ಮಾಡಿಕೊಟ್ಟೆ.

******

ಆತ ಮತ್ತು ಡ್ರೈವರ್



ಜಿಲ್ಲೆಯ ವರದಿಗಾರನೊಬ್ಬ ಬಂದ. 'ನಾನು ನಾಲ್ಕು ವರದಿ ಕಳಿಸಿದ್ದೆ. ಬಂದಿಲ್ಲವೆ' ಅಂದ.

'ಬಂದಿಲ್ಲ. ಹೇಗೆ ಕಳಿಸಿದ್ದೆ?' ಅಂದೆ.

'ಅಯ್ಯೋ, ನೀವೇ ಹೇಳಿದ್ದಿರಲ್ಲ, ಸರ್ಕಾರಿ ಬಸ್ಸಿನ ಡ್ರೈವರ್‌ಗೆ ಕೊಟ್ಟು ಬೆಂಗಳೂರು ತಲುಪಿದೊಡನೆ ಅಂಗಡಿಯೊಂದರಲ್ಲಿ ಕೊಟ್ಟುಬಿಡು ಅಂತ.... ಹಾಗೇ ಮಾಡಿದ್ದೆ. ಡ್ರೈವರ್ ಕೊಡಲೇ ಇಲ್ಲವೆ?' ಅಂದ.

'ಇಲ್ಲ. ಆದರೆ ಡ್ರೈವರ್ ಕೊಡದೆ ಇರುವುದಿಲ್ಲ'

'ಕೊಟ್ಟಿಲ್ಲವಲ್ಲ? ಯಾಕೆ ಕೊಟ್ಟಿಲ್ಲ ಅಂತ ಆಶ್ಚರ್ಯ' ಅಂದ.

'ನನಗೆ ಆಶ್ಚರ್ಯವಾಗ್ತಿಲ್ಲ' ಅಂದೆ.

'ಯಾಕೆ?'

'ಡ್ರೈವರ್ ಕೊಡ್ತಿದ್ದ. ನೀನು ಕೊಡದೆ ಇದ್ದಾಗ ಆತ ನಮಗೆ ಕೊಡುವುದು ಸ್ವಲ್ಪ ಕಷ್ಟ' ಅಂದೆ.

'ಹಾಗಾದ್ರೆ ನಾನು ಸುಳ್ಳು ಹೇಳ್ತಿದ್ದೇನೆಯೆ?'

'ಗೊತ್ತಿಲ್ಲ. ಡ್ರೈವರ್‌ಗಳು ಸುಳ್ಳು ಹೇಳೋದು ಅಪರೂಪ' ಅಂದೆ.


ನಾನು ಸ್ವಲ್ಪವೂ ನಗದೆ, ಚೇಷ್ಟೆ ಧೋರಣೆ ಇಲ್ಲದೆ ಮಾತಾಡುತ್ತಿರುವುದನ್ನು ಕಂಡು ಅಪ್ರತಿಭನಾದ ವರದಿಗಾರ, 'ಈಗ ಆಫೀಸಲ್ಲಿ ಖುದ್ದು ಕೊಟ್ಟಿದ್ದೇನೆ' ಅಂದ. ಆಗಲೂ ನಾನು ನನ್ನ ಮುಖದ ಬಿಗಿ ಬದಲಾಯಿಸದೆ 'ಡ್ರೈವರೇ ಕೊಡಲಿ, ಈಗ ತಗೊಂಡು ಹೋಗು' ಅಂದೆ.

ಅಂದರೆ ಆತ ಡಿಸ್‌ಮಿಸ್ ಆಗುವುದಕ್ಕೆ ಹತ್ತಿರ ಇದ್ದ.

-ಅಕ್ಟೋಬರ್ 20, 1993

ಬ್ರಾಹ್ಮಣರಿಗೆ ಬಹಿಷ್ಕಾರ!

ಅಣಕ



ಎಚ್.ಎಲ್. ಕೇಶವಮೂರ್ತಿ

ಇದೊಂದು ಸಮುದಾಯ ಭವನ.

ಜಾತಿಗೊಂದು ಭವನ ಇರುವ ಕಾಲ ಇದು. ಇಲ್ಲದವರೂ ಸಂಘಟಿತರಾಗಿ ನಿರ್ಮಿಸುವ ಯುಗ.

ಇದು ಯಾವ ಜಾತಿಯದ್ದು?

ಬ್ರಾಹ್ಮಣರ ಸಮುದಾಯ ಭವನ!

ಇತರ ಜಾತಿಯವರಿಗೆ ನಿಷೇಧ ಎಂದು ಬಹಿರಂಗವಾಗಿ ಹೇಳಿಲ್ಲ, ಬೇರೆ ಜಾತಿಯವರು ಬಳಸಿದ್ದು ಇಲ್ಲ, 'ಇದು ಏನಿದ್ದರೂ ಹಾರುವರಿಗೆ ಸೇರಿದ್ದು, ತಮಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ' ಎಂದೇ ಬೇರೆ ಜನಾಂಗದವರ ಭಾವನೆಯಾಗಿತ್ತು.

ಇಲ್ಲಿಯವರೆವಿಗೆ ಎಲ್ಲವೂ ಸಂಗಮವಾಗಿತ್ತು. ಆದರೆ.....

ಸವಿತಾ ಸಮಾಜದ ಮುಖಂಡರ ಮಗಳ ಮದುವೆ ಬಂತು. ವೈಭವೋಪೇತವಾಗಿ ಧಾಂ ಧೂಂ ಎಂದು ಇದನ್ನು ಮಾಡಬೇಕೆಂದು ಮನಸ್ಸು ಮಾಡಿದರು.

ಧಾಂಧೂಂ ಅಂತ ವಿವಾಹ ಕಾರ್ಯ ನೆರವೇರಬೇಕು ನಿಜ. ಆದರೆ ಸ್ಥಳ?

ಸವಿತಾ ಸಮಾಜಕ್ಕೆ ಸಮುದಾಯ ಭವನ ಇರಲಿಲ್ಲ!

ಬ್ರಾಹ್ಮಣರ ಸಮುದಾಯ ಭವನದಲ್ಲಿ ಏರ್ಪಡಿಸಬೇಕೆಂಬ ಪ್ರೇರಣೆ ಆಗಿರಬೇಕು. ಅಲ್ಲಿಗೆ ಹೋಗಿ ವಿಷಯ ತಿಳಿಸಿದರು.

ಮದುವೆ ದಿನ ನಿಷ್ಕರ್ಷಿಸಲು ಸಮುದಾಯ ಭವನ ಖಾಲಿ ಇರುವ ದಿವಸಗಳನ್ನು ತಿಳಿಸುವಂತೆ ಕೋರಿದರು.

ಮದುವೆ ದಿನ ಮೊದಲೇ ನಿಷ್ಕರ್ಷಿಸಲಾಗಿರುತ್ತೆ ಎಂಬುದು ಹಿಂದಿನ ಕಾಲ. ಈಗ ಏನಿದ್ದರೂ ಕಲ್ಯಾಣಮಂದಿರ ಸಿಕ್ಕಿದ ದಿನ ಮದುವೆ. ಅವತ್ತೇ ಪ್ರಶಸ್ತ ದಿನ. 'ಧಾರಾ ಮುಹೂರ್ತ ಪ್ರಶಸ್ತಗಳಿಗೆ' ಅನ್ನುವುದಕ್ಕೆ ಬದಲಾಗಿ 'ಕಲ್ಯಾಣಮಂಟಪ ಪ್ರಶಸ್ತ ಗಳಿಗೆ' ಎಂದು ಕರೆಯಬಹುದು. ಇದು ಎಲ್ಲರ ಅನುಭವ. ಇರಲಿ.

ಕೀಳು ಜಾತಿಯವರ ಮದುವೆಗೆ ವೈದಿಕರ ಸಮೂಹ ಭವನ ಬೇಕಂತೆ! ಸವಿತಾ ಸಮಾಜದ ಮುಖಂಡನ ಮಾತ ಕೇಳಿ ಭವನದ ಉಸ್ತುವಾರಿ ನೋಡಿಕೊಳ್ಳುತ್ತಿದ್ದವರ ರಕ್ತ ಕೊತಕೊತನೆ ಕುದಿಯಿತು. ಇದು ಆತನ ಉದ್ಧಟತನದ ಪರಮಾವಧಿ ಎಂದೇ ಭಾವಿಸಿದರು. ಆದರೂ ತಮ್ಮ ಅಂತರಂಗದ ಸಿಟ್ಟನ್ನು ಬಹಿರಂಗಪಡಿಸಲಿಲ್ಲ. ನಯವಾಗಿ 'ಬೇರೆ ಜನಾಂಗದವರಿಗೆ ಇದನ್ನು ಕೊಡಲು ಮುಖಂಡರ ಒಪ್ಪಿಗೆ ಬೇಕು' ಎಂದು ತಿಪ್ಪೆ ಸಾರಿಸಿದರು.

ಮುಖಂಡರು ಎಂದರೆ ಯಾರು?

ಬ್ರಾಹ್ಮಣ ಸಮುದಾಯದವರು. ಎಂಟುಹತ್ತು ಜನ ಇದ್ದರು. ಅವರ ಮನೆಗಳಿಗೆ ಎಡೆತಾಕಿದರು. ವಿಷಯ ಅರುಹಿದರು. ಇದನ್ನು ಪರಾಂಬರಿಸಿದ ಮುಖಂಡರು 'ಬಹಳ ಶ್ರೇಷ್ಠವಾದ ಕಾರ್ಯ, ಆಗಲಿ ಅದಕ್ಕೇನಂತೆ' ಎಂದರಾದರೂ 'ಆದರೆ....' ಎಂಬ ಒಗ್ಗರಣೆ ಹಾಕಿದರು.

'ಏನು ಸ್ವಾಮಿ ಆದರೆ ಎನ್ನುತ್ತಿದ್ದೀರಲ್ಲ?'

'ಏನಿಲ್ಲ ಅವರನ್ನು ಒಂದು ಮಾತು ಕೇಳಿಬಿಡಿ. ಅವರು ಒಪ್ಪಿದರೆ ಅಭ್ಯಂತರವಿಲ್ಲ'

ಎಲ್ಲ ಮುಖಂಡರ ಮುಖವಾಣಿಯಲ್ಲೂ 'ಅಭ್ಯಂತರ ಇಲ್ಲ... ಆದರೆ' ಉದ್ಗಾರ!

ಯಾರದೂ ಅಭ್ಯಂತರವಿರಲಿಲ್ಲ, 'ಆದರೆ'ದ್ದೇ ಅರ್ಭಟ. ಹೀಗಾಗಿ ಸವಿತಾ ಸಮಾಜದ ಮುಖ್ಯಸ್ಥರ ಮಗಳ ಮದುವೆಗೆ 'ಆದರೆ' ಅವಾಂತರದಿಂದ ಬ್ರಾಹ್ಮಣರ ಸಮುದಾಯ ಭವನ ದೊರಕಲಿಲ್ಲ!

ಈ ಸುದ್ದಿ ರಾಕೆಟ್ ವೇಗದಲ್ಲಿ ಎಲ್ಲೆಡೆ ಹರಡಿತು.

ಸಿಟ್ಟಿಗೆದ್ದಿತು ಸವಿತಾ ಸಮಾಜ. ರಣಾರಂಗಕ್ಕೆ ಇಳಿಯಿತು. ಕಹಳೆ ಊದಿತು– 'ಬ್ರಾಹ್ಮಣರಿಗೆ ಕ್ಷೌರ ಮಾಡುವುದಿಲ್ಲ'. ಎಲ್ಲಾ ಕ್ಷೌರಿಕ ಅಂಗಡಿಗಳಲ್ಲೂ ಬೋರ್ಡು ನೇತಾಡಿತು. ಅಂಗಡಿಗಳಲ್ಲೇ ಈ ಪರಿ ಆದರೆ ಮನೆಗೆ ಹೋಗಿ ಸೇವಾ ಕೈಂಕರ್ಯಗೊಳ್ಳುವುದು ದೂರದ ಮಾತಾಯಿತು.

ಮೊದಮೊದಲು ಇದು ಸವಿತಾ ಸಮಾಜದ ಬೆದರಿಕೆ ತಂತ್ರ ಎಂದೇ ವಿಪ್ರೋತ್ತಮರು ಭಾವಿಸಿದರು. ಆದರೆ ದಿನಕಳೆದಂತೆ ಇದು ಪೊಳ್ಳು ಬೆದರಿಕೆ ಅಲ್ಲ ಎಂಬುದು ಮನದಟ್ಟಾಯಿತು.

ಬ್ರಾಹ್ಮಣ ಕೇರಿಯ ಗಂಡಸರ ತಲೆ, ಮುಖದ ಮೇಲೆ ಫಲವತ್ತಾದ ಬೆಳೆ ಬೆಳೆಯಿತು. ಇಡೀ ಕೇರಿಯೇ ತಿರುಪತಿಗೆ ಹರಕೆ ಹೊತ್ತಿದೆಯೋ ಇಲ್ಲ ಕೇರಿಯ ಹೆಂಗಸರೆಲ್ಲ ಏಕಕಾಲದಲ್ಲಿ ಬಸುರಾಗಿದ್ದಾರೋ ಎಂಬ ಭ್ರಮೆ ಮೂಡಿಸುವಂತಿತ್ತು. ದೇಹದ ತುಂಬ ಕೂದಲು ಹೊಂದಿರುವ ಕರಡಿ ವಂಶದವರ ಪಾಡಂತೂ ಹೇಳತೀರದು. ಅವರು ರೋಮಾಂಚನಗೊಂಡಾಗಲೆಲ್ಲ ಮುಳ್ಳು ಹಂದಿಯ ರೂಪ ತಾಳಿದವರಂತೆ ಗೋಚರಿಸುತ್ತಿದ್ದರು. ರೋಮಾಂಚನಗೊಳ್ಳುವ ಅಪೂರ್ವ ಅನುಭವವೇ ಆಗದಿರಲಿ ನನ್ನಪ್ಪ ಎಂದು ದೇವರಲ್ಲಿ ಮೊರೆ ಇಟ್ಟರು ಎಂದಮೇಲೆ ಹೇಳುವುದೇನಿದೆ.

ಕೂದಲ ಕಡಿತ ತಾಳಲಾರದ ನವನವೀನ ವಿಪ್ರಬಾಂಧವರು ಪರ ಊರುಗಳಿಗೆ 'ಕೇಶಪ್ರವಾಸ' ಕೈಗೊಂಡರು. ಅಲ್ಲಿ ಕೇಶಮುಂಡನ ಆಯಿತೆ ಎಂದೊಡೆ... ಅಕಟಕಟಾ ಏನೆಂಬನು ವಿಪ್ರಕೇಶಿಗಳ ಸಂಕಟವಾ.....

ಸವಿತಾ ಸಮಾಜದ ಸಂಘಟನೆ ಪ್ರಬಲವಾಗಿತ್ತು. ಬ್ರಾಹ್ಮಣರ ಸಮುದಾಯದ ಭವನದ ಘಟನೆ ಎಲ್ಲೆಡೆಗೂ



ಹರಡಿತ್ತು. ಅಂಗಡಿಯೊಳಕ್ಕೆ ಕಾಲಿಡಲು ಅಡ್ಡಿ ಇರಲಿಲ್ಲ. ಸೇವೆಯ ಸರದಿ ಬಂದಾಗ, ಹೊಸ ಮುಖ ಅಲ್ಲವಾ, 'ನಿಮ್ಮದು ಯಾವ ಊರು' ಎಂಬ ಪ್ರಶ್ನೆ ಬೀಳುತ್ತಿತ್ತು. ಅವರು ಆ ಊರಿನ ಹೆಸರು ಹೇಳಿದರೆ ಕೇಳುತ್ತಿದ್ದರು– 'ನಿಮ್ಮ ಜಾತಿ ಯಾವುದು?' ಬ್ರಾಹ್ಮಣರು ಎಂದರೆ ಅಲ್ಲಿಗೆ ಮುಗಿಯಿತು. 'ನಿಮ್ಮ ಊರಿನ ಬ್ರಾಹ್ಮಣರಿಗೆ ಸೇವೆ ಇಲ್ಲ!'

ಪರ ಊರುಗಳಿಗೆ ಹೋಗಿ 'ಕೇಶ ಭಂಗ' ಮಾಡಿಸಿಕೊಂಡು ಬಂದ ಯುವಕರು ತಾಳ್ಮೆಗೆಟ್ಟರು. ಮುಖಂಡರ ವಿರುದ್ಧ ಆರೋಪಗಳ ಸುರಿಮಳೆಗೈದರು. ಇಂತಹ ಮತಿಗೆಟ್ಟ ಯುವಕರ ಆಕ್ರೋಶಕ್ಕೆ ಬಲಿಯಾದ ಮುಖಂಡರು ತಲೆ ಮರೆಸಿಕೊಳ್ಳುವ ತಂತ್ರ ಬಳಸಿದರಾದರೂ ತಮ್ಮ ಸಾಂಪ್ರದಾಯಿಕ ನಿಲುವನ್ನು ಬದಲಿಸಲು ಮನಸ್ಸು ಮಾಡಲಿಲ್ಲ. ಇದ್ದಕ್ಕಿದ್ದಂತೆ ಕೆಲವರಿಗೆ ಸಹಕಾರಿ ತತ್ವದಲ್ಲಿ ನಂಬಿಕೆ ತಲೆದೋರಿತು. ಪರಸ್ಪರ ಕ್ಷೌರ ಮಾಡಿಕೊಳ್ಳಲು ಚಿಂತಿಸಿದರು.

ಈ ಸಹಕಾರಿ ಕೇಶಮುಂಡನ ಕಾರ್ಯ ಮುಂದುವರೆಯುತ್ತಿತ್ತೇನೋ..... ಆದರೆ.....

ಮಗಳ ಮನೆಗೆಂದು ಒಂದಿದ್ದವರ ಕಣ್ಣಿಗೆ..... ಸದ್ಗುಣ ಸಂಪನ್ನನೂ, ವಿಪ್ರೋತ್ತಮನೂ ಎಂದೇ ಪರಿಗಣಿಸಿದ್ದ ತಮ್ಮ ಅಳಿಯ ದೇವರು.... ಪೂಜಾ ಕೈಂಕರ್ಯಗಳನ್ನು ಎಸಗಬೇಕಾಗಿದ್ದ ಪವಿತ್ರ ಕೈಗಳಲ್ಲಿ ಹಜಾಮರ ಕತ್ತಿ ಕತ್ತರಿ ಹಿಡಿದಿರುವುದನ್ನು ಕಂಡು ಕಂಗಾಲಾದರು. ವೇದವಿದ್ಯಾ ಪಾರಂಗತರಾದ ತಾವು ಹಜಾಮನನ್ನು ಅಳಿಯನನ್ನಾಗಿ ಪಡೆಯಬೇಕಾಯಿತಲ್ಲಾ ಎಂದು ಕೊರಗಿದರು. ಇಂತಹ ಧರ್ಮಬಾಹಿರನ ಮನೆಯ ನೆರಳೂ ತಮಗೆ ಬೀಳಬಾರದೆಂದೂ, ಇದರಿಂದ ರೌರವ ನರಕ ಪ್ರಾಪ್ತಿಯಾಗುವುದೆಂದೂ ಎಣಿಸಿದರು. ನರಕಸದೃಶ ಆದ ಇಂತಹ ಮನೆಯಲ್ಲಿ ಒಂದು ಗಳಿಗೆಯೂ ಇರಬಾರದೆಂದು ಮಗಳಿಗೆ ಆಜ್ಞಾಪಿಸಿ ಅವಳನ್ನು ಹೊರಡಿಸಿಕೊಂಡು ನಡೆದರು.

ಪತಿಯೇ ಪರದೈವ ಎಂದು ಭಾವಿಸಿ ತೌರುಮನೆಗೆ ಹೋಗದೆ ಉಳಿದ ಪತಿಯವರದ್ದು ಇನ್ನೂ ಚಿಂತಾಜನಕ ಆಗಿತ್ತು. ಈ ಪತಿವ್ರತೆಯರು ಮುಟ್ಟಿದರೆ ಮುನಿ ಆಗಿದ್ದರು. ಗಂಡ ಮುಟ್ಟಿದರೆ 'ಥೂ ಅಸಹ್ಯ' ಎಂದು ಹೇಸಿಗೆ ತುಳಿದಂತಾಡುತ್ತಿದ್ದರು. 'ಯಾಕೆ ಚಿನ್ನ' ಎಂದು ಮನ ಒಲಿಸುವ ಮಾತುಗಳನ್ನಾಡಿದರೆ 'ನಿಮ್ಮ ಜೊತೆ ಮಲಗಿದರೆ ಕ್ಷೌರಿಕನ ಜೊತೆ ಮಲಗಿದ ಹಾಗಾಗುತ್ತೆ' ಎಂದು ವ್ಯಾಕುಲಗೀತೆ ಹಾಡುವರು!

ಕಂಗೆಟ್ಟ ವಿಪ್ರ ಸಮಾಜ ಇಂತೆಲ್ಲ ಕಷ್ಟಗಳಿಗೂ ಕಾರಣೀಭೂತವಾದ ಸವಿತಾ ಸಮಾಜದ ಎದುರು ಸೇಡು ತೀರಿಸಿಕೊಳ್ಳಲು 'ನಿಮ್ಮ ಪೌರೋಹಿತ್ಯಕ್ಕೆ ನಾವು ಬರಲ್ಲ' ಎಂಬ ನಿರ್ಧಾರ ಪ್ರಕಟಿಸಲಿದ್ದಾರಂತೆ. ನೋಡಬೇಕು. ಮಂತ್ರ ಘೋಷಣೆ ಆಗದೆ ಸೂತಕ ಕಳೆಯುತ್ತದೆಯೆ? ಮದುವೆ ನಡೆಯುತ್ತವೆಯೆ? ಸತ್ತವರು ಸ್ವರ್ಗ ಸೇರುತ್ತಾರೆಯೆ?

ಚಿಮೂ ಎಂಬ ಅಂಗೈ ಹುಣ್ಣು

ಚಿಮೂ ಎಂಬ ಅಂಗೈ ಹುಣ್ಣನ್ನ ಎರಡು ರೀತಿಯಲ್ಲಿ ವಿಶ್ಲೇಷಿಸಬಹುದು. ಒಂದು, ಇದು ಏನೇ ಸಮರ್ಥನೆಗಳನ್ನು ಕೊಟ್ಟರೂ ಸ್ಪಷ್ಟವಾಗಿ ಎದ್ದು ಕಾಣುವ ಹುಣ್ಣು, ಇನ್ನೊಂದು ಇದು ಅಂಗೈಯಲ್ಲಿರುವ ಕಾರಣ ಈ ಹುಣ್ಣಿನ ರೋಗಾಣು ಹಬ್ಬುವ ಸಂಭವ ಅಧಿಕವಾಗಿರುವುದರಿಂದ ಇದು ಅತ್ಯಂತ ಅಪಾಯಕಾರಿ ಹುಣ್ಣು ಕೂಡಾ ಹೌದು.



ನನ್ನದು ಕಳಂಕರಹಿತ ಹಿಂದೂ ಪ್ರೇಮ, ಅನ್ಯಧರ್ಮ ದ್ವೇಷ ನನ್ನಲ್ಲಿಲ್ಲ ಎಂದು ಮಾಜಿ ಸಂಶೋಧಕ ಚಿಮೂರವರು ಪ್ರಜಾವಾಣಿಯಲ್ಲಿ ದೈನೇಸಿಯಂತೆ ಅಲವತ್ತುಕೊಂಡಿದ್ದಾರೆ. ಅವರ ಈ ಗೋಳಿನ ಆರಂಭದಲ್ಲೇ –'ವಿಚಲಿತನಾಗಿಲ್ಲ' ಹಾಗೂ ಇದನ್ನ ಗಂಭೀರವಾಗಿ ಪರಿಗಣಿಸದಿದ್ದರೂ ಎಂಬಂತ ಜಾರುವಿಕೆಯ ಮಾತುಗಳನ್ನಾಡಿ ತನ್ನ ಬಗೆಗಿನ ಚಂಪಾರ ಮಾತಿನಿಂದ ತಾನೆಷ್ಟು ವಿಚಲಿತನಾಗಿದ್ದೇನೆಂಬುದನ್ನು ಎತ್ತಿ ತೋರಿಸಿದ್ದಾರೆ.

ಪ್ರತಿಯೊಬ್ಬ ವ್ಯಕ್ತಿಯೂ ಆತ ಬೆಳೆದ ಹಿನ್ನೆಲೆ, ಅನುಭವ ಇತ್ಯಾದಿಗಳಿಗನುಸಾರವಾಗಿ ಯಾವುದೋ ಒಂದು ಸಿದ್ಧಾಂತದ ಪರ ವಾಲುವುದು ಸಹಜ. ಇದರಲ್ಲಿ ತಪ್ಪೇನೂ ಇಲ್ಲ, ಆದರೆ ಇದು ಹಿಟ್ಲರ್, ಠಾಕ್ರೆ, ಮುತಾಲಿಕ್‌ನಂತವರ ಮಟ್ಟಕ್ಕೆ ಹೋಗಿ ಸಮಾಜಪೀಡಕವಾಗಿ ಪರಿಣಮಿಸಿದರೆ ಮಾತ್ರ ಅದಕ್ಕೆ ಇಲಾಜು ಬೇಕೇಬೇಕು. ಮುಖ್ಯವಾಗಿ ಒಬ್ಬ ಸಂಶೋಧಕನೆನಿಸಿಕೊಂಡಾತನಂತೂ ಆತ ತನ್ನೆಲ್ಲ ಪೂರ್ವಾಗ್ರಹಗಳನ್ನ ಬದಿಗೊತ್ತಿ ತಟಸ್ಥ ನಿಲುವು ತಾಳದಿದ್ದರೆ ಆತನ ಸಂಶೋಧನಾತ್ಮಕ ವಿಶ್ಲೇಷಣೆಗಳೆಲ್ಲ ಕೇವಲ 'ಸಂಶಯಾತ್ಮಕ' ವಿಶ್ಲೇಷಣೆಗಳಾಗಿ ಕಾಲಾಂತರ ಕೇವಲ ಅಜ್ಞಕತೆಯ ಪಟ್ಟಿಗೆ ಸೇರಿ ಬಿಡುತ್ತವಷ್ಟೆ. ಯಾಕೆಂದರೆ ಸಂಶೋಧಕನೆನಿಸಿಕೊಂಡವ ವಿಷಯದ ಎರಡೂ ಮಗ್ಗುಲುಗಳನ್ನು ಯಾವ ಪೂರ್ವಾಗ್ರಹಗಳಿಲ್ಲದೆ ವಿಶ್ಲೇಷಿಸಬೇಕಾಗುತ್ತದೆ. ನಮ್ಮ ಚಿಮೂ ಅಂತ Someಶೋಧಕರಿಂದ ಇಂತವನ್ನ ನಿರೀಕ್ಷಿಸುವುದು ಕಷ್ಟಸಾಧ್ಯ.

ತಮ್ಮೊಂದಿಗೇನೋ ಹಿಂದೂ ಸಂಘಟನೆಗಳನ್ನ ಸಮರ್ಥಿಸಿಕೊಳ್ಳೋ ಭರದಲ್ಲಿ ನಮ್ಮ ಮಾ.ಸಂ. ಚಿಮೂರವರು ಈ ಸಂಘಟನೆಗಳು ಯಾವತ್ತಿಗೂ ಅನ್ಯಧರ್ಮ ದ್ವೇಷವನ್ನು ಬಿತ್ತಿಲ್ಲ ಎಂದಿದ್ದಾರೆ. ಕಲ್ಲು-ಮಣ್ಣಿನಲ್ಲಿ ಪುರಾತನ ಸಾಕ್ಷಿ ಕುರುಹುಗಳನ್ನು ವಿಶ್ಲೇಷಿಸಬೇಕಾದ ಸಂಶೋಧಕನೊಬ್ಬ ಜನ ಸಾಮಾನ್ಯರಿಗೂ ತಿಳಿದಿರುವ ಪ್ರಸ್ತುತ ವಿಚಾರಗಳ ಬಗ್ಗೆ ಉದ್ದೇಶಪೂರ್ವಕವಾಗಿ ತನ್ನ ಜಾಣ ಕುರುಡನ್ನ ವ್ಯಕ್ತಪಡಿಸುತ್ತಾನೆಂದರೆ ಆತ ಅದಿನ್ನೆಂತಹ ವಿದ್ವಾಂಸ ನಿದ್ದಿರಬಹುದು?


ಅಂಥ ಕಟ್ಟರ್ ಹಿಂದೂತ್ವವಾದಿ ಅಡ್ವಾಣಿಯೇ ಒಮ್ಮೆ 'ಸಂಪೂರ್ಣ ಹಿಂದೂ ರಾಷ್ಟ್ರ ಅಸಾಧ್ಯದ ಮಾತು' ಎಂದಿದ್ದುಂಟು. ಈ ಮಾತಿನ ಹಿನ್ನೆಲೆ (ತೇಪೆ ವ್ಯವಹಾರ) ಏನೇ ಇರಲಿ, ಅದು ವಾಸ್ತವಿಕ ಸಂಗತಿ ಎಂಬುದಂತೂ ಹೌದು.

ಬಹುಸಂಸ್ಕೃತಿಯ, ಅತಿದೊಡ್ಡ ಜನಸಂಖ್ಯೆಯ ಈ ನಾಡಲ್ಲಿ ಯಾವುದೋ ಒಂದು ವಾದವನ್ನ ಏಕಾಏಕಿ ಹೇರಿ ಅಳವಡಿಸುವುದು ಆಗದ ಮಾತು. ಇಂತಹ ಸಂದರ್ಭದಲ್ಲಿ ಬೇಕಿರುವುದು ಸಾಮರಸ್ಯದ ಚಿಂತನೆಯೇ ವಿನಃ ವಿಷಬೀಜ ಬಿತ್ತನೆಯ ಕೆಲಸಗಳಲ್ಲ, ಚಿಮೂರವರು ಇದನ್ನ ಅರ್ಥೈಸಿಕೊಳ್ಳಲಿ. ಚಿಮೂರವರ ಹಿಂದೂತ್ವದ ವಕಾಲತ್ತಿಗೆ ವಿವರಣೆಗಳೇನೂ ಬೇಕಿಲ್ಲ, ಇದು ಮೊದಲೇ ಹೇಳಿದಂತೆ ಅಂಗೈ ಹುಣ್ಣಿನಷ್ಟೇ ಸ್ಪಷ್ಟ.

-ರವಿ ಪುತ್ತೂರ, ದ.ಕ.

ಹೊಗಳಿಕೆ ತೆಗಳಿಕೆ

ಪ್ರತಿವರ್ಷ ಮತ್ತೆ ಮತ್ತೆ ದೇವರಿಗೆ ಮದುವೆ ಯಾಕೆ? ದೇವರಿಗೆ ಕಾಮ-ಮೋಹ ಎಲ್ಲಿದೆ? ದೇವರಿಗೆ ಎರಡು-ಮೂರು ಹೆಂಡಿರೇಕೆ ಬೇಕು? ಜಗತ್ತಿನ ಬೇರಾವ ಧರ್ಮಗಳಲ್ಲೂ ಇಲ್ಲದ ದೇವರ ಮದುವೆ ಭಾರತದಲ್ಲಿ ಮಾತ್ರ ಏಕೆ? ಎಂದೆಲ್ಲಾ ಕೇಳುವ ವಿಚಾರವಾದಿಗಳ ಮಾತು ಇರಲಿ, ಕಣ್ಣೆದುರೇ ಇದ್ದ ತನ್ನ ಸ್ವಂತ ಮದುವೆಯನ್ನು ಉಳಿಸಿಕೊಳ್ಳಲಾಗದ ಉಡುಪಿಯ ರಘುಪತಿ ಭಟ್ಟನು ಕಣ್ಣಿಗೆ ಕಾಣದ ದೇವರ ಮದುವೆ ಮಾಡಲು ಹೊರಟಿದ್ದು ಬಹಳ ಹಾಸ್ಯಾಸ್ಪದ (ಲಂಕೇಶ್ 2-6-2010).



ಉದಯ ಟಿವಿಯ ಅಲರ್ಟ್ ರಾಘು ಎಸ್ಕೇಪ್ ಆಗಿ ತಲೆಮರೆಸಿಕೊಂಡಿದ್ದೇನೋ ನಿಜ. ಟಾಪ್-ಸೀಕ್ರೆಟ್ ಪೊಲೀಸ್ ಸಿಡಿ ಕದ್ದದ್ದರಿಂದ ಪೊಲೀಸರು ಅವನ ಹಿಂದೆ ಬಿದ್ದಿದ್ದಾರೆ. ಆದರೆ ಈ ಟಾಪ್ ಸೀಕ್ರೆಟ್ ಸಿಡಿ ಕಳವಿನ ಕೇಸ್ ಪೊಲೀಸ್ ಇಲಾಖೆಗೆ ಸಂಬಂಧಪಡದೇ ಒಬ್ಬ ಸಾಮಾನ್ಯ ವ್ಯಕ್ತಿಗೆ ಅಥವಾ ಖಾಸಗಿ ಕಂಪೆನಿಗೆ ಸಂಬಂಧಪಟ್ಟಿದ್ದರೆ ಪೊಲೀಸರು ಹೀಗೆ ಈ ರೋಲ್‌ಕಾಲ್ ರಾಘವನ ಹಿಂದೆ ಬೀಳುತ್ತಿದ್ದರೇ?

ನಮ್ಮೂರಲ್ಲಿ ಕಳೆದ ವರ್ಷ ಜೂನ್‌ನಲ್ಲಿ ಒಬ್ಬ ಉದ್ಯಮಿಯ ಕೊಲೆಯಾಗಿತ್ತು. ಆದರೆ ಕೊಲೆಗಡುಕರಿಂದ ಹಣ ಪಡೆದು ಟಿವಿ ಒಂಭತ್ತರ ರಿಪೋರ್ಟರ್ ಅದು 'ಆತ್ಮಹತ್ಯೆ' ಎಂದು ವಾರೆಂಟ್ ಪ್ರೋಗ್ರಾಮ್‌ನಲ್ಲಿ ಬಿತ್ತರಿಸಿದ. ನಂತರ ಅದು ಆತ್ಮಹತ್ಯೆಯಲ್ಲ, ಕೊಲೆಯೆಂದು ಸಿದ್ಧವಾದ ನಂತರವಾದರೂ ಜರ್ನಲಿಸಂನ ಎಥಿಕ್ಸ್ ಪ್ರಕಾರ ಈ ಪ್ರಕರಣವನ್ನು ಮತ್ತೆ ಬಿತ್ತರಿಸುವ ಮೂಲಕ ಆ ಚಾನೆಲ್‌ನವರು ತಮ್ಮ ರಿಪೋರ್ಟರ್ ಮಾಡಿದ ತಪ್ಪನ್ನು ಸರಿಪಡಿಸಬೇಕಿತ್ತು, ಆದರೆ ಸರಿಪಡಿಸಲು ಹೋದರೆ ತಮ್ಮದೇ ರಿಪೋರ್ಟರ್‌ನ ಬಂಡವಾಳ ಹೊರಬೀಳುತ್ತದೆಂದು ಹೆದರಿ, ಅದು ಆತ್ಮಹತ್ಯೆಯಲ್ಲ ಕೊಲೆ ಎಂಬ ಸತ್ಯವನ್ನು, ಸಂಬಂಧಪಟ್ಟವರ ಕೋರಿಕೆಯನ್ನೂ ಕಡೆಗಣಿಸಿ ಆ ಟಿವಿ ಚಾನೆಲ್‌ನವರು ಮರುಪ್ರಸಾರ ಮಾಡಲೇ ಇಲ್ಲ, ಇದು 'ರೋಲ್‌ಕಾಲ್ ಪತ್ರಕರ್ತರು' ಮಾಧ್ಯಮದ ಮೇಲೆ ಹೊಂದಿರುವ ಹಿಡಿತವನ್ನು ತೋರಿಸುತ್ತದೆ. ಗಣಿರೆಡ್ಡಿಗಳಂತಹ ಮಹಾಘಟಿಂಗರನ್ನೂ ಹೊಗಳುವಂತಹ ಘಟಿಂಗ ಪತ್ರಕರ್ತರನ್ನು ನಾವು ದಿನಾ ನೋಡುತ್ತಿದ್ದೇವೆ.

-ಅನಿಲ್ ಕುಮಾರ್ ಶೆಟ್ಟಿ, ಬೆಳಗಾವಿ

'ತಾವು ಬರೆದದ್ದೆಲ್ಲಾ ಬಂಗಾರ' ಎಂಬ ಭ್ರಮೆಯಲ್ಲಿದ್ದ ...ದ ಸಿನಿಮಾ ಸಂಭಾಷಣಾಕಾರರಿಗೆ ವಕೀಲರು ಚುರುಕು ...ಟ್ಟಿಸಿದ್ದಾರೆ.


...ದುನಿಯಾ ವಿಜಿ ನಟಿಸಿರುವ 'ಶಂಕರ್ ಐಪಿಎಸ್' ...ದಲ್ಲಿ ವಕೀಲರೆಲ್ಲಾ ಬ್ರೋಕರ್‌ಗಳು, ಕೋರ್ಟು ಎಂದರೆ ...ರುಕಟ್ಟೆ ಎಂಬಂತಾ ಡೈಲಾಗುಗಳನ್ನು ಬಳಸಿದ್ದರು. ನಾಯಕ ... ವಿಜಿ ಈ ಪ್ರಾಸಬದ್ಧ ಡೈಲಾಗುಗಳನ್ನು ಉದುರಿಸುತ್ತಿದ್ದರೆ ...ಮಾನಿ ಪ್ರೇಕ್ಷಕರ ಶಿಳ್ಳೆಯೋ ಶಿಳ್ಳೆ.

...ಆದರೆ ಈ ಸಂಭಾಷಣೆಯು ಕೋರ್ಟು ಮತ್ತು ...ಲರನ್ನು ಕೆರಳಿಸಿತು. ಹೀಗಾಗಿ ಬೆಂಗಳೂರು ವಕೀಲರ ... ಮತ್ತು ಇನ್ನಿತರ ವಕೀಲರು ಸೇರಿ ಈ ಚಿತ್ರವನ್ನು ...ಷಡಿಸಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದರು. ಈ ...ಯ ವಿಚಾರಣೆ ನಡೆಸಿದ ನ್ಯಾಯಾಧೀಶ ಸತೀಶ್ ... "ಚಿತ್ರವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿ" ಎಂದು ...ಂತರ ಆದೇಶ ಹೊರಡಿಸಿದರು.

ಹೀಗಾಗಿ ಮೊನ್ನೆ ಶನಿವಾರ ಮತ್ತು ಭಾನುವಾರದಂದು 'ಶಂಕರ್ ಐಪಿಎಸ್' ಸಿನಿಮಾ ಪ್ರದರ್ಶನ ಬ್ಯಾನ್ ಆಗಿತ್ತು. ಸಿನಿಮಾ ಬಿಡುಗಡೆಯಾಗಿ ಏನೋ ಒಂಚೂರು ಕಲೆಕ್ಷನ್ ಆಗೋ ಸಂದರ್ಭದಲ್ಲಿ, ಅದೂ ವಾರಾಂತ್ಯದಲ್ಲಿ ಸಿನಿಮಾ ರದ್ದಾಗಿದ್ದರಿಂದ ನಿರ್ಮಾಪಕ ಕೊಬ್ಬರಿ ಮಂಜು ತಲೆ ಮೇಲೆ ಕೈ ಹೊತ್ತು ಕುಳಿತುಬಿಟ್ಟರು. ಮಂಜು ಪರಿಸ್ಥಿತಿ ಅಕ್ಷರಶಃ 'ಆಯ್ಕೊಂಡು ತಿನ್ನೋ ಕೋಳಿ ಕಾಲು ಮುರೀತು' ಎನ್ನುವಂತಾಗಿತ್ತು. ಯಾಕೆಂದರೆ, ಮಂಜು ನಿರ್ಮಿಸಿದ ಯಾವ ಚಿತ್ರವೂ ಇತ್ತೀಚೆಗೆ ತಲೆಯೆತ್ತುತ್ತಿಲ್ಲ. ಗಾಂಧಿನಗರ ಕೊಬ್ರಿಯನ್ನು 'ಐರನ್ ಲೆಗ್ಗು' ಎಂದು ಛೇಡಿಸುತ್ತಿದೆ.

ಇದ್ದುದ್ದರಲ್ಲಿ 'ಶಂಕರ್ ಐ.ಪಿ.ಎಸ್.' ಬಿಡುಗಡೆಗೆ ಮುನ್ನವೇ ಮಂಜು ಕೈಗೆ ಒಂದಿಷ್ಟು ಲಾಭ ತಂದುಕೊಟ್ಟಿದೆ. ಈ ಸಿನಿಮಾ ಐವತ್ತು ದಿನಗಳಾದರೂ ಥಿಯೇಟರಿನಲ್ಲಿ ನಿಂತರೆ, ಮಂಜು ಅವರ ಆರ್ಥಿಕ ಬಾಧೆ ಒಂದಿಷ್ಟಾದರೂ ಬಗೆಹರಿಯಲಿದೆ.


ಬ್ಯಾನು-ಬಿಡುಗಡೆ



ಒಂದು ಸಿನಿಮಾ ಬಿಡುಗಡೆಯಾದ ಮೇಲೆ ಅದರ ಪ್ರದರ್ಶನ ರದ್ದಾಗುತ್ತದೆ ಎಂದರೆ ಸದ್ಯದ ಸೆನ್ಸಾರ್ ಮಂಡಳಿಯ ವೈಫಲ್ಯ ಎದ್ದು ಕಾಣುತ್ತದೆ. ಒಂದು ವೇಳೆ ಈ ಡೈಲಾಗುಗಳು ಸೆನ್ಸಾರ್‌ನಲ್ಲೇ ಫಿಲ್ಟರ್ ಆಗಿದ್ದಲ್ಲಿ, ಥಿಯೇಟರಿಗೆ ಬಂದ ಸಿನಿಮಾ ರದ್ದಾಗುವ ಪ್ರಮೇಯವೇ ಬರುತ್ತಿರಲಿಲ್ಲ.

ಸದ್ಯ ವಕೀಲರು 'ಐಪಿಎಸ್ ಶಂಕರ'ನೊಂದಿಗೆ ರಾಜಿ ಮಾಡಿಕೊಂಡಿರುವುದರಿಂದ ಸಿನಿಮಾ ಪ್ರದರ್ಶನ ಮುಂದುವರೆದಿದೆ. ಆದರೆ ಉಂಟಾದ ನಷ್ಟವನ್ನು ಕೊಡಲು ಯಾರಿಂದ ತಾನೆ ಸಾಧ್ಯ? ಮೊದಲೇ ಅಗಾಧ ನಷ್ಟದಿಂದ ಬಳಲುತ್ತಿರುವ ಕನ್ನಡ ಸಿನಿಮಾಗಳು ಹೀಗೆ ಪ್ರದರ್ಶನ ಸ್ಥಗಿತಗೊಂಡರೆ ಏನು ಗತಿ? ●

...6 ತಿಂಗಳಲ್ಲಿ ...ಮೂರು ಕೋಟಿ ...ಖಲಾಸ್!



2010ರಲ್ಲಿ 'ಪೊಲೀಸ್ ಕ್ವಾಟ್ರಸ್' ಚಿತ್ರದಿಂದ ಹಿಡಿದು ಈ ವಾರ ...ಕಂಡಿರುವ 'ನನ್ನವನು' ಚಿತ್ರದ ತನಕ 51 ಚಿತ್ರಗಳು ತೆರೆಕಂಡಿವೆ. ಈ ...ವತ್ತೊಂದು ಚಿತ್ರಗಳಿಂದ ಚಿತ್ರರಂಗಕ್ಕೆ ಬರೋಬ್ಬರಿ 100 ಕೋಟಿಗೂ ...ಕವಾದ ನಷ್ಟ ಉಂಟಾಗಿದೆ ಎಂದರೆ ನೀವು ನಂಬಲೇಬೇಕು!

ಈ 51 ಚಿತ್ರಗಳಲ್ಲಿ ನೂರು ದಿನ ಪೂರೈಸಿದ್ದು 'ರಾಮ್' ಮತ್ತು ...ಪ್ತರಕ್ಷಕ' ಎಂಬ ಎರಡು ಚಿತ್ರಗಳು ಮಾತ್ರ. ನಾಲ್ಕೂವರೆ ಕೋಟಿ ...ಜೆಟ್‌ನಲ್ಲಿ ನಿರ್ಮಾಣವಾದ 'ಆಪ್ತರಕ್ಷಕ'ನ ಈವರೆಗಿನ ಕಲೆಕ್ಷನ್ 25 ...ಟಿ ರೂಪಾಯಿಗಳು. ಬೆಂಗಳೂರಿನ ಆರು ಥಿಯೇಟರುಗಳು ಸೇರಿದಂತೆ, ...ರ್ನಾಟಕದ ಒಟ್ಟು 21 ಚಿತ್ರಮಂದಿರಗಳಲ್ಲಿ 'ರಕ್ಷಕ' ಶತದಿನ ಪೂರೈಸಿದ್ದಾನೆ. ...ಮ್' ಚಿತ್ರ ಕೂಡಾ ಹಾಕಿದ ಬಂಡವಾಳದ ಮೇಲೆ ...ರ್ಮಾಪಕರಿಗೆ ಒಂದಷ್ಟು ಲಾಭ ತಂದುಕೊಟ್ಟಿದೆ.



...ಇನ್ನು ನಿರ್ಮಾಪಕರನ್ನು ಉಳಿಸಿರುವುದು ಕೂಡ ಎರಡೇ ...ತ್ರಗಳು. ಪುನೀತ್ ಅಭಿನಯದ 'ಪೃಥ್ವಿ' ಮತ್ತು ದುನಿಯಾ ... ಅಭಿನಯದ 'ಶಂಕರ್ ಐಪಿಎಸ್'. ಎರಡೂವರೆ ಕೋಟಿ ...ಜೆಟ್‌ನಲ್ಲಿ ನಿರ್ಮಾಣವಾದ 'ಶಂಕರ್' ಮೂರೂವರೆ ಕೋಟಿಗೆ ...ವ್ಯಾಪಾರವಾಗಿದೆ. ಐದು ಕೋಟಿ ವೆಚ್ಚದಲ್ಲಿ ಬಂದ 'ಪೃಥ್ವಿ' ...ಟೂವರೆ ಕೋಟಿ ವಹಿವಾಟು ನಡೆಸಿದೆ. ಈ ಎರಡು ...ತ್ರಗಳು ನಿರ್ಮಾಪಕನನ್ನು ಸೇಫ್ ಮಾಡಿವೆಯಾದರೂ ...ರಕರು ಮಾತ್ರ ಅಂಬೋ ಎನ್ನುತ್ತಿದ್ದಾರೆ.



...ಗೋಲ್ಡನ್ ಸ್ಟಾರ್ ಗಣೇಶನ ಮಾರ್ಕೆಟ್ ಅದ್ಯಾವ ಪರಿ ...ತಾಳ ಸೇರಿದೆಯೆಂದರೆ, ಈತನ 'ಉಲ್ಲಾಸ ಉತ್ಸಾಹ'ದ ...ಟ್ಟು ಗಳಿಕೆ ಬರೀ ಎಪ್ಪತ್ತೈದು ಲಕ್ಷ. ಈ ಚಿತ್ರದಿಂದ ...ರ್ಮಾಪಕನಿಗೆ ಏನಿಲ್ಲವೆಂದರೂ ಒಂದೂವರೆ ಕೋಟಿ ಕೈಬಿಟ್ಟು ...ಹೋಗಿದೆ. 2.40 ಕೋಟಿ ವೆಚ್ಚದಲ್ಲಿ ಒಂದೇ ದಿನದಲ್ಲಿ ...ಪೂರ್ಣಗೊಂಡ 'ಸುಗ್ರೀವ'ನಿಂದಾಗಿ ನಿರ್ಮಾಪಕ ಅಣಾಜಿಗೆ ... ಲಕ್ಷ ಲುಕ್ಸಾನಾಗಿದೆ. ಸುದೀಪ್ ನಿರ್ದೇಶಿಸಿ-ನಟಿಸಿದ ...ಜಸ್ಟ್ ಮಾತ್ ಮಾತಲ್ಲಿ' ಚಿತ್ರಕ್ಕೆ ಮೂರೂವರೆ ಕೋಟಿ ...ಬಂಡವಾಳ ಹೂಡಲಾಗಿತ್ತು. ಈ ಚಿತ್ರದ ನಿರ್ಮಾಪಕ ...ರೇಗೌಡ ಈಗ ಒಂದೂವರೆಕೋಟಿಯ ಲಾಸು ತೋರಿಸಿ, ...ದೀಪ್‌ನಿಂದ ಮತ್ತೊಂದು ಚಿತ್ರವನ್ನು ಮಾಡಿಸಿಕೊಳ್ಳುತ್ತಿದ್ದಾರೆ. ...ದರ್ಶನ್ ನಟಿಸಿದ್ದ 'ಪೊರ್ಕಿ', ರತ್ನಜನ 'ಪ್ರೇಮಿಸಂ', ...ವರ್ಧನ್‌ರ 'ಸ್ಕೂಲ್ ಮಾಸ್ಟರ್', ಚೈತನ್ಯ ನಿರ್ದೇಶಿಸಿದ್ದ ...ರ್ಯಕಾಂತಿ' ಮುಂತಾದ ಚಿತ್ರಗಳು ತಲಾ ಎರಡೆರಡು ...ಕೋಟಿ ನುಂಗಿ ನೀರು ಕುಡಿದಿವೆ. ಮೊನ್ನೆಯಷ್ಟೇ ತೆರೆಕಂಡ ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ನೂರೂ ಜನ್ಮಕು' ಚಿತ್ರವಂತೂ ಬಾಕ್ಸಾಫೀಸ್‌ನಲ್ಲಿ ಹೀನಾಯವಾಗಿ ನೆಲಕಚ್ಚಿದೆ. ಈ ಚಿತ್ರದ ಪ್ರಿಂಟು, ಪಬ್ಲಿಸಿಟಿ ಮತ್ತು ಹೀರೋ ಸಂತೋಷ್‌ನ ಪಾರ್ಟಿಗಳಿಗೆ ಖರ್ಚು ಮಾಡಿರುವ ದೊಡ್ಡು ಕೂಡಾ ವಾಪಾಸು ಬರುವ ಸೂಚನೆಗಳಿಲ್ಲ. ನಾಗತಿಹಳ್ಳಿಯ ನಿರ್ದೇಶನವನ್ನು ನೋಡಿದ ಜನ 'ಇದು ನಾಗ್ತಿಯ ಕೊನೇ ಹೆರಿಗೆಯಂತೆ ಕಾಣುತ್ತಿದೆ' ಎಂದು ಗೇಲಿ ಮಾಡುತ್ತಿದ್ದಾರೆ.



ನರಸಿಂಹ ರಾಜು ಕುಟುಂಬದಿಂದ ಮೂಡಿಬಂದ 'ಜುಗಾರಿ' ಮತ್ತು ಹೊಸಬರ ತಂಡದ 'ದಿಲ್ದಾರ'ದಂಥ ಚಿತ್ರಗಳನ್ನು ನೋಡಿದ ಪ್ರತಿಯೊಬ್ಬರಿಂದಲೂ ಉತ್ತಮ ಪ್ರತಿಕ್ರಿಯೆ ಬಂದರೂ ಈ ಸಿನೆಮಾಗಳು ನಿರ್ಮಾಪಕರಿಗೆ ತಲಾ ಐವತ್ತು ಲಕ್ಷದ ನಷ್ಟ ಉಂಟುಮಾಡಿವೆ. ದಯಾಳ್ ನಿರ್ದೇಶನದ 'ಹರಿಕಥೆ'ಯದ್ದೂ ಇದೇ ಕಥೆ.

ಮೂರು ವಾರಗಳ ಹಿಂದೆ ಬಿಡುಗಡೆ ಆದ 'ನಾನು ನನ್ನ ಕನಸು' ಚಿತ್ರದ್ದು ಮತ್ತೊಂದು ಟ್ರಾಜಿಡಿ. ಈ ಚಿತ್ರಕ್ಕೆ ಪ್ರಕಾಶ್ ರೈ ತಮ್ಮ ನಟನೆ, ನಿರ್ದೇಶನ, ಚಿತ್ರಕಥೆ ಇತ್ಯಾದಿಗಳಿಗೆ ಯಾವ ಸಂಭಾವನೆಯನ್ನೂ ಪಡೆದಿರಲಿಲ್ಲ, ಮಿಕ್ಕ ಖರ್ಚನ್ನು ಬಿ. ಸುರೇಶ್ ವಹಿಸಿಕೊಂಡಿದ್ದರು. ಆದರೆ ಸಿನಿಮಾ ಕಲೆಕ್ಷನ್ ನೀರಸವಾಗೇ ಮುಂದುವರೆದಿದೆ. 'ನಮ್ಮ ಚಿತ್ರವನ್ನು ಯಾವ ಥಿಯೇಟರಿನಲ್ಲಿ ರಿಲೀಸ್ ಮಾಡಿದರೂ ಓಡುತ್ತೆ' ಎಂಬ ಅತಿಯಾದ ಆತ್ಮವಿಶ್ವಾಸದಿಂದ 'ಭೂಮಿಕಾ' ಥಿಯೇಟರಿನಲ್ಲಿ ಇದನ್ನು ಬಿಡುಗಡೆ ಮಾಡಲಾಗಿತ್ತು. ಆದರೆ 'ಕನಸು' ತಂಡದ ಓವರ್ ಕಾನ್ಫಿಡೆನ್ಸು ಈಗ ಕೈಕೊಟ್ಟಿದೆ. ಮೊನ್ನೆ ಭಾನುವಾರದ ಎರಡು ಶೋಗಳು ಹೌಸ್‌ಫುಲ್ ಆಗಿದ್ದು ಬಿಟ್ಟರೆ, ಬೇರೆ ಯಾವ ಪ್ರದರ್ಶನಗಳಿಗೂ ಜನ ತುಂಬುತ್ತಲೇ ಇಲ್ಲ.


ಬಾಕ್ಸಾಫೀಸ್ ಕಿಂಗ್‌ಗಳೆನಿಸಿಕೊಂಡಿದ್ದ ದರ್ಶನ್, ಸುದೀಪ್ ಮತ್ತು ಶಿವರಾಜ್‌ಕುಮಾರ್‌ರ ಚಿತ್ರಗಳು ಈ ಬಾರಿ ಹಿಂದೆಂದಿಗಿಂತಲೂ ಕೆಟ್ಟ ರೀತಿಯಲ್ಲಿ ನಷ್ಟಕ್ಕೀಡಾಗಿವೆ.

ದುರಂತವೆಂದರೆ, ತಮ್ಮ ಚಿತ್ರಗಳು ಹೀನಾಯವಾಗಿ ಧರೆಗುರುಳುತ್ತಿದ್ದರೂ ಶಿವರಾಜ್‌ಕುಮಾರ್ ಆಗಲಿ, ದರ್ಶನ್ ಆಗಲಿ ತಮ್ಮ ಸಂಭಾವನೆಯಲ್ಲಿ ನಯಾ ಪೈಸೆಯನ್ನೂ ಇಳಿಸಿಲ್ಲ. ಇವತ್ತಿಗೂ ಕೂಡಾ ದರ್ಶನ್ ಒಂದು ಕೋಟಿ ಎಂಟು ಲಕ್ಷದ ಸಂಭಾವನೆಯನ್ನೇ ಕೇಳುತ್ತಿದ್ದಾರೆ.

ಕನ್ನಡದಲ್ಲಿ ಬಿಡುಗಡೆಗೊಂಡ ಚಿತ್ರಗಳೆಲ್ಲಾ ಮುಖವನ್ನು ನೆಲಕ್ಕೆ ಮಾಡುತ್ತಿದ್ದರೆ, ತೆಲುಗು-ತಮಿಳು ಚಿತ್ರರಂಗದಲ್ಲಿ ಕಡಿಮೆ ಬಜೆಟ್‌ನ ಚಿತ್ರಗಳಿಗೂ ಈಗ ಸುಗ್ಗಿ. ತಮಿಳಿನಲ್ಲಿ ನಿರ್ಮಾಣವಾಗಿರುವ 'ಗೋರಿಪಾಳ್ಯಂ', 'ನಾಡೋಡಿಗಳ್', 'ಸುಬ್ರಮಣ್ಯಪುರಂ', 'ಅಂಗಾಡಿ ತೇರು', 'ರೇಣುಗೊಂಡ'ದಂಥ ಸಣ್ಣ ಬಜೆಟ್ ಚಿತ್ರಗಳೂ ಕೋಟಿಕೋಟಿ ಬಾಚುತ್ತಿವೆ. ಸೂರ್ಯ ಅಭಿನಯದ 'ಸಿಂಗಂ' ಚಿತ್ರವಂತೂ ಕರ್ನಾಟಕದಲ್ಲೂ ಹಣ ಕೊಳ್ಳೆ ಹೊಡೆಯುತ್ತಿದೆ..

ತೆಲುಗಿನ 'ಸಿಂಹ'

ತೆಲುಗಿನಲ್ಲಿ ಬಿಡುಗಡೆಗೊಂಡು ಹೊಸ ಸಂಚಲನ ಮೂಡಿಸಿರುವ 'ಸಿಂಹ'ನ ಕಲೆಕ್ಷನ್ ದಿನೇದಿನೇ ಏರುತ್ತಲೇ ಇದೆ. ಇತ್ತೀಚಿನ ವರ್ಷಗಳಲ್ಲಿ ನಂದಮೂರಿ ಬಾಲಕೃಷ್ಣನ ಇಮೇಜೇ ಕುಂದುಹೋಗಿತ್ತು. ಆದರೆ ಈಗ 'ಸಿಂಹ'ದ ಭರ್ಜರಿ ಯಶಸ್ಸು ಆತನನ್ನು ಮತ್ತೆ ಜನಪ್ರಿಯತೆಯ ಉತ್ತುಂಗಕ್ಕೆ ಕೊಂಡೊಯ್ದಿದೆ. ಈ ಚಿತ್ರದ ಕಲೆಕ್ಷನ್ ನೋಡಿದರೆ ನಿಜಕ್ಕೂ ಗಾಬರಿ ಹುಟ್ಟುತ್ತದೆ. ಮೊದಲ ವಾರವೇ ಹನ್ನೆರಡು ಕೋಟಿ ಕಲೆಕ್ಷನ್ ಪಡೆದ 'ಸಿಂಹ' ಆನಂತರದ ಮೂರು ವಾರಗಳಲ್ಲಿ ಬರೋಬ್ಬರಿ ಮೂವತ್ತೈದು ಕೋಟಿ ಗಳಿಸಿದೆ. 'ಮಗಧೀರ' ಚಿತ್ರದ ಗಳಿಕೆಯನ್ನೂ ಬ್ರೇಕ್ ಮಾಡಿರುವ 'ಸಿಂಹ' ಒಟ್ಟಾರೆ 73 ವರ್ಷದ ತೆಲುಗು ಚಿತ್ರರಂಗದಲ್ಲಿ ಮೈಲಿಗಲ್ಲು ಸೃಷ್ಟಿಸಿದೆ.



ಶೀನು ಬೋಯಿಪಾಟಿ ನಿರ್ದೇಶನದ, ರಾಯಲಸೀಮಾದ ಕಥಾ ಹಂದರವಿರುವ ಈ ಚಿತ್ರದ ಕಥೆ ಅಷ್ಟಕ್ಕಷ್ಟೇ ಆದರೂ, ನಯನತಾರಾ ಮತ್ತು ನಮಿತಾರ ಜಿಂಗಿಲಾಲಾ ಕುಣಿತ ಮತ್ತು ಡೈಲಾಗುಗಳನ್ನು ಚಪ್ಪರಿಸಿಕೊಂಡು ನೋಡಲು ಜನ ಮುಗಿಬೀಳುತ್ತಿದ್ದಾರೆ.

ಹೀಗಾಗಿ ಖ್ಯಾತ ನಿರ್ದೇಶಕ ದಾಸರಿನಾರಾಯಣ ರಾವ್ ನಿರ್ದೇಶನದ 150ನೇ ಚಿತ್ರ ಮತ್ತು ಪೂರಿ ಜಗನ್ನಾಥ್ ನಿರ್ದೇಶಿಸಲಿರುವ 'ಪರಮವೀರ ಚಕ್ರ' ಸಿನಿಮಾಗಳಿಗೂ ಬಾಲಕೃಷ್ಣನೇ ಆಯ್ಕೆಯಾಗಿದ್ದಾನೆ.

ಕರ್ನಾಟಕದಲ್ಲಿ ಕೂಡಾ ಈಗ 'ಸಿಂಹ'ನ ಅಲೆ ಎದ್ದಿದೆ. ಬಿಡುಗಡೆಗೊಂಡ ಎಲ್ಲಾ ಏರಿಯಾಗಳಲ್ಲೂ ಅದ್ದೂರಿ ಗಳಿಕೆ ಕಾಣುತ್ತಿದೆ.

● ಅರುಣ್ ಕುಮಾರ್.ಜಿ
arunodayagc@gmail.com



ಪ್ರಚಾರ ವಾಣಿ ಪ್ರಶಸ್ತಿ

...ಚಿತ್ರರಂಗದಲ್ಲಿ ಒಂದರ ಹಿಂದೆ ಒಂದು ಸಿನಿಮಾಗಳು ಸೆಟ್ಟೇರುತ್ತವೆ, ಬಿಡುಗಡೆಯಾಗುತ್ತವೆ, ಈ ರಂಗೀನ್ ...ಮಾದಲ್ಲಿ ಹತ್ತಾರು ಬಗೆಯ ಕಲರ್‌ಫುಲ್ ಘಟನೆಗಳು ನಡೆಯುತ್ತಲೇ ಇರುತ್ತವೆ. ಈ ವಿಚಾರಗಳನ್ನು ಸಿನಿಮಾ ...ರ್ತರು ತಂತಮ್ಮ ಪತ್ರಿಕೆಗಳಲ್ಲಿ ಬರೆದು ಜನರಿಗೆ ತಲುಪಿಸುತ್ತಾರೆ.

...ಆದರೆ, ಈ ಪತ್ರಕರ್ತರು ಮತ್ತು ಸಿನಿಮಾ ಮಂದಿ ಮಧ್ಯೆ ಒಂದಷ್ಟು ಜನ ಸೇತುವೆಯಂತೆ ಕೆಲಸ ಮಾಡುತ್ತಾರೆ. ...ೇ ಸಿನಿಮಾ ಪ್ರಚಾರಕರ್ತರು.

...ವರ್ಷಕ್ಕೆ ನೂರಾರು ಚಿತ್ರಗಳು ಬಿಡುಗಡೆಯಾಗುವ ಕನ್ನಡ ಚಿತ್ರರಂಗದಲ್ಲಿ ಇರುವುದು ಒಟ್ಟು ಆರೇ ಜನ ...ರೋಗಳು. ಇಲ್ಲಿ ನಿರ್ಮಾಣವಾಗುವ ಸಿನಿಮಾಗಳನ್ನು ತಮ್ಮತಮ್ಮ ಸಂಪರ್ಕ, ಅರ್ಹತೆಗೆ ತಕ್ಕಂತೆ ಹಂಚಿಕೊಂಡು, ... ಪ್ರಚಾರವನ್ನು ಒದಗಿಸುವುದು ಇವರ ಕೆಲಸ.

...ಕನ್ನಡ ಚಿತ್ರರಂಗಕ್ಕೆ ಮೊಟ್ಟಮೊದಲ ಬಾರಿಗೆ 'ಶ್ರೀ ರಾಘವೇಂದ್ರ ಚಿತ್ರವಾಣಿ' ಆರಂಭಿಸಿ 'ಪ್ರಚಾರಕರ್ತ' ಎಂಬ ...ಹೆಸ್ರು ಹುಟ್ಟು ಹಾಕಿದವರೇ ಡಿ.ವಿ. ಸುಧೀಂದ್ರ. ಸುಮಾರು ಆರುನೂರು ಚಿತ್ರಗಳಿಗೆ ಪ್ರಚಾರ ಒದಗಿಸಿದ್ದ ಸುಧೀಂದ್ರ ಈಗ್ಗೆ ನಾಲ್ಕು ವರ್ಷಗಳ ಹಿಂದಷ್ಟೇ ಕಣ್ಮುಚ್ಚಿದರು. ಅಖಂಡ ಚಿತ್ರರಂಗ ಮತ್ತು ಅದರ ಒಳ-ಹೊರಹುಗಳನ್ನು ತಮ್ಮ ತಲೆಯಲ್ಲಿ ಹುದುಗಿಸಿಟ್ಟುಕೊಂಡಿದ್ದ ಸುಧೀಂದ್ರ ನಿಧನರಾದಾಗ ಇಡೀ ಚಿತ್ರೋದ್ಯಮವೇ ಮಂಕು ಬಡಿಸಿಕೊಂಡಂತಾಗಿತ್ತು.

ಆದರೆ ಅವರ ಅಗಲಿಕೆಯ ನಂತರ ಅವರ ಚಿಕ್ಕಪ್ಪನ ಮಕ್ಕಳಾದ ವೆಂಕಟೇಶ್, ವಾಸು ಮತ್ತು ಅವರ ಪುತ್ರ ಸುನೀಲ್ ಮೂವರೂ ಸೇರಿ ಸುಧೀಂದ್ರರ ಪ್ರಚಾರದ ಕೆಲಸವನ್ನು ಮುಂದುವರೆಸಿಕೊಂಡು ಬಂದಿದ್ದಾರೆ.



'ನಿರ್ಮಾಪಕ ಮತ್ತು ಪತ್ರಕರ್ತ ನನ್ನ ಎರಡು ಕಣ್ಣುಗಳಿದ್ದಂತೆ' ಎನ್ನುತ್ತಿದ್ದ ಸುಧೀಂದ್ರ ಸಿನಿಮಾ ಮತ್ತು ಪತ್ರಿಕೋದ್ಯಮದಲ್ಲಿ ಹೆಸರು ಮಾಡಿದ ಸಾಧಕರಿಗೆ ವರ್ಷಕ್ಕೊಮ್ಮೆ ಪ್ರಶಸ್ತಿ ನೀಡುತ್ತಾ ಬಂದಿದ್ದರು. ಈಗಲೂ ಪ್ರಶಸ್ತಿ ವಿತರಣೆ ಮುಂದುವರೆಯುತ್ತಾ ಬಂದಿದೆ. ಮೊನ್ನೆ ದಿನ ನಡೆದ ಈ ಸಮಾರಂಭದಲ್ಲಿ ಕಳೆದ ಮೂವತ್ತೂರು ವರ್ಷಗಳಿಂದ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸುತ್ತಾ ಬಂದಿರುವ ಮತ್ತು 'ಲಂಕೇಶ್'ನ ಹಿರಿಯ ಛಾಯಾಗ್ರಾಹಕ ನಾಗೇಶ್ ಕುಮಾರ್ ಸೇರಿದಂತೆ ಪತ್ರಕರ್ತರು ಮತ್ತು ಸಿನಿಮಾ ಮಂದಿ ಒಳಗೊಂಡಂತೆ 13 ಜನ ಸನ್ಮಾನವನ್ನು ಸ್ವೀಕರಿಸಿದರು.

'ಚಿತ್ರವಾಣಿ'ಯ ಈ ಪ್ರಶಸ್ತಿಗಳು ಸಾಧಕರ ನಡಿಗೆಗೆ ಮತ್ತಷ್ಟು ಹುರುಪು ನೀಡಲಿ... ●

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 16 -06-2010 RNI No. KARKAN2005/14048



ನೂರೆಂಟು ಜನರ ಐತಲಕಡಿ

'ಐತಲಕಡಿ' ಚಿತ್ರ ಈ ವಾರ ತೆರಕಾಣಲಿದೆ.

ಈ ಸಿನಿಮಾ ಕನ್ನಡ ಚಿತ್ರರಂಗದಲ್ಲಿ ನಡೆದಿರುವ ಒಂದು ಹೊಸ ಪ್ರಯೋಗ. ಇದನ್ನು ಪ್ರಯೋಗ ಎಂದು ಕರೆಯುವುದಕ್ಕಿಂತಲೂ ಇದು ಕನ್ನಡ ಚಿತ್ರರಂಗದ ಒಗ್ಗಟ್ಟಿನ ಸಂಕೇತವಾಗಿ ಮೂಡಿಬಂದಿದೆ ಎಂದೇ ಹೇಳಬಹುದು.

ಈ ಚಿತ್ರದ ನಾಯಕನಟರು ನೂರೆಂಟು ಕೇಜಿಯ ಬುಲೆಟ್ ಪ್ರಕಾಶ್ ಮತ್ತು ನೂರು ಕೇಜಿಯ ರಂಗಾಯಣ ರಘು. ಇವರೇ ಇಡೀ ಚಿತ್ರದುದ್ದಕ್ಕೂ ನಮ್ಮನ್ನ ನಕ್ಕು ನಗಿಸಲಿದ್ದಾರೆ. ಜಿ.ಕೃಷ್ಣ ಅವರು ಛಾಯಾಗ್ರಹಣದ ಜೊತೆಗೆ ನಿರ್ದೇಶನದ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡಿದ್ದಾರೆ. 'ದಯಾನಾಯಕ್' ಚಿತ್ರವನ್ನು ನಿರ್ಮಿಸಿ ಸೋಲುಕಂಡ ರಾಮಮೂರ್ತಿ, 'ಗಂಗಾಯಮುನಾ'ದಲ್ಲಿ ಕೈ ಸುಟ್ಟುಕೊಂಡ ಬೋಜರಾಜ ರೈ ಬುಲೆಟ್ ಪ್ರಕಾಶ್, ಕೃಷ್ಣ ಮೊದಲಾದ ಸೋತವರೆಲ್ಲಾ ಒಟ್ಟು ಸೇರಿ ಈ ಚಿತ್ರ ನಿರ್ಮಿಸಿದ್ದಾರೆ. ಸೋತವರ ಈ ಚಿತ್ರ ಕುಂಟುತ್ತಿರುವ ಕನ್ನಡ ಚಿತ್ರರಂಗಕ್ಕೆ ಹೊಸ ಚೇತನ ನೀಡಬಹುದೆಂದೇ ಗಾಂಧಿನಗರದಲ್ಲಿ ಮಾತು ಕೇಳಿಬರುತ್ತಿದೆ.

ಇದಕ್ಕೆಲ್ಲಾ ಮುಖ್ಯ ಕಾರಣ ಈ ಚಿತ್ರದ ನಿರ್ಮಾಪಕರಿಗೆ ಉದ್ಯಮದ ನಾಯಕ ನಟರು ಚಾಚಿದಂತಹ ಸ್ನೇಹಹಸ್ತ. ನವರಸ ನಾಯಕ ಜಗ್ಗೇಶ್, ಸಿಕ್ಸ್‌ಪ್ಯಾಕ್ ಖ್ಯಾತಿಯ ವಿಜಯ್, ಕಿಚ್ಚ ಸುದೀಪ್, ವಿಜಯರಾಘವೇಂದ್ರ ಮೊದಲಾದವರು ಈ ಚಿತ್ರದಲ್ಲಿ ಗೌರವ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಬಹುಶಃ 'ಪ್ರೇಮಲೋಕ'ದ ನಂತರ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಪ್ರಮುಖ ನಟರು ಸ್ನೇಹಕ್ಕಾಗಿ ನಟಿಸುತ್ತಿರುವುದು ಇದೇ ಮೊದಲ ಬಾರಿ ಎನ್ನಬಹುದು. ಇದರ ಇನ್ನೊಂದು ವಿಶೇಷವೆಂದರೆ ಸುಮಾರು 80ಕ್ಕೂ ಅಧಿಕ ಪೋಷಕ, ಹಾಸ್ಯನಟರು, ಅಶಕ್ತ ಕಲಾವಿದರು ಕೂಡಾ ಈ ಚಿತ್ರದಲ್ಲಿ ನಟಿಸಿರುವುದು. ಅಂದರೆ ಬರೋಬ್ಬರಿ ನೂರೆಂಟು ಕಲಾವಿದರು, ಅರ್ಥಾತ್ ಅರ್ಧ ಚಿತ್ರರಂಗ 'ಐತಲಕಡಿ'ಯಲ್ಲಿ ಕಾಣಿಸಿಕೊಂಡಿದೆ.

ಈ ಚಿತ್ರದಲ್ಲಿ ಸಾಹಸಸಿಂಹ ವಿಷ್ಣುವರ್ಧನ್ ಕೂಡ ನಟಿಸಲು ಒಪ್ಪಿಕೊಂಡಿದ್ದರಂತೆ. ಆ ಬಗ್ಗೆ ಮಾತನಾಡಲು ನಿರ್ದೇಶಕ ಜಿ.ಜಿ.ಕೃಷ್ಣ ಬೆಳಗ್ಗಿನ ಜಾವವೇ ಅವರ ಮನೆಗೆ ಹೋದಾಗ ವಿಷ್ಣು ಅವರ ಪಾರ್ಥೀವ ಶರೀರವನ್ನು ಹೊತ್ತುಕೊಂಡ ಬಂದ ಆಂಬ್ಯುಲೆನ್ಸ್ ಮನೆಯೆದುರು ನಿಂತಿತಂತೆ. ಆ ಕ್ಷಣದ ತನಕ ವಿಷ್ಣು ಸಾವಿನ ಸುದ್ದಿ ತಿಳಿಯದಿದ್ದ ನಿರ್ದೇಶಕ ಕೃಷ್ಣ ದಿಗ್ಭ್ರಾಂತರಾದರಂತೆ! ಆ ದೃಶ್ಯವನ್ನು ನೋಡಲು, ನಂಬಲೂ ಅವರಿಂದ ಸಾಧ್ಯವಾಗದೆ ಕೂಡಲೇ ಮನೆಗೆ ಹೋಗಿ ಮಲಗಿಬಿಟ್ಟರಂತೆ. ಅದನ್ನು ಹೇಳುವಾಗ ಕೃಷ್ಣ ನಡುಗುತ್ತಿದ್ದರು. ಕೊನೆಗೆ, ವಿಷ್ಣು ಮಾಡಬೇಕಿದ್ದ ಪಾತ್ರವನ್ನು ಬೇರಾರಿಂದಲೂ ಮಾಡಿಸಿದರೆ ಸರಿಹೋಗಲ್ಲ ಎಂಬ ತೀರ್ಮಾನಕ್ಕೆ ಬಂದ ಕೃಷ್ಣ ಅವರ ಪಾತ್ರವನ್ನು ಚಿತ್ರೀಕರಿಸದೇ ಹಾಗೆಯೇ ಬಿಟ್ಟಿದ್ದಾರಂತೆ. "ಅದೊಂದು ಕೊರಗು ನನ್ನನ್ನು ಕಾಡುತ್ತಿದೆ. ಅದರ ಹೊರತಾಗಿ ಉಳಿದೆ ಲ್ಲವೂ ನಾವು ಅಂದುಕೊಂಡಂತೆ ಆಗಿದೆ" ಎಂದು ಕೃಷ್ಣ ಹೇಳಿದರು.

ಚಿತ್ರರಂಗ ದಿನದಿಂದ ದಿನಕ್ಕೆ ಪಾತಾಳಕ್ಕೆ ಕುಸಿಯುತ್ತಿರುವಾಗ ಇಂತಹ ಚಿತ್ರ ಗೆದ್ದು ಗಾಂಧಿನಗರದಲ್ಲಿ ಉಲ್ಲಾಸದ ವಾತಾವರಣ ಸೃಷ್ಟಿಸಿದರೂ ಆಶ್ಚರ್ಯವಿಲ್ಲ. ಕಲಾವಿದರು ಸ್ನೇಹಹಸ್ತ ಚಾಚಿದಂತೆ ಪ್ರೇಕ್ಷಕ ಮಹಾಪ್ರಭು ಕೂಡಾ ತಮ್ಮ ಸ್ನೇಹಹಸ್ತವನ್ನು 'ಐತಲಕಡಿ' ಕಡೆ ಚಾಚಿಯಾರೇ?

ಕ್ರೇಜಿಸ್ಟಾರ್ ಕನಸಿನ ಮಾತು...



ಕೆಲವರ ಹೆಸರಿಗೂ, ಜನ ಅವರಿಗೆ ಕೊಡುವ ಬಿರುದು ಬಾವಲಿಗಳಿಗೂ ಒಂದಿಷ್ಟೂ ಸಂಬಂಧವೇ ಇರುವುದಿಲ್ಲ. ಆದರೆ ಕ್ರೇಜಿಸ್ಟಾರ್ ರವಿಚಂದ್ರನ್ ವಿಷಯದಲ್ಲಿ ಮಾತ್ರ ಇದು ಅನ್ವಯಿಸುವುದಿಲ್ಲ. ಕ್ರೇಜಿಸ್ಟಾರ್, ಕನಸುಗಾರ, ಹಠವಾದಿ, ಏಕಾಂಗಿ.... ಮುಂತಾದವುಗಳು ಅವರ ಸಿನಿಮಾಗಳ ಹೆಸರುಗಳೂ ಹೌದು, ಅವರಿಗೆ ಸಲ್ಲುವ ಬಿರುದುಗಳೂ ಹೌದು. ಜೊತೆಗೆ ಇವೆಲ್ಲವೂ ಅವರ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವಂತಹವು.

"ನೀವು ಅಹಂಕಾರಿಯಂತೇ ಹೌದಾ?" ಎಂದು ರವಿ ಅವರನ್ನು ಕೇಳಿದರೆ ಅವರು ಯಾವುದೇ ಮುಲಾಜಿಲ್ಲದೇ "ಹೌದು" ಎನ್ನುತ್ತಾರೆ! ಆದರೆ "ನನ್ನ ಅಹಂಕಾರವೇನಿದ್ದರೂ ಒಳ್ಳೆ ಸಿನಿಮಾ ಮಾಡುವುದಕಷ್ಟೇ ಸೀಮಿತವಾಗಿರುತ್ತದೆಯೇ ವಿನಃ ಬೇರೇನೂ ಅಲ್ಲ. ಆ ಕಾರಣಕ್ಕಾಗಿ ಸುಮಾರು ಶೇ. 70ರಷ್ಟು ಚಿತ್ರೀಕರಣಗೊಂಡ 'ಮಂಜಿನ ಹನಿ' ಚಿತ್ರದ ನಿರ್ಮಾಪಕ ಸಂದೇಶ್ ನಾಗರಾಜ್‌ರವರಿಗೆ ಒಂದು ಕೋಟಿ ರೂ. ಲಾಭ ಕೊಟ್ಟು, ಅದನ್ನು ನಾನೇ ಖರೀದಿಸಿ ಈಗ ಮತ್ತೆ ಆ ಚಿತ್ರದ ಮೇಲೆ ಕೋಟಿ ಕೋಟಿ ಸುರಿಯುತ್ತಿದ್ದೇನೆ. ಇದನ್ನು ನೀವು ಅಹಂಕಾರ ಅಥವಾ ಹಠವಾದಿ ಅಥವಾ ಕನಸುಗಾರ... ಎಂದು ಹೇಗೆ ಬೇಕಾದರೂ ಅರ್ಥೈಸಿಕೊಳ್ಳಬಹುದು. ನೀವು ಅಹಂಕಾರ ಎಂದರೆ ಅದನ್ನು ಒಪ್ಪುತ್ತೇನೆ. ಹಠವಾದಿ ಎಂದರೂ ನನಗೇನೂ ಬೇಸರವಿಲ್ಲ ಅಥವಾ ಮಹಾ ಕನಸುಗಾರ ಎಂದು ಕರೆದರೂ ಅದಕ್ಕೂ ನನ್ನದೇನೂ ಅಭ್ಯಂತರವಿಲ್ಲ..." ಎನ್ನುತ್ತಾರೆ ರವಿ.

ಇಂತಹ ಮಾತುಕತೆಗೆ ಮುನ್ನುಡಿ ಹಾಕಿದ್ದು ಮೊನ್ನೆ ನಡೆದ ಅವರ 50ನೇ ಹುಟ್ಟುಹಬ್ಬದ ಸಮಾರಂಭ. ಹುಟ್ಟುಹಬ್ಬಕ್ಕೆ ಎರಡು ದಿನಗಳ ಮುನ್ನವೇ ಸಿನಿಮಾ ಪತ್ರಕರ್ತರೆಲ್ಲ ಅವರ ಮನೆಗೆ ತೆರಳಿ ಶುಭ ಹಾರೈಸಿದಾಗ "ನನ್ನ ತಂದೆಯವರು ತೋರಿಸಿದ ಪ್ರೀತಿಯನ್ನು ಈ ಉದ್ಯಮದಲ್ಲಿ ಮೊದಲ ಬಾರಿಗೆ ಪತ್ರಕರ್ತರಾದ ನೀವು ತೋರಿಸಿದ್ದೀರಿ" ಎಂದು ಭಾವುಕರಾದರು. ಕ್ರೇಜಿಸ್ಟಾರ್ ಜೊತೆ ನಡೆದ ಮಾತುಮಂಥನದಲ್ಲಿ ಅನೇಕ ವಿಷಯಗಳು ಅವರ ಬತ್ತಳಿಕೆಯಿಂದ ಹೊರಬಂದವು.

"ಕಳೆದ ಮೂರು ವರ್ಷಗಳಿಂದ ನಾನು ಚಿತ್ರ ಮಾಡಿಲ್ಲ. ನನ್ನ ಯಾವ ಚಿತ್ರವೂ ಬಿಡುಗಡೆಯಾಗಿಲ್ಲ ಎಂದು ನನ್ನ ಪತ್ನಿ ಹೇಳಿದಾಗ ನನಗೇ ಆಶ್ಚರ್ಯವಾಯಿತು. ಆದರೆ ನಾನು ಮಾತ್ರ ಮೂರು ವರ್ಷಗಳಿಂದ ಕೆಲಸವಿಲ್ಲದೇ ಕುಳಿತುಕೊಂಡಿಲ್ಲ. ಅನೇಕ ಕಥೆಗಳನ್ನು ಸಿದ್ಧ ಮಾಡಿದ್ದೇನೆ. ಅದರಲ್ಲೂ ಆಶೆ, ಒಂದ್ನಿಮಿಷ ಮತ್ತು ಅಂತರ್ಯಾಮಿ ಎಂಬ ಮೂರು ಚಿತ್ರಗಳ ಕಥೆಯನ್ನು ಮತ್ತು ಸಂಭಾಷಣೆಯನ್ನು ಬರೆದು ಮುಗಿಸಿದ್ದೇನೆ."

"'ಹೂ' ಚಿತ್ರದ ಭವಿಷ್ಯ?" ಎಂದಾಕ್ಷಣ ನಿರ್ಮಾಪಕ ದಿನೇಶ್ ಗಾಂಧಿಯತ್ತ ಬೆರಳು ಮಾಡಿದರು. "ಆತ ನನ್ನಲ್ಲಿಗೆ ಬಂದಾಗ ಜೋಲು ಮುಖ ಹಾಕಿಕೊಂಡು ಬಂದಿದ್ದ. ಈಗ ನೋಡಿ ಎಷ್ಟು ರಂಗುರಂಗಾಗಿ ನಗುತ್ತಿದ್ದಾನೆ." ಅಷ್ಟೊತ್ತಿಗೆ ಮಧ್ಯ ಪ್ರವೇಶಿಸಿದ ದಿನೇಶ್ ಗಾಂಧಿ "ಈ ಚಿತ್ರದ ಎಲ್ಲಾ ವಲಯದ ಹಕ್ಕುಗಳು ಮಾರಾಟವಾಗಿವೆ. ಸದ್ಯದಲ್ಲೇ ಮುಂದಿನ ಚಿತ್ರದ ಮುಂಗಡ ಹಣವನ್ನು ರವಿ ಸಾರ್‌ಗೆ ಕೊಡುತ್ತೇನೆ" ಎಂದು ಘೋಷಿಸಿದರು.

ಆಗ ಕ್ರೇಜಿಸ್ಟಾರ್ "ಅನೇಕರು 'ಹೂ' ಚಿತ್ರದ ಫಲಿತಾಂಶಕ್ಕಾಗಿ ಕಾಯುತ್ತಿದ್ದಾರೆ. ಚಿತ್ರ ಗೆದ್ದರೆ ಅಡ್ವಾನ್ಸ್ ಕೊಡುತ್ತಾರೆ. ಸೋತರೆ ನಮ್ಮ ಮನೆ ಕಡೆ ತಿರುಗಿಯೂ ಬರಲ್ಲ. ಈತನೂ ಅಷ್ಟೇ (ದಿನೇಶ್ ಗಾಂಧಿಯನ್ನು ತೋರಿಸುತಾ) ಚಿತ್ರದ ಫಲಿತಾಂಶಕ್ಕಾಗಿ ಕಾಯುತ್ತಿದ್ದಾನೆ" ಎಂದರು.

"ನೀವು ಗಾಂಧಿನಗರದಲ್ಲಿ ಏಕಾಂಗಿನಾ?" ಎಂದರೆ, "ನನ್ನ ಕಾಲ್‌ಶೀಟ್ ಕೇಳಬೇಕೆಂದು ನಾನೇನು ಕಾದು ಕುಳಿತಿಲ್ಲ ಅಥವಾ ಅವರುಗಳು ಕೇಳುತ್ತಾರೆಂಬ ಭ್ರಮೆಯೂ ನನಗಿಲ್ಲ. ನಾನು ನನ್ನ ಸ್ವಂತ ಬ್ಯಾನರ್‌ನಲ್ಲಿ ಮೂರು ಚಿತ್ರಗಳನ್ನು ಮಾಡಲು ರೆಡಿಯಾಗಿದ್ದೇನೆ. ಈ ಮೂರು ಚಿತ್ರಗಳು ವಿಶ್ವ ಮಟ್ಟದ್ದು. ಪ್ರಪಂಚದ ಯಾವುದೇ ಭಾಷೆಗೆ ಡಬ್ ಮಾಡಬಲ್ಲ ಚಿತ್ರಗಳಾಗಿವೆ" ಎನ್ನುತ್ತಾ ತಮ್ಮ ಮುಂದಿನ ಎರಡು ವರ್ಷದ ಕಾರ್ಯ ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲಿದರು.

"ನಿಮ್ಮ ಮಗನ ಆರಂಗೇಟ್ರಂ ಯಾವಾಗ?"

"ಆತ ಈಗ ಹಾಡು, ಕುಣಿತ, ವ್ಯಾಯಾಮ ಎಲ್ಲಾ ಕಲಿಯುತ್ತಿದ್ದಾನೆ. ಆತನಿಗೆ ಸಿನಿಮಾದ ಎಲ್ಲಾ ವಿಭಾಗಗಳ ಜ್ಞಾನವಿರಬೇಕು ಎಂಬುದು ನನ್ನಾಸೆ. ಹೀಗಾಗಿ ನನ್ನ ಮುಂದಿನ ಚಿತ್ರದಲ್ಲಿ ಅಸೋಸಿಯೇಟ್ ಡೈರೆಕ್ಟರಾಗಿ ಕೆಲಸ ಮಾಡಲಿದ್ದಾನೆ. ನನ್ನ ಕನಸಿನ ಮೂರು ಚಿತ್ರಗಳು ಮುಗಿದ ನಂತರವಷ್ಟೇ ಆತನ ಚಿತ್ರ ಕೈಗೆತ್ತಿಕೊಳ್ಳುತ್ತೇನೆ. ಯಾಕೆಂದರೆ ಆತನ ಚಿತ್ರ ಕೈಗೆತ್ತಿಕೊಂಡಾಗ ನನಗೆ ಬೇರ್‍ಯಾವುದೇ ಡಿಸ್ಟರ್ಬೆನ್ಸ್ ಇರಬಾರದು."

"ನಿಮ್ಮ 50ನೇ ವರ್ಷದ ಜನ್ಮ ದಿನದ ನಿರ್ಣಯಗಳು?"

"ನೋಡಿ, ನನಗೂ ಮರಸುತ್ತಿ ಬೇಜಾರಾಗಿದೆ. ಹೀಗಾಗಿ ನನ್ನ ವಯಸ್ಸಿಗೆ ಅನುಗುಣವಾದ ರೀತಿಯಲ್ಲಿ ನನ್ನ ಪಾತ್ರ ಪೋಷಣೆ ಮಾಡುತ್ತೇನೆ. ಹೀಗಾಗಿ ಇನ್ನು ಮುಂದಿನ ದಿನಗಳಲ್ಲಿ ನೀವು ಡಿಫರೆಂಟ್ ರವಿಚಂದ್ರನನ್ನು ನೋಡಬಹುದು."

ಹೀಗೆ ಪ್ರೇಮಲೋಕದ ಸರದಾರ ರವಿಚಂದ್ರನ್ ತನ್ನ ಸದ್ಯದ ವೃತ್ತಿಜೀವನದ ಪರಿಸ್ಥಿತಿ ಮತ್ತು ಭವಿಷ್ಯದ ಕನಸುಗಳ ಬಗ್ಗೆ ಎಂದಿನಂತೆ ನೇರ ಮಾತುಗಳಲ್ಲಿ ಪತ್ರಕರ್ತರೊಂದಿಗೆ ಹಂಚಿಕೊಂಡರು.

• ಶೆಣೈ

shenoylankesh@gmail.com

ಲೂಸ್ ಜೊತೆಯಾದ ಜಗಳಗಂಟಿ...



'ಜಗಳಗಂಟಿ ನಾಯಕಿ' ಎಂದೇ ಪಾಪ್ಯುಲಾರಿಟಿ ಪಡೆದಿರುವ ರಮ್ಯಾ ಮತ್ತು ಲೂಸ್ ಮಾದ ಯೋಗೇಶ್ ಈಗ ಒಂದೇ ಚಿತ್ರದಲ್ಲಿ ನಟಿಸುತ್ತಿದ್ದಾರೆ.

"ಒಂದಲ್ಲಾ ಒಂದು ದಿನ ರಮ್ಯಾ ಜೊತೆ ನಟಿಸಬೇಕು" ಎಂಬುದೇ ಲೂಸ್ ಮಾದನ ಪರಮ ಗುರಿಯಾಗಿತ್ತು. ಈಗದು ಈಡೇರುವ ಹಂತದಲ್ಲಿದೆ. ವರ್ಷದ ಹಿಂದೆ ಯೋಗಿ 'ಹಾಯಾಬೂಸ್' ಎಂಬ ದುಬಾರಿ ಬೈಕ್ ತೆಗೆದುಕೊಂಡಾಗ ಅದರ ಮೇಲೆ "ಮೊದಲು ರಮ್ಯಾನೇ ಕೂತ್ಕೋಬೇಕು" ಎಂದು ಹಠ ಹಿಡಿದು, ಆಕೆಯನ್ನು ಕೂರಿಸಿಕೊಂಡು ಹಿರಿಹಿರಿ ಹಿಗ್ಗಿದ್ದ. ಲೂಸ್ ಮಾದ ತನ್ನ ರೂಮಿನ ತುಂಬೆಲ್ಲಾ ರಮ್ಯಾಳ ಫೋಟೋವನ್ನೇ ಅಂಟಿಸಿಕೊಂಡಿದ್ದಾನೆ. ಲೂಸ್‌ಗೆ ರಮ್ಯಾನ ಕಂಡರೆ ಆ ಪಾಟಿ ಇಷ್ಟ.

ಅಷ್ಟೊತ್ತಿಗಾಗಲೇ 'ಪುಂಡ' ಮತ್ತು 'ಸಿದ್ಲಿಂಗು' ಚಿತ್ರಗಳಲ್ಲಿ ಇವರಿಬ್ಬರೂ ಒಟ್ಟಿಗೆ ಕಾಣಿಸಿಕೊಳ್ಳಬೇಕಿತ್ತು, ಆದರೆ ರಮ್ಯಾ ಮೇಡಂ ಅವರ ಡೇಟ್ಸು ಹೊಂದಿಕೆಯಾಗಿರಲಿಲ್ಲ. "ನಿನಗೂ ರಮ್ಯಾಗೂ ಜೋಡಿ ಸರಿಹೋಗಲ್ಲ" ಎಂದು ಯಾರಾದರೂ ಹೇಳಿದರೆ, ಅವರ ಮೇಲೆ ಎಗರೆಗರಿ ಬೀಳುತ್ತಿದ್ದ ಯೋಗಿ ಈಗ ಫುಲ್ ಖುಷ್..! ವಜ್ರೇಶ್ವರಿ ಸಂಸ್ಥೆಯಲ್ಲಿ ಬಹಳಷ್ಟು ಚಿತ್ರಗಳಿಗೆ ಅಸೋಸಿಯೇಟ್ ಆಗಿ ಕೆಲಸ ಮಾಡಿರುವ ಪ್ರಕಾಶ್ ತಮ್ಮ ಹೊಸ ಚಿತ್ರದಲ್ಲಿ ಲೂಸ್-ರಮ್ಯಾ ಇಬ್ಬರನ್ನೂ ಒಂದುಗೂಡಿಸಿದ್ದಾರೆ. ಈ ಸಿನಿಮಾದ ಹೆಸರು ಕೂಡಾ 'ಲೂಸ್‌ಮಾದ'!!



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44